ಸಾಹಿತ್ಯ ದಾಸೋಹ ೨೧೨

ಏಪ್ರಿಲ್ ೨೦೨೩

೦೮/೦೪/೨೦೨೩ರಂದು ನಡೆದ ದಾಸೋಹದ ಬರಹಗಳ ಸಂಕಲನ








ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ
ಸಾಹಿತ್ಯ ದಾಸೋಹ ೨೧೨
ಪ್ರಸ್ತುತಿ ಪಡಿಸಿದವರ ಪಟ್ಟಿ

೧. ಶಾಂತಿವಾಸು



ಹೆಸರು ಬೇಕೇ ಇದಕೆ??

ಅದೇ ಇರಬಹುದೇ???
ಅನ್ನಲು ನಾಲಿಗೆಯನ್ನೆಬ್ಬಿಸಿದ ತುಡಿತವದು,
ತನ್ನುಪದ್ರವದ ನೋವೆಂಬುದೊಪ್ಪದುದು,
ಅದೇ ಇರಬಹುದೇ??

ಅದೇ ಇದು, ಅದೇ ಇದು...
ನಾನೆಂಬುದ ಸದಾ ಜಾಗೃತವಿರಿಸಿ,
ಅಲ್ಪ ಸಂಧಾನಕೆ ಮಣಿಯದೆ,
ನುಡಿಗಳ ಬುಸುಟುವುದದೇ ಇದು...

ಅದೇ ಅಡ್ಡಿ...
ಬಾಗಿದವರನಿನ್ನಷ್ಟು ಬಾಗಿಸಿ,
ಕೂಡಿ ಬಾಳುವರ ಕಳೆದುಕೊಂಬಂಜಿಕೆ ಇರದೆ ಮೆರೆವುದೇ ಪದ್ಧತಿಯಾಗಲು,
ಬೆರೆತು ಬಾಳಲದುವೇ ಅಡ್ಡಿ...

ಅದೇ ನಿಜ...
ಪರದೆಯಲಿ ಸಮಯ ಸಾಧಕತನದಾಟ,
ಆತ್ಮವಿಮರ್ಶೆಗೆಡೆಗೊಡದ ನಿಜದೊಡನೆ ಕಾದಾಟ...

ಅದಿದ್ದರೆ ಒಂಟಿ...
ಅಪ್ಪಿದವರನ್ನಾಕ್ರಮಿಸಿ ನೋವ ಬಡಿಸಿ, ಕುಲವ ಬಿಡಿಸಿ,
ದೂರ ಬಹು ದೂರ ಜೊತೆಯಾಗಿ ಸಾಗುವ ಸಂತಸದ ಹಾದಿಯಲಿ,
ಅದೊಂದಿದ್ದರೆ ತಾನೇ ಒಂಟಿ...

ಅದೇ ಅಂತ್ಯ...
ನೀನೆನ್ನಲೊಪ್ಪದ ಅಂತರಾತ್ಮ, ಅದಕ್ಕೊಂದು ಹೆಸರಿರುವುದ ಅರಿಯದೆ,
ದೂರ ಸರಿದವರ ಸೇರಲು ಹಿಂಜರಿತ ಇದು ತರುವ ಅಂತ್ಯವೇ?
ಹೆಸರೇನದಕೆ?

೨. ಜೀವಿ.ಹೆಗಡೆ



ಶಬ್ದೋತ್ಪತ್ತಿ:

ಶಬ್ದಾರ್ಥೌ ಸಹಿತೌ ಕಾವ್ಯಂ ಎನ್ನುವದು ಸಾಹಿತ್ಯದಲ್ಲಿ ಬಹು ಪ್ರಚಾರದಲ್ಲಿರುವ ವಾಕ್ಯ. ಆದರೆ ಹುಟ್ಟಿದ ಶಬ್ದಗಳಿಗೆಲ್ಲಾ ಅರ್ಥ ಇರಲೇ ಬೇಕೆಂದಿಲ್ಲ. 'ಘನಸ್ವನಾದಿ ಸ್ವರಗಳು' ಅರ್ಥ ಶೂನ್ಯವೇ ಸರಿ. ಅರಣ್ಯದಲ್ಲಿ ಬಿದಿರಿನ ಮೂಲಕವಾಗಿ ಹಾದು ಹೋಗುವ ಗಾಳಿಯೂ ಸ್ವರವನ್ನು ಹುಟ್ಟಿಸುತ್ತದೆ. ಪ್ರಾಣಿಗಳ ಕೂಗೂ ಒಂದು ಬಗೆಯ ಶಬ್ದವೇ ಸರಿ.

ಆದರೆ ನಾವು ಸಾಹಿತ್ಯದಲ್ಲಿ 'ಶಬ್ದ' ಎನ್ನುವ ಪದವನ್ನು ಹೇಳುವಾಗ ಅದಕ್ಕೆ ನಿರ್ದಿಷ್ಟವಾದ ಅರ್ಥವನ್ನು ಸೂಚಿಸುತ್ತೇವೆ. ಅರ್ಥವೇ ಇಲ್ಲದಿದ್ದಲ್ಲಿ ಅದು ಶಬ್ದ ಹೇಗಾಗುತ್ತದೆ?. ಶಬ್ದಕ್ಕೆ ಅರ್ಥದ ಸೇರುವಿಕೆ ಹೇಗೆ?.
ಶಬ್ದಾರ್ಥಗಳನ್ನು ಮನುಷ್ಯ ಹೊಂದಿಸಿಕೊಳ್ಳುವ ಕ್ರಮ ಹೇಗೆ?.

ನನ್ನದೊಂದು ಕಿರು ಚಿಂತನೆ.

ಅರ್ಥಪೂರ್ಣವಾದ ಅಕ್ಷರ ಸಮೂಹವೇ ಶಬ್ದ. ಅಕ್ಷರ ಸಮೂಹವಾದ ಲಮಕ ವನ್ನು ಶಬ್ದ ಎನ್ನುವದಿಲ್ಲ. ಕಮಲ ಅಂತ ಜೋಡಣೆಯಾದಾಗ ಮಾತ್ರ ಅದು ಶಬ್ದ. ಪ್ರತಿ ಭಾಷೆಗೂ ಅದರದೇ ಆದ ಶಬ್ದ ಸಂಪತ್ತುಗಳಿರುತ್ತವೆ. ಆ ಶಬ್ದದ ಅಕ್ಷರಗಳು ಮುಗಿದ ಕೂಡಲೇ ಸಂಬಂಧಿತ ಅರ್ಥ ಸ್ಫೋಟಗೊಳ್ಳುತ್ತದೆ (ಇದು ಸ್ಫೋಟವಾದ). ಮೂಲತಃ ಶಬ್ದ ಎನ್ನುವದು ಮೌಖಿಕವಾದದ್ದು. ಕೇವಲ ಶಬ್ದ ಮಾತ್ರವಲ್ಲ ಪೂರ್ತಿ ಭಾಷೆಯೇ ಶಬ್ದ ಮೂಲವಾದದ್ದು. ಎಷ್ಟೋ ಭಾಷೆಗಳು ಲಿಪಿಗಳನ್ನೇ ಹೊಂದದೇ ಕೇವಲ ಮೌಖಿಕವಾಗಿಯೇ ಇರುತ್ತವೆ. ಕೊಂಕಣಿ, ತುಳು, ಕೊಡವ, ಹವ್ಯ ಮುಂತಾದ ಕೆಲವು ಭಾಷೆಗಳು ಸ್ವಂತ ಲಿಪಿಯನ್ನು ಹೊಂದದೇ, ಬರಹಕ್ಕಾಗಿ ಬೇರೆ ಭಾಷೆಯ ಲಿಪಿಯನ್ನು ಅವಲಂಬಿಸುತ್ತವೆ.

ಹಾಗೆ ನೋಡಿದರೆ, ಯಾವ ಭಾಷೆಯನ್ನಾದರೂ ಇನ್ನಾವುದೇ ಭಾಷೆಯ ಲಿಪಿಯಲ್ಲಿ ಬರೆಯಲು ಸಾಧ್ಯವಿದೆ. (ಇಂಗ್ಲೀಷ್ ಶಬ್ದಗಳನ್ನು ಕನ್ನಡ ಲಿಪಿಯಲ್ಲಿಯೂ, ಕನ್ನಡ ಶಬ್ದಗಳನ್ನು ಇಂಗ್ಲೀಷಿನಲ್ಲಿಯೂ, ವಾಟ್ಸಪ್ ಹಾಗೂ ಇತರ ಮಾಧ್ಯಮಗಳಲ್ಲಿ 'ಟೈಪ್' ಮಾಡುವುದನ್ನು ಕಾಣುತ್ತೇವೆ). ಉಚ್ಚರಿಸಲ್ಪಟ್ಟ ಶಬ್ದಗಳನ್ನು ಹಾಗೇ ಯಾವುದೇ ಭಾಷೆಯ ಲಿಪಿಯಲ್ಲಿ ಬರೆಯಲು ಸಾಧ್ಯ.

(ಚೇರ್ ಅಂತ ಬರೆದ ಹಾಗೆ meju ಅಂತಲೂ ಬರೆಯಬಹುದು. ಹಿಂದಿಯ ಭಾಷೆಯದೇ ಆದ ಶಬ್ದಗಳನ್ನು 'ಕ್ಯಾ ಕರನಾ' ಅಥವಾ 'kya karana' ಅಂತಲೂ ಬರೆದು ಕಾವ್ಯ ಪ್ರಯೋಗ ಮಾಡಬಹುದು). ಬಹುಶಃ ಕನ್ನಡ ಲಿಪಿಯೇ ಗುತ್ತಿರದ, ವಿಶೇಷವಾಗಿ ವಿದೇಶದಲ್ಲಿ ವಾಸಿಸುವ ಮಕ್ಕಳು ಕನ್ನಡವನ್ನು ಇಂಗ್ಲೀಷ್ ಲಿಪಿಯಲ್ಲಿ ಬರೆಯುವದನ್ನು ನಾನು ಕಂಡಿದ್ದೇನೆ. (Neenu hegiddiya, oota aayite, ಹೀಗೆ)

ಆದರೆ ಇವೆಲ್ಲಾ ಕಸರತ್ತುಗಳು ವ್ಯವಸ್ಥಿತ ಭಾಷೆಯಾದ ಕನ್ನಡಕ್ಕೆ ಅಸ್ವಾಭಾವಿಕ ಅಂತ ಯಾರೂ ಹೇಳಬಹುದು. ಇದೊಂದು ರೀತಿಯ ಆಭಾಸ. ಪ್ರತಿಯೊಂದು ಅಕ್ಷರಕ್ಕೆ ಸಮರ್ಪಕವಾದ ಲಿಪಿ ಕನ್ನಡದಲ್ಲಿದೆ. ಅಕ್ಷರಗಳು ಹೆಚ್ಚಾದಷ್ಟೂ ಭಾಷಾ ಪ್ರಯೋಗದ ವೈವಿಧ್ಯತೆಗೆ ಅನುಕೂಲವಾಗುತ್ತದೆ. ಬಹುಶಃ ಕನ್ನಡದಲ್ಲಿದ್ದಷ್ಟು ಈ ಅನುಕೂಲ ಬೇರೆ ಭಾಷೆಗಳಿಗಿಲ್ಲ. ಭಾರತೀಯ ಭಾಷೆಗಳು ಪ್ರಭಾವಿತವಾಗಿವೆ ಎಂದು ತಿಳಿದ ಸಂಸ್ಕೃತಕ್ಕಿಂತಲೂ ಹೆಚ್ಚು ಅಕ್ಷರಗಳು, ಕನ್ನಡದಲ್ಲಿರುವದು ಕನ್ನಡಿಗರಿಗೆ ಹೆಮ್ಮೆಯ ವಿಷಯ.

ಲಿಪಿಸಹಿತ ಅಥವಾ ಲಿಪಿರಹಿತ, ಯಾವುದೇ ಭಾಷೆಯಿರಲಿ, ಪ್ರತಿಯೊಂದು ಶಬ್ದಕ್ಕೆ ಪ್ರತ್ಯೇಕವಾದ ಅರ್ಥವಿರುವದು ಗೊತ್ತು. ಮೂಲತಃ ಯಾವ ಪ್ರದೇಶವೇ ಇರಲಿ, ಮಕ್ಕಳು ಭಾಷೆ ಕಲಿಯುವಾಗ ಹಿರಿಯರನ್ನು ಅನುಸರಿಸಿ ಕಲಿಯುತ್ತಾರೆ. ಮೊದ ಮೊದಲು ಮೂಕಾಭಿನಯವೇ ಸೈ. ಬಾ, ಹೋಗು ಅಂತ ಸಂಜ್ಞೆ ಮಾಡಿ ಹೇಳುವಾಗ ಸಂಜ್ಞೆಯನ್ನು ಮಾಡಿ ಹೇಳುವದು ಉಂಟು. ಆಕಳನ್ನೋ, ನಾಯಿಯನ್ನೋ, ಅಪ್ಪ ಅಮ್ಮಂದಿರನ್ನೋ, ಅಣ್ಣ ತಂಗಿಯರನ್ನೋ, ಪುಸ್ತಕ ಹಾಗೂ ಇತರ ವಸ್ತುಗಳನ್ನೋ ತೋರಿಸಿ ಆಕಳು, ನಾಯಿ, ಅಪ್ಪ, ಅಮ್ಮ ಹೀಗೆ ಗುರುತಿಸಿದಾಗ ಆ ಆ ಶಬ್ದಗಳ ಅರ್ಥಗಳನ್ನು ಗ್ರಹಿಸುವದನ್ನು ಗುರುತಿಸುತ್ತೇವೆ.

ಮಕ್ಕಳು ದೊಡ್ಡವರಾಗುವಾಗ ಹೆಚ್ಚು ಹೆಚ್ಚು ಹಿರಿಯರೊಡನೆ ಬೆರೆತಾಗ ಅವರ ಕಲಿಯುವಿಕೆಯ ವೇಗ ಹೆಚ್ಚಾಗುತ್ತದೆ. ಅರಣ್ಯದಲ್ಲಿ ತೋಳದ ಜೊತೆ ಬೆಳೆದ ಮಗು ಮಾತನಾಡಲು ಅಸಮರ್ಥವಾದದ್ದನ್ನು ನಾವು ಕೇಳಿ ಬಲ್ಲೆವು. ತನ್ನ ಜೀವನದ ಭಾಗವನ್ನು ತೋಳದಜೊತೆ ಕಳೆದಾಗ ಆ ಮಗು ತೋಳದ ಮೂಕಾಭಿನಯವನ್ನೇ ಅನುಸರಿಸುತ್ತದೆ.

ಮಕ್ಕಳು ಬೆಳೆಯುವ ಪರಿಸರದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ವಾಸಿಸಿದಲ್ಲಿ ಆ ಭಾಷೆಗಳನ್ನೆಲ್ಲಾ ಮಕ್ಕಳು ಕಲಿತುಕೊಳ್ಳುತ್ತಾರೆ. ಇಲ್ಲಿಯೂ ಕಲಿಯುವಿಕೆಯ ಪ್ರಾರಂಭದಲ್ಲಿ ಸಂಜ್ಞಾ ಪ್ರಯೋಗವೇ ನಡೆಯುವದು. ಅಕ್ಷರಗಳು, ನಾಲಿಗೆಯ ಹೊರಳುವಿಕೆಯಿಂದಾಗುವ ಕಂಪನದಿಂದ ಹುಟ್ಟಿಕೊಳ್ಳುವದು, ಭಾಷಾ ಶಾಸ್ತ್ರಜ್ಞರಿಗೆ ಗೊತ್ತು. ಮಕ್ಕಳ ನಡವಳಿಕೆಯನ್ನು

ಗಮನಿಸಿದಲ್ಲಿ, ಮಕ್ಕಳು ಈ ಹಂತದಲ್ಲಿ ಮಾತನಾಡುವ ಪ್ರಯತ್ನದಲ್ಲಿರುವದನ್ನು ಸುಲಭವಾಗಿ ಗುರುತಿಸಬಹುದು. ಆಗ ಅಕ್ಷರ, ಶಬ್ದ ಅಥವಾ ವಾಕ್ಯಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗುವದಿಲ್ಲ. ಅಕ್ಷರ ಸಂಯೋಜನೆಯಿಂದ ಶಬ್ದ ಹಾಗೂ ಶಬ್ದಗಳ ಸಂಯೋಜನೆಯಿಂದ ವಾಕ್ಯ ಇವುಗಳ ಸ್ಪಷ್ಟ ಅರ್ಥವನ್ನು ಮಾಡಿಕೊಳ್ಳಲು ಸಾಧ್ಯವಿರುವದಿಲ್ಲ. ಇದನ್ನೇ 'ಮುದ್ದು ಭಾಷೆ' ಎನ್ನುವದು. ಆ ಮಕ್ಕಳು ಬೆಳೆಯುತ್ತಲೇ ಅನುಭವವನ್ನು ಹೆಚ್ಚಿಸಿಕೊಳ್ಳುತ್ತಾರೆ. ಆದರೆ ಶಬ್ದೋಚ್ಚಾರ ಕಷ್ಟಸಾಧ್ಯವಾದ ಮೂಕರಿಗೆ ವಿಷಯಗಳನ್ನು ತಿಳಿಸಲು ಶಬ್ದ ಪ್ರಯೋಗದಿಂದ ಸಾಧ್ಯವಾಗುವದಿಲ್ಲ. ಅದಕ್ಕೆ ಕೇವಲ ಸಂಜ್ಞಾ ಪ್ರಯೋಗವೇ ಬೇಕು.

ವಸ್ತು ಅಥವಾ ವ್ಯಕ್ತಿ ಕೇಂದ್ರಿತವಾದ ಶಬ್ದ ಪ್ರಯೋಗಗಳನ್ನು ಮಗು ಕಲಿತ ಮೇಲೆ, ಸಾವಕಾಶವಾಗಿ, ಭಾವನಾತ್ಮಕವಾದ ಹಾಗೂ ಹೋಲಿಕೆಯುಳ್ಳ ಅರ್ಥಗಳನ್ನು ಕಲ್ಪನೆ ಮಾಡಿ ತರ್ಕಮಾಡಿ ಗ್ರಹಿಸುವ ಹಂತಕ್ಕೆ ಬೆಳೆಯುತ್ತದೆ. ಹೋಗುವದು, ಬರುವದು, ಊಟ, ಆಟ, ಕುಣಿತ, ಶಾಲೆ, ಬಸ್ಸು, ಕಾರು ಮುಂತಾದ ಸುಲಭ ಶಬ್ದಗಳನ್ನು ಅವುಗಳ ಅರ್ಥದ ಜೊತೆ ಕಲಿತುಕೊಳ್ಳುವದು ಕಷ್ಟಕರವಲ್ಲ.

ಆಯಾ ಭಾಷೆಯನ್ನಾಡುವ ಗುಂಪಿನ ಜನರು ಕೂಡಿದಾಗ ಪರಸ್ಪರ ಸಂವಹನಕ್ಕೆ ಯಾವುದೇ ತೊಂದರೆಯಾಗುವದಿಲ್ಲ. ಅವರು ಬಳಸುವ ಶಬ್ದ ಸ್ವರೂಪ ಒಂದೇ ಆಗಿರುತ್ತದೆ. ನಾಯಿ ಎನ್ನುವ ಶಬ್ದ ಪ್ರಯೋಗಮಾಡಿದಾಗ, ಆ ಗುಂಪಿನ ಜನರಿಗೆ, ನಾಯಿ ಎನ್ನುವ ಪ್ರಾಣಿ ಗಮನಕ್ಕೆ ಬರುತ್ತದೆ. ಹೋಗು ಎನ್ನುವ ಶಬ್ದ ಪ್ರಯೋಗಮಾಡಿದಾಗ 'ಹೋಗು' ಎನ್ನುವ ಅರ್ಥ ಬಿಟ್ಟು ಬೇರೆ ಅರ್ಥ ಮೂಡುವದಿಲ್ಲ.

ಆದರೆ ಬೇರೆ ಬೇರೆ ಭಾಷೆಗಳನ್ನಾಡುವ ಜನರು ಪರಸ್ಪರ ಸಂಸರ್ಗಕ್ಕೆ ಬಂದಾಗ ಹೀಗೆ ಅರ್ಥ ಮಾಡಿಕೊಳ್ಳುವದು ಸಾಧ್ಯವಿಲ್ಲ. ಅವರವರ ಭಾಷೆಗೆ ಅನುಗುಣವಾದ ಅರ್ಥವನ್ನು ಹೇಳುವ ಶಬ್ದಗಳು ಬೇರೆಬೇರೆಯೇ ಆಗಿರುತ್ತವೆ. ಹುಲಿ ಎನ್ನುವ ಶಬ್ದವನ್ನು ಹೇಳಬೇಕಾದಲ್ಲಿ ಕನ್ನಡಿಗನಾದರೆ 'ಹುಲಿ' ಎನ್ನುತ್ತಾನೆ, ಹಿಂದೀಯನಾದರೆ 'ಶೇರ್' ಎನ್ನುತ್ತಾನೆ. ಇಬ್ಬರೂ ಕೂಡಿದ ಸಂದರ್ಭದಲ್ಲಿ ಹುಲಿಯನ್ನು ಪರಸ್ಪರರಿಗೆ ತಿಳಿಸುವಂತೆ ಮಾಡುವದು ಕಷ್ಟ. ಆಗ ಸಂವಹನ ಹೇಗೆ?. ಶಬ್ದಗಳನ್ನು ಅರ್ಥವತ್ತಾಗಿ ಬಳಸುವದು ಹೇಗೆ?.

ಅಂತಹ ಸಂದರ್ಭದಲ್ಲಿ ಭಾಷಾ ಮಧ್ಯವರ್ತಿಯ ಮೂಲಕ ಪರಸ್ಪರ ಭಾಷೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಅಥವಾ ಆ ಆ ಭಾಷೆಗಳ ಶಬ್ದಗಳು ಸ್ಫುರಿಸುವ ಅರ್ಥವನ್ನು ಒಂದು ವಸ್ತುವಿನಲ್ಲಿ ಆರೋಪಿಸಿ ಅರ್ಥ

ಮಾಡಿಕೊಳ್ಳಬೇಕು. ಅದೂ ಒಂದು ರೀತಿಯಿಂದ ಮೂಕಾಭಿನಯವೇ ಸರಿ. ಊಟ ಅಂತ ಹೇಳಿ ಕೈಯನ್ನು ಬಾಯಿಯ ಸಮೀಪ ತಂದು 'ಮೀಲ್ಸ್' ಅಂತ ಹೇಳಿದಾಗ ಅರ್ಥ ಸ್ಫುರಿಸುತ್ತದೆ. (ಇಂಗ್ಲೀಷ್ ಹಾಗೂ ಕನ್ನಡ ಭಾಷೆಯಾದಲ್ಲಿ, ಕೈಯನ್ನು ತೋರಿಸಿ ಹೇಂಡ್ ಹಾಗೂ ಕೈ ಅಂತ ಪರಸ್ಪರ ಸೂಚಿಸಿದಾಗ ಹೇಂಡ್ ಹಾಗೂ ಕೈ ಇವು ಒಂದೇ ಅರ್ಥ ಕೊಡುವ ಶಬ್ದಗಳು ಅಂತ ತಿಳಿಯುತ್ತಾರೆ.)

ಇಂತಹ ಸಂದರ್ಭದಲ್ಲಿಯೇ ಒಂದು ಭಾಷೆಗಳ ಶಬ್ದಗಳು ಇನ್ನೊಂದು ಭಾಷೆಯಲ್ಲಿ ಸೇರುತ್ತವೆ ಹಾಗೂ ಕ್ರಮೇಣ ಆ ಭಾಷೆಯ ಶಬ್ದಗಳೇ ಆಗಿ ಬಿಡುತ್ತವೆ. ಈ ಕಾರಣಕ್ಕಾಗಿಯೇ ಸಂಸ್ಕೃತ, ಫಾರ್ಸಿ, ಉರ್ದು ಮೊದಲಾದ ಭಾಷೆಯ ಶಬ್ದಗಳು ಈಗ ಕನ್ನಡ ಶಬ್ದಗಳೇ ಆಗಿವೆ.

ಶಬ್ದಾರ್ಥಗಳ ಹುಡುಕಾಟದಲ್ಲಿರುವ ಇಂತಹ ಸಂದರ್ಭದಲ್ಲಿಯೇ ಶಬ್ದಕೋಶ ಪ್ರಯೋಜನಕ್ಕೆ ಬರುವದು.

ಭಾಷೆಗೆ ಶಬ್ದಗಳು ಸೇರುವ ಹಾಗೂ ಶಬ್ದಗಳಿಗೆ ಅರ್ಥವನ್ನು ಹುಡುಕುವ ಪ್ರಕ್ರಿಯೆ ನಿರಂತರವಾದದ್ದು.

೩. ವಿಠ್ಠಲ್ ಇಜೇರಿ



ಕಥಾ ಪ್ರಪಂಚ : 106 ಕತೆಗಳು
ರೋಹಿತ್ ಚಕ್ರತೀರ್ಥ್

ರೋಹಿತ್ ಚಕ್ರತೀರ್ಥ ಅವರು ಗಣಿತ ಅದ್ಯಾಪಕರಾಗಿ ವೃತ್ತಿಜೀವನ ಕೈಗೊಂಡರೂ ನಂತರ ಪತ್ರಕರ್ತರಾಗಿ ಅಂಕಣ ಬರಹ, ಸಾಹಿತಿಯಾಗಿ ಕತೆ, ಕಾದಂಬರಿ, ಪ್ರಬಂಧ, ವೈಜ್ಞಾನಿಕ ಲೇಖನ ಇತ್ಯಾದಿ ಸಾಹಿತ್ಯ ರಚನೆ ಮಾಡಿದ್ದಾರೆ. ತಮ್ಮ ಅಯೋಧ್ಯ ಪ್ರಕಾಶನದ ಮೂಲಕ " ಮನ ಮೆಚ್ಚಿದ ಹುಡುಗಿ, ಅಜ್ಜಿ ಕತೆಗಳು, ವೃಂದಾವನ, ಉಟ್ಟ ಬಟ್ಟೆಯಲ್ಲಿ ಹೊರಟು ಬಂದವರು, ಗಣಿತಜ್ಞರ ರಸ ಪ್ರಸಂಗಗಳು, ಮನೋಲ್ಲಾಸ, ನೂರಾರು ಯಹೂದಿ ಕತೆಗಳು,ಹೀಗೆ 30 ಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. ಯಹೂದಿ ಕತೆಗಳು ಪುಸ್ತಕದಲ್ಲಿ ಒಟ್ಟು 106 ಚಿಕ್ಕ ಚಿಕ್ಕ ಕಥೆಗಳಿದ್ದು ಹೆಚ್ಚಿನವುಗಳ ಮೂಲ ದ್ರವ್ಯ ಹಾಸ್ಯ ಮತ್ತು ಸ್ವಲ್ಪ ಮೌಲ್ಯ. ಹೆಚ್ಚಿನ ಕತೆಗಳಲ್ಲಿ ಯಾಹೂದ್ಯರ ಧರ್ಮ ಗುರು ರಬ್ಬೈ ಬರುತ್ತಾರೆ. ಅವರು ಧರ್ಮದ ಮುಖ್ಯಸ್ಥರಾಗಿ ಪೀಠ ಅಲಂಕರಿಸಿದ್ದರೂ ಅವರಲ್ಲಿ ಅಹಂಕಾರ ಇಲ್ಲ. ಕೊಂಚ ಪೆದ್ದುತನ, ವಿನೋದ, ಜೀವನ ಅನುಭವಗಳಿವೆ. ಇನ್ನು ಕೆಲವು ಕತೆಗಳಲ್ಲಿ ಸಾಮಾನ್ಯ ಪ್ರಜೆಗಳು, ಮೋಟ್ಕೆ ಮತ್ತು ಮೋಷೆ ಬರುತ್ತಾರೆ. ಇವರು ತಮ್ಮ ಜಾಣತನದಿಂದ ಪ್ರಸಂಗ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಇನ್ನೊಬ್ಬ ಆಕರ್ಷಕ ವ್ಯಕ್ತಿ ಯೋಷ್ಕ, ತನ್ನ ಪೆದ್ದು ತನದಿಂದ ಕಷ್ಟಗಳನ್ನು ಮೈ ಮೇಲೆ ಎಳೆದುಕೊಂಡರೂ ಉಪಾಯದಿಂದ ಪಾರಾಗ ಬಲ್ಲನು. ಅಲ್ಲಿ ಹೆಲ್ಮ್ ಎಂಬ ದಡ್ಡರಿಂದ ತುಂಬಿದ ನಗರವೇ ಇದೆ. ಯೋಸ್ಕ ಎಂಬ ದಡ್ಡ ಸುಮ್ಮನೆ ಹೋಗಿ ಸಂದಿಗ್ಧತೆಗೆ ಸಿಕ್ಕಿ ಹಾಕಿ ಕೊಳ್ಳುವನು. ಒಟ್ಟಿನಲ್ಲಿ ಮುಗ್ಧರ, ಪೆದ್ದರ, ಸಾಮಾನ್ಯರ ಕತೆಗಳು ಇದ್ದು ಹೆಚ್ಚಿನವು ಜಾನಪದ ಶೈಲಿಯಲ್ಲಿವೆ. ಒಂದೆರಡು ಚಿಕ್ಕ ಕತೆಗಳನ್ನು ನೋಡೋಣ.

1 ಸಹಾಯ

ಮೊಷೆ ನಗರಕ್ಕೆ ಬಂದಿದ್ದ. ಶೌಚಾಲಯಕ್ಕೆ ಹೋಗಬೇಕಾಯಿತು. ಕೂತು ನೋಡುತ್ತಾನೆ, ಅಲ್ಲಿ ಟಾಯ್ಲೆಟ್ ಪೇಪರ್ ಮುಗಿದಿದೆ. ಅವನು ಹಾಗೆ ಎದ್ದು ಬರುವ ಸ್ಥಿತಿಯಲ್ಲಿ ಇಲ್ಲ. ಪಕ್ಕದ ಕೋಣೆಯಲ್ಲಿ ಯಾರೋ ಇದ್ದ ಧ್ವನಿ ಕೇಳಿಸಿತು. ಖುಷಿಯಾದ ಮೋಷೆ " ರೀ, ಟಾಯ್ಲೆಟ್ ಪೇಪರ್ ಇದೆಯಾ? " ಅತ್ತ ಕಡೆಯಿಂದ ಇಲ್ಲ, ಇಲ್ಲಿಯೂ ಇಲ್ಲ " ಎಂಬ ಉತ್ತರ ಬಂತು

ಮೋಷೆ " ಹೋಗಲಿ ನಿಮ್ಮ ಬಳಿ ಯಾವುದಾದರೂ ಬೇರೆ ಪೇಪರ್ ಇದೆಯಾ?

ಅಂದ. ಅತ್ತ ಕಡೆಯಿಂದ " ಅದೂ ಇಲ್ಲ " ಎಂದು ಉತ್ತರ ಬಂತು. ಮೋಷೆಗೆ ಯಾವುದೋ ಒಟ್ಟು ಪೇಪರ್ ಬೇಕಿತ್ತು. ಪುನಃ " ನಿಮ್ಮ ಬಳಿ ಐದು ರೂಪಾಯಿ ನೋಟು ಇದ್ದರೆ ಕೊಡಿ ಐವತ್ತರ ನೋಟು ಕೊಡುವೆ. " ಅಂದ. ಅತ್ತ ಕುಳಿತ ಯೋಸ್ಕ (ದಡ್ಡ) ಮೇಲ್ಗಡೆಯಿಂದ ಐದು ರೂಪಾಯಿ ನೋಟು ಕೊಟ್ಟ. ಇತ್ತ ಕಡೆಯಿಂದ ಐವತ್ತರ ನೋಟು ಹೋಗಲಿಲ್ಲ. ಮೋಷೆ (ಜಾಣ) ಕೆಲಸವಾಯಿತು ಮೆಲ್ಲಗೆ ಎದ್ದು ಹೋದ

2. ವ್ಯಾಪಾರ


ಸಹರಾ ಮರಭೂಮಿಯಲ್ಲಿ ಒಬ್ಬ ಅರಬ ಬಾಯಾರಿಕೆಯಿಂದ ಬಳಲುತ್ತ ಬರುತ್ತಾ ಯಾರಾದರೂ ನೀರು ಕೊಟ್ಟಾರೋ ಎಂದು ಅತ್ತಿತ್ತ ನೋಡುವಾಗ ದೂರದಲ್ಲಿ ಒಬ್ಬ ವ್ಯಕ್ತಿ ಕುಳಿತುದನ್ನು ಕಂಡು ಕಷ್ಟದಿಂದ ಅವನಲ್ಲಿಗೆ ಬಂದು " ನೀವು ಯಾರು ಸ್ವಾಮಿ, ಬಾಯಾರಿಕೆಯಿಂದ ಬಲಳಿದ್ದೇನೆ ಸ್ವಲ್ಪ ನೀರು ಕೊಡುವಿರಾ? " ಅಂದ.

ಆ ವ್ಯಕ್ತಿ " ರೀ, ನಾನು ಮೋಟ್ಕೆ, ಟೈ ವ್ಯಾಪಾರಿ, ನಾನು ನಿಮಗೆ ಟೈ ಮಾರಾಟ ಮಾಡಬಲ್ಲೆ,, ಟೈ ಬೇಕಾ? ಎಂದು ಕೇಳಿದ.

ಅರಬ " ನೀರು ಕೊಡಿ ಅಂದರೆ ಟೈ ವ್ಯಾಪಾರ ಮಾಡು ಅನ್ನುತ್ತೀರಲ್ಲ.?
ಮೋಟ್ಕೆ " ನೀರು ನಿಮಗೆ ಅಲ್ಲಿ ಚಿಕ್ಕ ಬೆಟ್ಟದ ಮೇಲೆ ಒಂದು ಹೋಟಲ್ ಇದೆ ಅಲ್ಲಿ ಸಿಗಬಹುದು "

ಅರಬನಿಗೆ ಜೀವ ಬಂದಂತಾಯ್ತು, ನಿಧಾನಕ್ಕೆ ಬೆಟ್ಟದ ಕಡೆ ಹೊರಟ. ಸುಮಾರು ಒಂದು ಗಂಟೆಯ ನಂತರ ಅದೇ ಅರಬ ನೇತಾಡಿಕೊಂಡು ಮೋಟ್ಕೆ ಬಳಿ ಬಂದ. ಮೋಟ್ಕೆ ಯಾಕೆ ಏದುಸಿರು ಬಿಡ್ತಾ ಇದ್ದೀರಿ, ಹೋಟೆಲ್ ಸಿಗಲಿಲ್ಲವೇ? "ಅರಬ" ಹೋಟೆಲ್ ಇದೆ, ಟೈ ಕಟ್ಟಿದವರಿಗೆ ಮಾತ್ರ ಒಳಗೆ ಬಿಡುತ್ತಿದ್ದಾರೆ, ಬೇಗ ಒಂದು ಟೈ ಕೊಡಿ.

೪. ಬೆಂಶ್ರೀ ರವೀಂದ್ರ



ರಾಮಿ ಮತ್ತು ಟಾಮಿ

ರಾಮಿಯನ್ನು ನೀವು ನೋಡಿರಬಹುದು. ಐದಡಿಗಿಂತ ಸ್ವಲ್ಪ ಕಮ್ಮಿ. ಸಣ್ಣಕಲ. ಆಯತಾಕಾರದ ಪುಟ್ಟಮುಖ. ನೇರ ಮೂಗು. ಪೊದೆ ಮೀಸೆ. ಪಲ್ಸರ್ ಮೊಟಬೈಕ್. ಬೆಳಗ್ಗೆ ಏಳಕ್ಕೆ ಹೊರಟರೆ ಮಧ್ಯಾಹ್ನ ಮೂರಕ್ಕೊ ನಾಲ್ಕಕ್ಕೊ ಬರುತ್ತಾನೆ. ಪಾಪ ಮನೆಯಲ್ಲಿ ಒಬ್ಬನೆ. ಹಾಗಂತ ಎಲಿಜಿಬಲ್ ಬ್ಯಾಚುಲರ್ ಏನಲ್ಲ. ಮದುವೆ ಆಗಿದೆಯಂತೆ. ಹೆಂಡತಿ ಮಕ್ಕಳೂ ಇದ್ದಾರಂತೆ. ನಾವಂತೂ ಕಂಡಿಲ್ಲ. ೩೦×೪೦ ರ ಸೈಟ್ನಲ್ಲಿ ಪುಟಾಣಿ ಮನೆ ಅವಂದು. ಅಡಿಗೆನೂ ಅವಂದೇ, ಊಟಾನೂ ಅವಂದೆ. ವಯಸ್ಸು ೫೫-೬೦ ರ ಸಮೀಪ.



ಅವ್ನ ಮನೆಲಿ, ಕೆಲಸದವಳೇ ರಾಣಿ. ಅಯ್ಯೋ ತಪ್ಪು ತಿಳಿಬೇಡಿ. ಅವ್ನು, ಆ ಕೆಲಸದವ್ಳೂ ಇಬ್ರೂ ಒಳ್ಳೆಯವರೇ. ನಾ ಹೇಳಿದ್ದು ಹೀಗೆ. ನಮ್ಮ ರಾಮಿ ೭ ಗಂಟೆಗೆಲ್ಲಾ ಮನೆ ಬಿಡ್ತಾನಾ, ಆ ವೇಳೆಗೆ ಬರೋ ಕೆಲಸದವ್ಳದೇ ಆಗಿಬಿಡತ್ತೆ ಮನೆ. ಆ ಸೋಫಾ ಮೇಲೆ ಕೂರೋದೇನು, ಮೊಬೈಲ್ನಲ್ಲಿ, ಕಾಲ್ಮೇಲೆ ಕಾಲು ಹಾಕ್ಕೊಂಡು ಮಾತಾಡೋದೇನು. ಅಡಿಗೆಮನೆ, ಬಚ್ಚಲುಮನೆ ದರ್ಬಾರ್ ಮಾಡೋದೇನು!, ಅಬ್ಬಬ್ಬಾ.. ಅದಕ್ಕೆ ಓಣಿಯೊರೆಲ್ಲಾ ಅವ್ಳೇ ರಾಣಿ ಅನ್ನೊದು!!.

ನಮ್ಮ ಬೀದಿಲಿ, ಸುಮಾರು ೧೦-೧೫ ನಾಯಿಗಳಿವೆ. ಯಾಕೆ?, ತಪ್ಪೇನು?, ಅವಕ್ಕೆ ಬದುಕು ಹಕ್ಕು ಇಲ್ವಾ ಅಂತ ಕೇಳ್ಬೇಡಿ. ಖಂಡಿತಾ ಇದೆ. ೨೬೦೦೦ ವರ್ಷದಿಂದ ಮನುಷ್ಯನ ಜೊತೆಲಿ ನಾಯಿ ಬದುಕಿದೆ ಅಂತ ನಮ್ಮ ಮಂಜು ಬರೆದಿದಾನೆ. ದೇವೇಂದ್ರನ ಹತ್ರಾನೂ ನಾಯಿ ಇತ್ತು ಅಂತ ಅವ್ನ ಕಥೆ.

ಈ ನಾಯಿಗಳು ಹೊಸಬರ್ನಂತೂ ಬೀದಿಗೆ ಸೇರಿಸ್ತಾ ಇರ್ಲಿಲ್ಲ. ಹಳಬರನ್ನೂ ಕೆಲವು ಸರ್ತಿ ಹೆದರ್ಸ್ತಾಯಿತ್ತು. ದ್ವಿಚಕ್ರಿಗಳಿಗಂತೂ ನಾಯಿಗಳು ಸಿಂಹಸ್ವಪ್ನ. ಬುರ್ ಅಂತ.. ಗಾಡಿಗಳು.. ಬರೋದೇ ತಡ... ಬರ್...ಅಂತ ಇವು ಗಾಡಿ ಹತ್ರ ಓಡೋದು, ಪಾಪ ಕೆಲವ್ರು ಹೆದ್ರಕ್ಕೊಂಡು ಬುರ್ಬುರ್ ಅಂತ ಆಕ್ಸಿಲೇಟರ್ ತಿರುಗಿಸೋದು, ಧಬಾರ್ ಅಂತ ಬೀಳೋದು ಎಲ್ಲಾ ನಡಿತಿತ್ತು.

ಕೆಲವರು, ಧೈರ್ಯವಂತ ಗಂಡಸರು... ಓ... ಹಾಗಲ್ಲಾ ಸ್ವಾಮಿ, ಹೆಂಗಸರೂ ಕೂಡಾ ಗಾಡಿ ಸ್ಲೋ ಮಾಡೋರು, ಇಲ್ಲ ಬ್ರೇಕ್ ಹಾಕಿ ಗಪ್ಪಂತ, ನಾಯಿ ಕಣ್ಣಿಗೆ ಕಣ್ಣಿಟ್ಟು ನಿಂತು ಬಿಡೋರು. ಪಾಪ, ಇನ್ನೇನು ಮಾಡತ್ವೆ ಅವು. ಚುನಾವಣಾ ಕಾಲದ ಮಂತ್ರಿಗಳ ತರಹ ಗಪ್ಪಾಗಿ ನಿಂತು, ಸರಕ್ಕಂತ ದಾರಿ ಬಿಡ್ತಿದ್ವು. ಪಾಪ. ಆಗ್ನೋಡ್ಬೇಕಪ್ಪಾ, ಆ ಧೈರ್ಯಸ್ಥರ ಜರ್ಬು. ಬಡಾವಣೆ ವಾಟ್ಸಪ್ ಗುಂಪಲ್ಲಿ, ಬರೆದಿದ್ದೂ ಬರೆದಿದ್ದೆ. ಹಾಗೆ... ಹೀಗೆ... ಹೀಗ್ಮಾಡಿ... ಹಾಗ್ಮಾಡಿ... ಗಂಟೆಗಟ್ಟಲೆ ಗಳಹು.

ಅವತ್ತು ಬೆಳಗ್ಗೆ ಕಾಫೀ ಬಟ್ಟಲು ಬಾಯ್ಗಿಟ್ಟು, ಪೇಪರ್ ಎತ್ಕೊಳಕ್ಕೆ ರೆಡಿ ಅಗ್ತಾಯಿದ್ದೆ.
ನನ್ನ ಮಡದಿ ..
"ರೀ.. ನೋಡದ್ರಾ, ಎದ್ರು ಮನೆ ರಾಮಿಗೆ ನಾಯಿ ಕಚ್ಚಿತಂತೆ" ಅಂದ್ಲು.
"ನಿಂಗ್ಯಾರಮ್ಮಾ ಬೆಳಗ್ಗೆ.. ಬೆಳಗ್ಗೆ... ಬಾತ್ಮೀ ಕೊಟ್ಟವರೂ..". ಅಂತಿದ್ದಾಗೆ,
"ನೀವೊಂದು.. ದಂಡ!, ಅದೇನು ಪೇಪರು ಪೇಪರು ಅಂತ ಸಾಯ್ತಿರಿ, ಏನಿರ್ತೆ ಅದರಲ್ಲಿ, ಅದೇ ....ಡ್ಯಾಶ್..... ಡ್ಯಾಶ್.......ಡುಶುಂ.., ಅವ್ರದ್ದೆ .... ಡುಶುಂ.. ಡುಶುಂ..... ಹಾಡಿದ್ದೇ ಹಾಡೋ ಕಿಸಬಾಯಿ ದಾಸಾ ಅನ್ನೊ ಹಾಗೆ" ಗುಡ್ಗು ಕೇಳಿಸ್ತು. ತಲೆ ಎತ್ತಿನೋಡ್ದೆ, ಆಕಾಶ ನಿರಭ್ರವಾಗಿತ್ತು. ನಾನೇ ತಲೆ ಚಚ್ಚುಕೊಬೇಕಾಯ್ತು. ಇಷ್ಟು ವರ್ಷ ಅನುಭವ ಆದ್ರೂ, ಗುಡುಗು ಅಂದ್ರೆ ಆಕಾಶ ಅಂದ್ಕೊಂಡಿದಿನಲ್ಲ.!.

"ವಾಟ್ಸಪ್ ನೋಡಿ, ಅದೇ ರೆಸಿಡೆಂಟ್ಸ ಗ್ರೂಪಲ್ಲಿ, ಫೋಟೋ ಹಾಕಿದಾರೆ, ಪಾಪ. ಮೀನಖಂಡನ ನಾಯಿ ಗಬ್ಬಕ್ಕಂತ ಹಿಡ್ಕೊಂಬಿಟ್ಟಿದೆ."
"ನಾಯಿ.. ಕಚ್ಚತ್ತಾಯಿರೋ ಫೋಟೋನಾ... ಯಾರಪ್ಪಾ ತೆಗೆದ್ರೊ.. ಎಂಥಾ ಓಳ್ಳೆ ಫೋಟೋಗ್ರಾಫರ್ರು"
"ಆಹಾ.. ನಿಮ್ಮ ಜಾಣತನಕ್ಕೆ ಏನ್‌ಹೇಳ್ಲಿ. ಯಾರಾದ್ರೂ ಫೋಟೋಗ್ರಾಫರ್ ಇಟ್ಕೊಂಡು ನಾಯಿ ಕೈಲಿ ಕಚ್ಚಿಸಿಕೊತಾರಾ"
"ಏನು, ನಾಯಿ ಕೈನಲ್ಲಿ ಕಚ್ಚತಾ"
"ಆಹಾ... ಮತ್ತದೆ, ಮಸ್ಕಿರಿ ಮಾಡಬೇಡಿ. ಅತೀ ಜಾಣತನ. ನಿಮ್ಮನ್ನ ಯಾರು ಜಾಣಾ ಅಂದ್ರೋ ದೇವ್ರಿಗೇ ಗೊತ್ತು. ನಿಮ್ಮಮ್ಮ ಮಾತ್ರಾ ಹುಡ್ಗಿ ನೋಡೋಕ್ಕೆ ಬಂದಾಗ ಹಾಡಿ ಹೊಗಳಿದ್ರು, ಮದ್ವೆ ಆಯ್ತಾ.. ಆಮೇಲೆ.. ಒಂದ್ ದಿನಾನೂ ಅವ್ರು, ನನ್ನ ಮಗ ಜಾಣ ಅನ್ನಲಿಲ್ಲ. ಟೋಪಿ ಹಾಕಿ ಅಗಿತ್ತಲ್ಲಾ ನಂಗೆ.. ಇನ್ಯಾಕೆ ಅಂತ ನಿಜಾನೆ ಹೇಳ್ತಿದ್ರು ಪಾಪ. ಸ್ವಲ್ಪ ನೋಡ್ಕೊಳಮ್ಮ, ವ್ಯವಹಾರ ಜ್ಞಾನ ಕಮ್ಮಿ, ಆದ್ರೆ ಒಳ್ಳೆ ಹುಡ್ಗ ಅಂತ ನೂರ್ಸಾರಿ"
"ಅದಿರ್ಲಿ, ಆ ವಿಷ್ಯ ಈಗ್ಯಾಕೆ, ನಿಮ್ಮಪ್ಪ ಹೇಳಿದ್ದು ನಾನು ಹೇಳ್ಲಾ..... ಕಾಸು

ಕೊಟ್ಟಾಯ್ತು.. ಹೊಗೆಸೊಪ್ಪು ಸುಟ್ಟಾಯ್ತು ಆ ವಿಷ್ಯ ಬಿಡು. ಈಗೇನಿದ್ರೂ ಸಮ್ಮಿಶ್ರ ಸರ್ಕಾರ, ಹೊಂದಾವಣಿಕೆ ರಾಜಕಾರಣ."
"ಸರಿ, ನೀವು, ಫೋಟೋ ನೋಡ್ತಾಯಿರಿ, ನಾನು...ಒಂದ್ನಿಮಿಷ ಬರ್ತಿನಿ" ಅನ್ನುತ್ತಲೆ ಹೊರಗೆ ನಡೆದ್ಲು. ಕಿಟಕಿಯಿಂದ ನೋಡ್ದೆ. ಆ ಕಡೆಯಿಂದ ರಾಮಿ ಬರ್ತಾಯಿದ್ದ. ವಾಕಿಂಗ್ನ ಪಟಾಪಟಿ ಚಡ್ಡಿ.

ವಾಟ್ಸಪ್ ತೆರೆದೆ. ನಿವಾಸಿಗಳ ಗುಂಪು. ಆಗಲೆ ಬಿಸಿಬಿಸಿ ಚರ್ಚೆ ಆರಂಭ ಆಗಿತ್ತು. ರಾಮಿ ಫೋಟೋ ನೋಡ್ಬೇಕಾದ್ರೆ, ಹಿಂದಕ್ಕೆ ಸ್ಕ್ರೋಲ್ ಮಾಡ್ಬೇಕಿತ್ತು. ಮೀನಖಂಡದ ಚಿತ್ರ, ಮಧ್ಯಭಾಗಕ್ಕೆ ಸರಿಯಾಗಿ ಎರಡು ಹಲ್ಲಿನ ಗುರುತು. ಅದೇ ಚಿತ್ರದ ಬೇರೆ..ಬೇರೆ..ಕೋನಗಳ ಇನ್ನೇರಡು ಚಿತ್ರಗಳು. ನಾನು ಮತ್ತೆ ಮೇಲೆ ಕೆಳಗೆ ಸ್ಕ್ರೋಲ್ ಮಾಡ್ದೆ. ನಾಯಿ ಕಚ್ಚಿತಾಯಿರೋ ಫೋಟೋ ಇದ್ಯಾ ಅಂತ.

ಹೊರಗಡೆಯಿಂದ ಧ್ವನಿ ಕೇಳಿಸ್ತಿತ್ತು.
"ಯಾವಾಗಾಯ್ತು"
"ನಿನ್ನೆ ಸಂಜೆ ೭ ಗಂಟೆ"
"ಹೇಗಾಯ್ತು ? ಜೋರಾಗಿ ಓಡಿಸಿದ್ರಾ?"
"ಇಲ್ಲಾ ಮೇಡಂ, ನಾನು ಸ್ಲೋನೇ, ನಾನು ಬರ್ತಾಯಿದ್ನಾ, ಇನ್ನೇನು ನಮ್ಮ ಓಣಿಗೆ ತಿರ್ಗಬೇಕು ಅನ್ನೋ ಅಷ್ಟರಲ್ಲಿ, ಆ ಕಡೆ, ಈ ಕಡೆ ಎರಡೂ ಕಡೆ ಇದ್ದ ಎರಡ್ನಾಯಿ ಚಕ್ಕಂತ ಓಡೋಯ್ತು. ನಾನು ನೋಡೇ ಇರ್ಲಿಲ್ಲಾ... ಕಾರ್ ಹಿಂದೆ ಇತ್ತು ಇನ್ನೊಂದ್ ನಾಯಿ.. ಸರ್ರಂತ ಬಂದು, ಕಾಲಿಗೆ ಬಾಯಿ ಹಾಕೇಬಿಡ್ತು. ಪ್ಯಾಂಟ್ ಇದ್ರೂ ಮೀನಖಂಡಕ್ಕೆ ಬಾಯಿ ಊರೇ ಬಿಡ್ತು."
"ಅಯ್ಯೋ ಪಾಪ, ಛೇ..ಛೇ... ಹೀಗಾಬಾರ್ದಿತ್ತು. ದಿನಾ ಓಡಾಡೋ ರಸ್ತೆ, ನೋಡಿರೋ ನಾಯಿ, ಹಾಗೂ ಕಚ್ಚಿ ಬಿಡ್ತಾ, ಆ ನಾಯಿ ಯಾವುದು?. ಗೊತ್ತಾಗತ್ತಾ."
"ಓಹೋ.. ಗೊತ್ತಾಗ್ದೆಯೇನು? ಸರಿ, ನಾ ಬರ್ತಿನಮ್ಮಾ, ಆಸ್ಪತ್ರೆಗೆ ಹೋಗ್ಬೇಕು"
ರಾಮಿ ಹೊರಟ.

ನಮ್ಮನೆಯವಳಿಗೆ ಸ್ವಲ್ಪ ನಿರಾಸೆ ಆಗಿರ್ಬೇಕು. ಇನ್ನೂ ಏನೇನು ಪತ್ತೆದಾರಿ ಪುರುಷೋತ್ತಮನ ಪ್ರಶ್ನೆಗಳಿತ್ತೋ!. ಒಳಗೆ ಬರ್ತಾ "ಏನೋ ಪಾಪ ಅಂತ ಕೇಳಿದ್ರೆ, ರಾಜಕಾರ್ಯ ಇರೋ ಹಾಗೆ ಹೊರಟ" ಅಂತ ಗೊಣಗಿಕೊಳ್ತಾ ಅಡಿಗೆ ಮನೆ ಕಡೆಗೆ ಹೊರಟ್ಳು. ಅಂತೂ ಕೊನೆಗೂ ತಿಂಡಿ ಕೆಲಸ ಆರಂಭವಾಗಬಹುದು ಅನ್ನೋ ಭರವಸೆ ಮೂಡಲಿಕ್ಕೆ ಆರಂಭವಾಯ್ತು.

ನಾನು, ಮತ್ತೆ ನನ್ನ ಗಮನವನ್ನ, ನಿವಾಸಿಗಳ ವಾಟ್ಸಪ್ ಗುಂಪಿನ ಕಡೆಗೆ ಹರ್ಸದೆ. ಪಕ್ಕದ್ ಬೀದಿ ಮಾಧವ ಒಂದು ಪೋಸ್ಟ್ ಹಾಕಿದ್ದ. "ಮೂರನೆ ಬೀದಿ

ಮಾತ್ರವಲ್ಲಾ, ನಂಬೀದೀಲೂ ಇದೇ ಸಮಸ್ಯೆ. ಇದಕ್ಕೆ ಏನಾದ್ರೂ ಪರಿಹಾರ ಕಂಡು ಹಿಡಿಬೇಕು''

ಕೆಳಗೆ ಇನ್ನೊಂದು ಪೋಸ್ಟು, " ನಾಯಿಗಳಿಗೆ ಊಟಾ ಹಾಕೋರು ಜಾಸ್ತಿ ಆಗಿದಾರೆ. ತಮ್ಮನೆಲಿ ಉಳಿದ ತಂಗಳು, ಬೆಂಗಳು ಎಲ್ಲಾ ಹಾಕ್ತಾರೆ. ನಾಯಿಗಳು ಆ ಆಹಾರ ತಿಂದು ಕೊಬ್ಬಿವೆ. ಮನುಷ್ಯರ ಮೇಲೆ ದಬ್ಬಾಳಿಕೆ ಮಾಡ್ತಾಯಿವೆ. ಮೊದಲು ನಾಯಿಗಳಿಗೆ ಊಟ ಹಾಕೊದು ನಿಲ್ಸಿ."

ತಕ್ಷಣ ಉತ್ತರ ಬಂದಿತ್ತು "ನಾಯಿಗಳೂ ಜೀವಿಗಳು, ಮನುಷ್ಯರಂತೆ ಅವುಗಳಿಗೂ ಬದುಕುವ ಹಕ್ಕಿದೆ. ಇಷ್ಟಕ್ಕೂ ನಾವು ತಿಂದು ಮಿಕ್ಕಿದ್ದು ವೇಸ್ಟ ಮಾಡೋದು ಸರಿನಾ?".

ಮತ್ತೊಂದು ಹೇಳಿಕೆ ಹೀಗಿತ್ತು "ನಾಯಿಗಳಿಗೆ ನಾವು ಹಾಕುವ ಪುಳ್ಚಾರ್‌ನಿಂದ ಕಚ್ಚುವ ಶಕ್ತಿ ಬರೊಲ್ಲ. ಅದೇ.. ಮೈನ್‌ರೋಡ್ ಮೂಲೇಲಿ ಇರೋ ದೊನ್ನೆ ಬಿರಿಯಾನಿ ಅಂಗಡಿಯವನು ಹಾಕೋ ಮಾಂಸದ ತುಂಡುಗಳಿಂದ ಅವಕ್ಕೆ ದುರಹಂಕಾರ ಬಂದಿದೆ. ಆ ಅಂಗಡಿ ಮುಚ್ಚಿಸಿ''

ಅರೆ, ದೊನ್ನೆ ಬಿರಿಯಾನಿ ಅಂಗಡಿ ಮುಚ್ಚಿಸಲು ನಾವು ಯಾರು?. ಆ ಕೆಲ್ಸಾ ಮಾಡೋರಾದ್ರು ಯಾರು? ಅಂತ ಯೋಚನೆ ಮಾಡ್ತಾ ಮುಂದಿನ ಪೋಸ್ಟ ಓದ್ದೆ. ಆಹಾ.. ಎಂಥಾ ಬುದ್ದಿವಂತೆ ಈ ಹೆಂಗ್ಸು ಅನ್ನಿಸ್ತು. ಆಕೆ "ನಮ್ಮ ಬೀದಿ ನಾಯಿ ಯಾರನ್ನೂ ಕಚ್ಚೊಲ್ಲ. ನಮ್ಮದು ಡೆಡ್‌ಎಂಡ್ ರಸ್ತೆ. ನಮ್ಮ ಬೀದಿ ನಾಯಿಗಳು ಗಲ್ಲಿ ಬಿಟ್ಟು ಹೊರಗೆ ಬರೊಲ್ಲ. ಬೇರೆಯವರ್ನ ಒಳಗೆ ಬಿಡೋಲ್ಲ. ನಾವು ಹಾಕಿದ್ದ ಕೂಳು ತಿಂದು ಆನಂದವಾಗಿದೆ. ಕಚ್ಚೊದು ಏನಿದ್ರೂ ಮೈನ್‌ರೋಡ್‌ನಾಯಿಗಳು."

ಮತ್ತೊಂದು ಪೋಸ್ಟು ನನ್ನ ಗಮನ ಸೆಳಿತು. ರಾಮಿ ಬರೆದಿದ್ದ "ಅಧ್ಯಕ್ಷರೆ, ನೀವೇನು ಮಾಡ್ತಾಯಿದಿರಿ. ನಿಮ್ಮ ಅಧ್ಯಕ್ಷತೆಯಲ್ಲಿ ನಾಯಿಗಳು ನಮ್ಮನ್ನೆ ಕಚ್ಚತಾಯಿದೆ. ತಕ್ಷಣ ಕ್ರಮ ತಗೊಳ್ಳಿ. ಕಾರ್ಪೊರೇಷನ್ಗೆ ಫೋನ್‌ಮಾಡಿ. ಮುಮಂ ಅವರಿಗೆ ಕರೆ ಮಾಡಿ. ಪ್ರಧಾನ ಸೇವಕರಿಗೆ ಟ್ವೀಟರ್ ಮಾಡಿ. ನಾಯಿಗಳಿಂದ ನಮ್ಮನ್ನು ಕಾಪಾಡಿ''

ನಮ್ಮ ನಿವಾಸಿಗಳ ಸಂಘದ ಅಧ್ಯಕ್ಷರನ್ನು ನೀವು ನೋಡಿದಿರಿ. ಎದ್ದು ಕಾಣುವ ವ್ಯಕ್ತಿತ್ವ. ೪೫-೫೦ ರ ಪ್ರಾಯ. ೫.೪೫ ಅಡಿ ಎತ್ತರ, ನೇರ ನಿಲುವು. ಚೌಕವಾದ ಮುಖ. ನೀಳ ನಾಸಿಕ. ಅಂದವಾಗಿ ಬಾಚಿದ ತಲೆ ತುಂಬಾ ಇರುವ ಕೂದಲು. ಮಾತು ಟಾಕುಟೀಕು. ಟಿಕ್ಟಾಕ್ ಸ್ಟೈಲು. ಸರಸರ ಓಡಾಟ. ಒಂದು ಕೇಳದ್ರೆ ಹತ್ತು ತಗೊಳ್ಳಿ ಅಂತ್ಹೇಳೋ ಹುಡುಗ.

ತಕ್ಷಣ ಪ್ರತಿಕ್ರಿಯೆ ಬಂದಿತ್ತು.

"ಮಿ ರಾಮಿ, ಡೊಂಟ್‌ವರಿ. ನಾನು ಕಾರ್ಪೊರೇಷನ್ ಅಧಿಕಾರಿಗಳಿಗೆ ಈಗಲೆ

ಮೆಸೆಜ್ ಕೊಡ್ತೀನಿ. ನೀವು ಮೊದಲು ಆಸ್ಪತ್ರೆಗೆ ಹೋಗಿ, ಟಿಟನಸ್, ಆಂಟಿ ರೇಬಿಸ್ ಚುಚ್ಚುಮದ್ದು ಹಾಕಿಸ್ಕೊಳ್ಳಿ. I will not allow any stone unturned.'' ಹೌದು, ಸರಿಯಾದ ಮಾತೇ! ನಮ್ಮ ಬಡಾವಣೆಯಲ್ಲಿ ಎಲ್ಲಾ ಸ್ಟೋನು ಟರ್ನಾಗಿಹೋಗಿದೆ!!.
ಅದರ ಕೆಳಗೆ ರಾಮಿ ಕೈ ಎತ್ತಿದ್ದೂ ಕಾಣಸ್ತಿತ್ತು.

ಮಾರನೆ ದಿವ್ಸಾ ಬೆಳಿಗ್ಗೆ ೮.೩೦ ರ ಸುಮಾರು. ಪೂಜೆಗೆ ಹೂವು ಬಿಡಿಸ್ತಾಯಿದ್ದೆ. ಡರ್..ಢರ್...ಅಂತ ಒಂದು ಲಗ್ಗೇಜ್ ವ್ಯಾನ್ ತರಹ ಗಾಡಿ ನಮ್ಮ ಬೀದಿಗೆ ಬಂತು. ನಾನು ನೋಡ್ತಾಯಿದ್ದ ಹಾಗೆ ಬೀದಿ ನಾಯಿಗಳೆಲ್ಲ ಬೌ..ಬೌ..ಅಂತ ಬೊಗಳ್ಕೊಂಡು ದಿಕ್ಕಾಪಾಲಾಗಿ ಓಡಿದ್ವು. ಒಂದೇ ಕ್ಷಣದಲ್ಲಿ ಬೀದಿಲಿ ಒಂದು ನಾಯೀನೂ ಇರಲಿಲ್ಲ.! ನಮಗಿಂತ ಮುಂಚೆ ನಾಯಿಗಳಿಗೆ ಗೊತ್ತಾಗಿತ್ತು.! ನಾಯಿ ಸ್ಕ್ವಾಡ್ ಬಂದಿದೆ ಅಂತ.!! ಗಾಡಿಯಿಂದ ನಾಕು ಹುಡುಗರು ಧಡ...ಧಡ.. ಅಂತ ಬಲೆ, ದಾರ, ಕೋಲು ಎಲ್ಲಾ ಹಿಡ್ಕೊಂಡು ಇಳ್ದ್ರೂ. ಗಾಡಿ ಹಿಂದೆ ಮೇಲ್ವಿಚಾರಕರು ಅಂತ ಕಾಣತ್ತೆ. ಸ್ಕೂಟರ್ನಲ್ಲಿ ಬಂದ್ರು. ನನ್ನ ಪಕ್ಕದಲ್ಲೆ ಬ್ರೇಕ್‌ಹಾಕಿ ನಿಲ್ಸಿ "ಯಾವ್ದೂ ಸಾರ್.... ನಾಯಿ ?''
ಒಂದು ಕ್ಷಣ, ನನಗೆ ಅಯೋಮಯವಾಯ್ತು.
"ಯಾವ ನಾಯಿ ಸಾರ್..ನನಗೇನು ಗೊತ್ತು''
''ಓ ಸಾರಿ, ನೀವಲ್ವಾ ನಾಯಿ ಕೈನಲ್ಲಿ ಕಚ್ಚಿಸಿಕೊಂಡಿದ್ದು''
''ನಾಯಿಗಳು ಕೈನಲ್ಲಿ ಕಚ್ಚತ್ವಾ ಸಾರ್''ಅಂತ ಮತ್ತೆ ಅದೇ ಜೋಕ್ ಮಾಡ್ದೆ.
ಮನೆಲಿ, ಇದೇ ಮಾತಿಗೆ ಮೇಡಂ ಕೈನಲ್ಲಿ ಬೈಸಿಕೊಂಡಿದ್ದು ಮರೆತುಹೋಗಿತ್ತು. ಅಯ್ಯೋ ಮೇಡಂ ಕೂಡಾ ಕೈ ನಲ್ಲಿ ಬೈತಾರಾ, ಬಾಯ್ನಲ್ಲಿ ಅಲ್ವಾ ಅಂತ ಯೋಚಿಸುತ್ತಿರುವಾಗಲೆ, ಆ ಮೇಲ್ವಿಚಾರಕರು ''ಒಳ್ಳೆ ತಮಾಷೆ ಜನ ರೀ ನೀವು. ಹಾಗನ್ನೋದು ಲೋಕಾರೂಢಿ ಅಲ್ವಾ. ಈಗ ಲಾರಿ ಹರಿದು ಜನರು ಸತ್ತರು ಅಂತ ಪೇಪರ್ನವರು ಬರಿತಾರೆ, ಲಾರಿ ಹರಿಯೋದು ಉಂಟಾ" ಅನ್ನುತ್ತಾ ನಕ್ಕು, ಅದು ಸರಿ, ಆ ನಾಯಿ ಕೈಲಿ ಕಚ್ಚಿಸಿಕೊಂಡವರ್ನ ಕರೀರಿ.''
"ಅದೇ.. ನಾಯಿ ಬಾಯಲ್ಲಿ'
''ಹ್ಞ.. ಅದೇ ಅವರ್ನೆ ಕರೀರಿ''. ಅಷ್ಟೊತ್ತಿಗೆ ಯಾರೋ ರಾಮಿಯನ್ನ ಕರ್ಕೊಂಬಂದ್ರು. ಚಡ್ಡಿ ಹಾಕಿ ಮೀನಖಂಡ ತೋರಿಸ್ತಾ ರಾಮಿ, ದೊಡ್ಡ ಹಿರೋ ತರ ಬಂದ.
''ನೋಡಿ ಸಾರ್, ಇಲ್ಲೆ ಕಚ್ಚಿದ್ದು'' ಚಡ್ಡಿನ ಇನ್ನಷ್ಟು ಮೇಲೆತ್ತಿ ತೋರಿಸೋಕೆ ಶುರು ಮಾಡ್ದ.
''ಚಡ್ಡಿ ಇಳ್ಸರಿ, ಇಂಜೆಕ್ಷನ್ ಹಾಕಿಸ್ಕೊಂಡ್ರಿ ತಾನೇ. ನಿಮಗೆ ಕಚ್ಚಿದ್ ನಾಯಿ ತೋರಿಸಿ''
ಅಷ್ಟು ಹೊತ್ತಿಗೆ ಹತ್ತಾರು ಜನ ಜಮಾಯಿಸಿದ್ರು. ನಾಯಿ ಹಿಡಿಯೋ ಹುಡುಗ್ರು ಅಲ್ಲೆ ಅವ್ರ ಆಯುಧ ಹಿಡ್ಕೊಂಡು ನಿಂತಿದ್ರು.

ರಾಮಿ, ಸುತ್ತಾಮುತ್ತಾ ತಿರುಗಿ ನೋಡ್ದ. ಎಲ್ಲಿದೆ ನಾಯಿ, ಒಂದೂ ಇಲ್ಲ!!.
"ಸಾರ್, ನಿಮ್ಮ ಹೆಸ್ರು?" ಯಾರದೋ ಪ್ರಶ್ನೆ.
"ನಾನು ಸೀನಣ್ಣ. ಡಾಗ್ ಸೂಪರ್ವೈಸರ್, ಹೇಳ್ರೀ ಹೇಗಿತ್ತು ನಾಯಿ. ಕರಿನಾ..ಬೆಳಿನಾ... ಮಿಕ್ಸೆಡ್ ಕಲರ್ರಾ.. ಕಂದಾ.. ಯಾವ್ಬಣ್ಣ"
ರಾಮಿ" ಸಾರ್..ಕಂದು ಸಾರ್..ಮುಖದ್ಮೇಲೆ, ಕಣ್ಣ ಮಧ್ಯ ಬಿಳಿನಾಮ ಇತ್ತು ಸಾರ್"
ಸೀನಣ್ಣ ಸೂಚನೆ ಕೊಟ್ಟ. ಹುಡುಗ್ರು ಅವ್ರ ಆಯುಧ ತಗೊಂಡು ಕಂದು ಬಣ್ಣದ ನಾಯಿ ಹುಡ್ಕತ್ತಾ ಗಲ್ಲಿ ಸುತ್ತತೊಡಗಿದರು.

ಸೀನಣ್ಣನ ಸಭೆ ಮುಂದುವರೆಯಿತು.
ಒಬ್ಬ ಕೇಳ್ದ " ಸಾರ್ ನಾಯಿನಾ ಏನು ಮಾಡ್ತಿರಿ?"
"ಮಾಡೋದೇನು ಬಂತು, ಅನೆಸ್ತೇಶಿಯಾ ಕೊಟ್ಟು ತಗೊಂಡು ಹೋಗ್ತೀವಿ. ೧೦ ದಿನ ಗಮನಿಸಿ, ಸರಿಯಾಗಿದ್ರೆ ವಾಪಸ್ಸು ಇಲ್ಲೆ ತಂದು ಬಿಡ್ತಿವಿ"
"ಅಯ್ಯೋ ಇಲ್ಲೆ ಬಿಡೋಕೆ ಯಾಕೆ ಹಿಡ್ಕೊಂಡು ಹೋಗ್ತೀರಿ, ಬೇರೆ ಯಾವುದಾದರೂ ಬೇರೆ ಬೀದೀಲಿ ಬಿಟ್ಟಬಿಡಿ"
ಸೀನಣ್ಣಂಗೆ ಸಿಟ್ಟು ಬಂತು, "ಯಾಕ್ರಿ, ನನ್ನ ಕೆಲಸ ಕಳೀಬೇಕು ಅಂತ ಮಾಡಿದಿರಾ?, ಕಾನೂನೇ ಇದೆ ನಾಯಿಯ ವಾಸಸ್ಥಾನ ಬದಲಾಯಿಸಲು ಆಗೋಲ್ಲ"
"ಅಲ್ಲಾ ಸಾರ್, ರಾತ್ರಿಯೆಲ್ಲಾ ಬಡ್ಕೊತ್ತವೆ. ಒಳ್ಳೆ ನಿದ್ದೆ ಟೈಂಗೆ, ತರತರ ರಾಗ ಹಾಡ್ತವೆ. ಜಗಳ ಏನು, ಓಡೋದು ಏನು, ನಾಯಿ ಕಾಟ ಜನ್ಮಜನ್ಮಾಂತರಕ್ಕೂ ಬೇಡ."
ಸೀನಣ್ಣ "ನೀವ್ಯಾರೂ ನಾಯಿ ಸಾಕಿಲ್ವಾ.."
ಇದ್ದಕ್ಕಿದಂತೆ ಎಲ್ಲರ ಮುಖದಲ್ಲಿ ಖುಷಿ, ಎಲ್ಲರೂ ಮಾತಾಡೊಕ್ಕೆ ಶುರು. ನಮ್ಮನೆಲಿ.. ಆ ನಾಯಿಯಿದೆ...ಈ ನಾಯಿಯಿದೆ... ಫಾರಿನ್ ಬ್ರಾಂಡೂ. ನಾಯಿಗಳ ವರ್ಣನೆ ಆರಂಭ ಆಯ್ತು.
ಸೀನಣ್ಣ "ನಾಯಿ ಅಂದ್ರೆ ನಾಯಿನೇ, ಅದೇನು ಫಾರಿನ್ ಬ್ರಾಂಡೂ ಅಂದ್ರೆ ಎಂಟುಕಾಲು ಇರುತ್ತಾ". ಎಲ್ಲರೂ ಬೆಪ್ಪಾದ್ರು. ಕ್ಷಣದಲ್ಲಿ ತೆಪ್ಪಗಾದ್ರು.

ಹುಡುಗ್ರು ವಾಪಸ್ಸು ಬಂದ್ರು." "ಅಣ್ಣಾ.. ಇಲ್ಲೆಲ್ಲಾ ಇರೋದು ಬರೀ ಕಂದು ನಾಯಿನೆ",
ಸೀನಣ್ಣ ರಾಮಿ ಕಡೆ ನೋಡ್ದ.
"ಅದೇ ಸಾರ್...ಕಂದು ಬಣ್ಣದ ನಾಯಿ, ಬಿಳಿನಾಮ !. ಎಲ್ಲಾ ಕಂದು ನಾಯಿ ಹಿಡ್ಕೊಂಡು ಹೋಗಿ ಸಾರ್"
ನಾಯಿಗಳೆಲ್ಲಾ ಓಡಿಹೋಗಿತ್ತು. ಓಡಲಾರದ ನಾಕು ಕಂದು ಬಣ್ಣದ ನಾಯಿಗೆ ಅರಿವಳಿಕೆ ಕೊಟ್ರೂ. ಹಣೆ ಮೇಲೆ ಹಸಿರು ಪಟ್ಟೆ ಹಾಕಿದ್ರು.

"ಹಸಿರು ಪಟ್ಟೆ ಯಾಕೆ ಹಾಕಿದ್ರಿ"
"ಗುರ್ತಿಗೆ"...
ಹಿಡಿದಿದ್ದ ನಾಯಿನೆಲ್ಲ ಗಾಡಿಗೆ ಹಾಕಿದ್ರು. ಗಾಡಿ ಬುರ್. ಅದರ ಹಿಂದೆ ಸೀನಣ್ಣನ ಗಾಡಿನೂ.. ಬುರ್. ರಾಮಿಗೆ ಬಿಸಿ ತುಪ್ಪ. ಯಾರಿಗೂ ಹೇಳ್ದೆ ಮನೆ ಕಡೆಗೆ ಹೊರಟ.

ನಾನೂ ನಿಧಾನವಾಗಿ ನಮ್ಮ ಬೀದಿಗೆ ಬಂದೆ. ಮನೆ ಗೇಟು ತೇಗಿತಾಯಿರೋವಾಗ ಹಿಂದಿನಿಂದ ಯಾರೋ ನಕ್ಕಂತೆ ಆಯ್ತು. ಹಿಂತಿರುಗಿದೆ, ಯಾರೂ ಇಲ್ಲ. ಯವುದೋ ಬಿಳಿ ನಾಯಿ. ಕಣ್ಣಗಳ ನಡುವೆ ಕಂದು ನಾಮ!. ಅಷ್ಟೊತ್ತಿಗೆ ಮಗ ಅಲ್ಲಿಗೆ ಬಂದ. ವಿಷಯ ಹೇಳ್ದೆ, ಅವ್ನೂ ನಕ್ಕ. "ಅಪ್ಪಾ ರಾಮಿನ ಕಚ್ಚಿದ್ದು ಕಂದು ನಾಯಿ ಅಲ್ಲ, ಈಗ ಹೋಯ್ತಲ್ಲಾ, ಅದೇ ಬಿಳಿ ನಾಯಿ, ಟಾಮಿ. ಈ ಬೀದಿಲೇ ಇರುತ್ತೆ. ಕಚ್ಚಿದ್ದು ಬಿಟ್ಟು ಬೇರೆ ಹೊತ್ತಕ್ಕೊಂಡು ಹೋಗಿದಾರೆ. ರಾಮಿಗೆ ಕಚ್ಚಿದಾಗ ನಾನು ಹಿಂದೆನೇ ಇದ್ದೆ. ಸರಿಯಾಗೇ ನೋಡಿದಿನಿ. ರಾಮಿನ ಕಚ್ಚಿದ್ದು ಟಾಮಿ"
ಮತ್ತೆ ಯಾರೋ ನಕ್ಕಂತೆ ಆಯ್ತು. ತಲೆ ಎತ್ತಿ ನೋಡದ್ರೆ, ಟಾಮಿ!!.
"ಇನ್ನು ಹತ್ತು ದಿವ್ಸಕ್ಕೆ ಹಸಿರುಹಚ್ಚೆ ಹಾಕಿಸ್ಕೊಂಡವ್ರೂ ವಾಪಸ್‌ಬರ್ತಾರೆ" ಅಂತ ಟಾಮಿ ಹೇಳಿದ್ದು ಕೇಳಿಸ್ತು!. ಜೊತೆಗೆ ಜೋರು ನಗೂನೂ.!!. ಕೇಳಿಸ್ತು.

೫. ಕೆ.ಎನ್.ಭಗವಾನ್



ಹಂಪಿ ಸುಂದರಿಯ ಕನ್ನಡಾಭಿಮಾನ

’ಧಾನ್ಯ ಧಾನ್ಯದ ಮೇಲೂ ಅದನ್ನು ತಿನ್ನುವವನ ಹೆಸರಿರುತ್ತದೆ’ ಎಂಬ ಅರ್ಥದ ಹಿಂದಿ ಗಾದೆಯೊಂದಿದೆ. ಅದನ್ನು ಅನ್ನದ ಋಣ ಅಂತಲೂ ಅನ್ನಬಹುದು.. ಎಲ್ಲೋ ಹುಟ್ಟಿ ಎಲ್ಲೋ ಬೆಳೆದು, ಇನ್ನೆಲ್ಲೋ ನೆಲೆ ನಿಂತು ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿರುವ ಅನೇಕರು ನಮಗೆ ಕಾಣಸಿಗುತ್ತಾರೆ. ಕನ್ನಡ ನೆಲದಲ್ಲಿ ಹುಟ್ಟಿ,ಮನೆ ಮಾತು ಕನ್ನಡವಾಗಿಯೂ ಬೇರೊಂದು ಭಾಷೆಯಲ್ಲಿ ಬೆಳಗಿದವರ ಉದಾಹರಣೆಗಳೂ ಹಲವುಂಟು. ಅಂಥವರಲ್ಲಿ ಕಳೆದ ಜನವರಿ ೨೭ ರಂದು ತಮ್ಮ ೮೬ ನೇ ವಯಸ್ಸಿನಲ್ಲಿ ಶಾಸ್ವತ ನಕ್ಷತ್ರವಾದ ಚತುರ್ಭಾಷಾ ತಾರೆ ಜಮುನಾ ಕೂಡಾ ಒಬ್ಬರು.



ನಿಪ್ಪಾಣಿ ಶ್ರೀನಿವಾಸ ರಾವ್- ಕೌಸಲ್ಯಾದೇವಿ ದಂಪತಿಗಳಿಗೆ ೧೯೩೬ ರ ಆಗಷ್ಟ್ ೩೦ ರಂದು ಹಂಪಿಯಲ್ಲಿ ಜನಿಸಿದ ಜಮುನಾಗೆ ಐದಾರು ವರ್ಷಗಳವರೆಗೆ ಕನ್ನಡವಲ್ಲದೆ ಬೇರೊಂದು ಭಾಷೆ ಮಾತಾಡಲೂ ಬರುತ್ತಿರಲಿಲ್ಲವಂತೆ.ತಂಬಾಕು, ಅರಿಶಿನಗಳ ರಫ್ತು ವ್ಯಾಪಾರದಲ್ಲಿ ತೊಡಗಿದ್ದ ತಂದೆ ನೆಲೆಯೂರಿದ್ದು ತೆನಾಲಿಗೆ ಹತ್ತು ಕಿಮೀ ದೂರದಲ್ಲಿರುವ ದುಗ್ಗಿರಾಲ ಎಂಬ ಊರಿನಲ್ಲಿ.ಹಾಗಾಗಿ ಶಾಲೆಯಲ್ಲಿ ಕಲಿತಿದ್ದು ತೆಲುಗು..ತಾಯಿ ಸಂಗೀತ ಕಲಿತವರಾಗಿದ್ದ ಕಾರಣ ಹಾಡುವ ಅಭ್ಯಾಸ ಮಗಳಿಗೂ ಬಂತು.ಶಾಲಾ ಸಮಾರಂಭಗಳಲ್ಲಿ ಪ್ರಾರ್ಥನೆ, ನಾಟಕಗಳಲ್ಲಿ ಪಾತ್ರ ಇಲ್ಲವೆ ನೃತ್ಯ ಮುಂತಾದ ಚಟುವಟಿಕೆಗಳನ್ನು ಗುರ್ತಿಸಿದವರು ’ಪ್ರಜಾ ನಾಟ್ಯ ಮಂಡಳಿ’ ಯ ಮಾಲಿಕ ಹಾಗೂ ನಟ ಗರ್ಕಿಪಾಟಿ ರಾಜಾರಾವ್..ಆತ ಮದರಾಸಿನಲ್ಲಿ ನಿರ್ಮಿಸಿದ ’ಪುಟ್ಟಿಲ್ಲು’ ಚಿತ್ರದಲ್ಲಿ ಹದಿನಾರರ ಹರೆಯದ ಈ ಹುಡುಗಿಗೆ ಮುಖ್ಯ ಪಾತ್ರ ನೀಡುವ ಮೂಲಕ ಚಿತ್ರರಂಗಕ್ಕೆ ಪರಿಚಯಿಸಿದರು. ಆರಂಭದಲ್ಲಿ ಜಮುನಾ ಅವರನ್ನು’ ಹಂಪಿ ಸುಂದರಿ, ಆಂಧ್ರದ ನರ್ಗೀಸ್’ ಎಂದು ಗುರ್ತಿಸಲಾಗುತ್ತಿತ್ತಂತೆ. ಕನ್ನಡದಲ್ಲಿ ಆಕೆ ನಟಿಸಿದ ಮೊದಲ ಚಿತ್ರ- ೧೯೫೪ ರಲ್ಲಿ ತೆರೆಕಂಡ ’ಆದರ್ಶ ಸತಿ’.ಪದ್ಮಿನಿ ಪಿಕ್ಚರ್ಸ್ ನಿರ್ಮಿಸಿದ ’ರತ್ನಗಿರಿ

ರಹಸ್ಯ' ಆಕೆಗೆ ಜನಪ್ರಿಯತೆ ತಂದುಕೊಟ್ಟ ಮಹೋನ್ನತ ಸಾಹಸ,ಸಂಗೀತಮಯ ಚಿತ್ರ.ಡಾ.ರಾಜಕುಮಾರ್ ಅವರೊಂದಿಗೆ ನಟಿಸಿದ ಎರಡು ಚಿತ್ರಗಳೆಂದರೆ– 'ಭೂಕೈಲಾಸ' ಮತ್ತು 'ಸಾಕ್ಷಾತ್ಕಾರ'.ಇನ್ನೊಂದು ಚಿತ್ರ –ವಿಕ್ರಂ ಪ್ರೊಡಕ್ಷನ್ಸ್ ನ'ತೆನಾಲಿ ರಾಮಕೃಷ್ಣ ಪೂರ್ಣಗೊಳ್ಳಲಿಲ್ಲ.ಹುಣಸೂರು ಕೃಷ್ಣಮೂರ್ತಿ ನಿರ್ಮಿಸಿದ 'ಗುರು ಸಾರ್ವಭೌಮ ಶ್ರೀ ರಾಘವೇಂದ್ರ ಕರುಣೆ' ಆಕೆ ಕನ್ನಡದಲ್ಲಿ ನಟಿಸಿದ ಕೊನೆಯ ಚಿತ್ರ.ಪೌರಾಣಿಕ ಚಿತ್ರಗಳಲ್ಲಿ ಎನ್.ಟಿ.ರಾಮರಾವ್ ಹೇಗೆ 'ಅಭಿನವ ಕೃಷ್ಣ' ಎನಿಸಿಕೊಂಡಿದ್ದರೋ ಹಾಗೆ ಸತ್ಯಭಾಮೆ ಪಾತ್ರದಲ್ಲಿ ಜಮುನಾ ಒಂದು ಮಾದರಿ.ತೆಲುಗು,ಕನ್ನಡ,ತಮಿಳು,ಹಿಂದಿ– ಈ ನಾಲ್ಕೂ ಭಾಷೆಗಳಲ್ಲಿ ಆಕೆ ನಟಿಸಿದ್ದು ಒಟ್ಟು ೧೯೮ ಚಿತ್ರಗಳು.

ಕನ್ನಡ ರಾಯ, ಆಂಧ್ರಭೋಜ ಎಂದು ಕರೆಸಿಕೊಂಡ ವಿಜಯನಗರ ಸಾರ್ವಭೌಮ ಕೃಷ್ಣದೇವರಾಯ ಕನ್ನಡಿಗನೋ,ತೆಲುಗನೋ ಎಂಬ ಜಿಜ್ಞಾಸೆ ಇರುವಂತೆ ಜಮುನಾ ವಿಷಯದಲ್ಲೂ ಸಹ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ ಕಪ್ಪು ಬಿಳುಪಿನ ಚಿತ್ರ ' ಸಾಕ್ಷಾತ್ಕಾರ' ೧೯೭೧ ರಲ್ಲಿ ತೆರೆಕಂಡಿತು.ಬಹು ವರ್ಷಗಳ ನಂತರ ಕನ್ನಡ ಮೂಲದ ಜಮುನಾ ಆ ಚಿತ್ರದ ನಾಯಕಿಯಾಗಿದ್ದರೂ,ಆಕೆಯ ಅಭಿನಯಕ್ಕೆ ಧ್ವನಿದಾನ ಮಾಡಿದ್ದು ನೇರೊಬ್ಬ ನಟಿ.ಈಗಿನ ಸಂದರ್ಭದಲ್ಲಿ ಅದೇನೂ ಅಪರೂಪದ ವಿಚಾರವಲ್ಲ.ಆದರೂ 'ಶುದ್ಧ ಕನ್ನಡ ಬಾರದ ತೆಲುಗು ನಟಿಯನ್ನು ಕರೆತಂದು ಅನ್ಯರಿಂದ ಧ್ವನಿದಾನ ಮಾಡಿಸುವ ದರ್ದಾದರೂ ಏನಿತ್ತು?' ಎಂಬುದಾಗಿ ನಿರ್ದೇಶಕ ಪುಟ್ಟಣ್ಣನವರ ಮೇಲೆ ಹಲವಾರು ಪತ್ರಿಕೆಯವರಿಂದ ಟೀಕಾ ಪ್ರಹಾರ! ಚಿತ್ರ ನಿರೀಕ್ಷಿತ ಮಟ್ಟದಲ್ಲಿ ಹಣ ಮಾಡಲಿಲ್ಲ.

ಪ್ರಸ್ತುತ ಕೆಂಪೇಗೌಡ ಬಸ್ ನಿಲ್ದಾಣವಿರುವ ಜಾಗವನ್ನು ೧೯೮೦ ರ ವರೆಗೂ ಸುಭಾಶ್ ನಗರ ಮೈದಾನ ಎಂದು ಕರೆಯಲಾಗುತ್ತಿತ್ತು.ಪ್ರತಿ ವರ್ಷ ಅಲ್ಲಿ ಕಾಂಗ್ರೆಸ್ ಎಕ್ಸಿಬಿಷನ್ ಏರ್ಪಡುತ್ತಿತ್ತು. ಮೈದಾನದ ಹಿಂಬದಿಗೆ ಮಾಸ್ಟರ್ ಹಿರಣ್ಣನವರ ನಾಟಕ ಮಂಡಳಿ ರಂಗಮಂದಿರ ನಿರ್ಮಿಸಿ ಲಂಚಾವತಾರ, ಭ್ರಷ್ಟಾಚಾರ, ನಡುಬೀದಿ ನಾರಾಯಣ,ಮಿತ ಸಂತಾನ ಮುಂತಾದ ನಾಟಕಗಳನ್ನು ಆಡುತ್ತಿತ್ತು.ಲಂಚಾರವತಾರದ ಯಶಸ್ಸು ಒಂದೊಂದು ಮೈಲಿಗಲ್ಲನ್ನು ತಲುಪಿದ ಸಂದರ್ಭದಲ್ಲಿ ಕೆಲವೊಂದು ಕ್ಷೇತ್ರಗಳ ಸಾಧಕರನ್ನು ಸನ್ಮಾನಿಲಾಗುತ್ತಿತ್ತು. ೧೯೭೨ ರಲ್ಲಿ – ಖಚಿತ ದಿನ,ತಿಂಗಳು ನೆನಪಿಲ್ಲ– ಅಂಥದ್ದೊಂದು ಸಂದರ್ಭಕ್ಕೆ ನಾನೂ,ನನ್ನ ಹಿಂದೂಪುರದ ಒಬ್ಬ ಹೊಸ ಗೆಳೆಯ ಸಾಕ್ಷಿಯಾಗಿದ್ದೆವು.ನಾಟಕದ ಮಧ್ಯಂತರ ಸಮಯದಲ್ಲಿ ಮಾಸ್ಟರ್ ಹಿರಿಯಣ್ಣನವರ ಜೊತೆ ರಂಗದ ಮೇಲೆ ಸರಳುಡುಗೆಯ ಅಪ್ಸರೆಯಂತೆ ಕಾಣಿಸಿಕೊಂಡವರು ಚತುರ್ಭಾಷಾ ತಾರೆ ಜಮುನಾ.! ತೆಳು ಗುಲಾಬಿ ವರ್ಣದ ಸೀರೆಯುಟ್ಟು,ತುರುಬಿನಲ್ಲಿ ಗುಲಾಬಿ

ಮುಡಿದಿದ್ದ ಆಕೆ ಮೈಕು ಹಿಡಿದು ' ನನ್ನ ಅಭಿಮಾನಿ ಕಲಾ ಪ್ರೇಮಿಗಳೇ..' ಎಂದು ಮಾತಿಗಾರಂಭಿಸಿದ್ದೇ ಆಯಿತು, ಚಪ್ಪಾಳೆಗಳ ಸುರಿಮಳೆ! ಸುಮಾರು ಇಪ್ಪತ್ತು ನಿಮಿಷಗಳ ಕಾಲ ಅಚ್ಚಗನ್ನಡದಲ್ಲಿ ಸುಲಲಿತವಾಗಿ ಮಾತಾಡಿ ಎಲ್ಲರನ್ನೂ ಚಕಿತಗೊಳಿಸಿದರು.. 'ನಾನು ಹುಟ್ಟಿದ್ದು ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯಲ್ಲಿ. ನನ್ನ ಮಾತೃಭಾಷೆ ಕನ್ನಡ, ಅದನ್ನು ಉಸಿರಿರುವವರೆಗೂ ಮರೆಯಲಾರೆ,ಕನ್ನಡ ಚಿತ್ರಗಳಿಗೆ ಸೀಮಿತ ಮಾರುಕಟ್ಟೆ ಇರುವ ಕಾರಣ ನನಗೆ ಹೆಚ್ಚಿನ ಅವಕಾಶಗಳು ಸಿಕ್ಕಿದ್ದು ತೆಲುಗಿನಲ್ಲಿ.ರಾಜ್ ಕುಮಾರ್, ಆರ್.ನಾಗೇಂದ್ರರಾವ್,ಪೃಥ್ವಿರಾಜ್ ಕಪೂರ್ ಅವರಂಥ ಶ್ರೇಷ್ಠ ಕಲಾವಿದರ ಜೊತೆ ಸಾಕ್ಷಾತ್ಕಾರದಲ್ಲಿ ಅಭಿನಯಿಸಿದ್ದು ನನಗೊಂದು ಹೆಮ್ಮೆಯ ವಿಷಯ.ಆದರೆ ವಾಯ್ಸ್ ಡಬ್ಬಿಂಗ್ ಸಮಯದಲ್ಲಿ ನಾನು ಹಿಂದಿ ಚಿತ್ರದಲ್ಲಿ ಅಭಿನಯಿಸಲು ಮುಂಬೈಗೆ ಹೋಗಿದ್ದೆ, ಪುಟ್ಟಣ್ಣನವರು ನನಗಾಗಿ ಕಾಯದೆ ಬೇರೊಬ್ಬರಿಂದ ವಾಯ್ಸ್ ಡಬ್ಬಿಂಗ್ ಮಾಡಿಸಿದರು.ಎಂಬುದಾಗಿ ಹೇಳಿ ತಮ್ಮ ಕನ್ನಡ ಭಾಷಾಪ್ರೇಮವನ್ನು ಸಮರ್ಥಿಸಿದರು.

ನನ್ನ ಹಿಂದೂಪುರದ ಗೆಳೆಯನಿಗೆ ಕನ್ನಡ ಚಲನಚಿತ್ರಗಳೆಂದರೆ ಅದೆಂಥದ್ದೋ ಉದಾಸೀನ.

ಆವೊಂದು ದಿನದಿಂದ ಅವನು ಕನ್ನಡ ಭಾಷಾಪ್ರೇಮಿಯಾಗಿ ಮನಸ್ಸು ಬದಲಾಗಲು, ಹಿರಣ್ಣಯ್ಯವರು ನಾಟಕದಂತೆ ಜಮುನಾ ಆಡಿದ ಅಭಿಮಾನದ ಮಾತುಗಳೂ ಸಹ ಗಾಢ ಪ್ರಭಾವ ಬೀರಿರಲು ಸಾಧ್ಯ.

೬. ಪೋಲೇನಹಳ್ಳಿ ರಮೇಶ್



ಅರವತ್ತಾಯಿತು ಎಂದರೆ

ಅರವತ್ತಾಯಿತು ಎಂದರೆ
ಮೆಲ್ಲ ವಾಲಿದಂತೆ ಕಂಬ
ನಿಧಾನ ನೆಲಕೊರಗಿ
ದಿನ ಎಣಿಕೆ ಆರಂಭ

ಬಿಸಿಲು ತಗ್ಗಿ ಸಂಜೆಯಾಗಿ
ಬದುಕು ತುಸು ವಿಳಂಬ
ಹೊಸ್ತಿಲ ಹೊರಗೆ ಬೆಳಕು
ನೆರಳು ತುಂಬಾ ಲಂಬ

ಹಗಲೆಲ್ಲ ಉರಿದ ಪಂಜು
ಬೂದಿಯಲ್ಲಿ ಹುದುಗಿ
ಕೆದಕಿದರೆ ಕಾವು ಎದೆಗೆ
ಛಳಿಗೆ ಮನಸು ನಲುಗಿ

ಏದುಸಿರಿನ ಬಿಸಿಯು ತಗ್ಗಿ
ಉಸಿರು ಈಗ ಸರಾಗ
ಸೋತ ಯುದ್ಧಗಳಿಗೆ ಒಗ್ಗಿ
ಮನಸು ಶಾಂತ ಸಾಗರ

ಧಿರಿಸಿನ ಕಟ್ಟಳೆಯ ಬಿಟ್ಟು
ಸಹಜ ನಗೆ ಹರಿಯಬಿಟ್ಟು
ಮಾತನು ಸಹ ಬದಿಗೆ ಇಟ್ಟು
ಮೌನ ನಿಂತ ಹಿಮಶಿಖರ

ರೆಕ್ಕೆಗಳ ಮಕ್ಕಳಿಗೆ ಹಚ್ಚಿ
ಹಿರಿಯನಾದ ವೃದ್ಧ
ಜಗುಲಿ ಮೇಲೆ ಭಜನೆ
ಸರದಿ ವಾನಪ್ರಸ್ತ

ಮೋಡ ಸರಿದಿದೆ ಹುಡುಗಿ

ಎಂತಹ ತೇಜಸ್ಸು ಅವನದು
ಬೆವರಿಳಿಸುವ ನೋಟ
ಕಚಗುಳಿ ಇಡುವ ಬೆರಳುಗಳು
ಬೆಚ್ಚನೆ ಕನಸುಗಳು

ಇನ್ನೇನು ಬೀದಿಗಿಳಿದು
ಕುಣಿಯಬೇಕು ಅವನೊಡನೆ
ಎನ್ನುವಲ್ಲಿ ನೆನಪಿನ ಕರಿಮೋಡ
ಕತ್ತಲ ಮುಸುಕಿತು

ಮೆಲ್ಲನೆ ಕಣ್ಣೀರಿಟ್ಟು
ಜೋರು ಅತ್ತಿತು ಆಕಾಶ
ಛಿಟಿಲ್ಲೆಂಬ ಮಿಂಚು ಎದೆಯಲ್ಲಿ
ಭಗ್ನಗೊಂಡ ಹೃದಯ.

ಮೋಡ ಸರಿದಿದೆ ಹುಡುಗಿ
ಶುಭ್ರ ತಿಳಿಗಾಳಿ ತೀಡಿದೆ
ಈಗ ಇನ್ನೂ ಬೆಳಕಿದೆ
ಕುಣಿಯಬಾರದೆ ಅವನೊಡನೆ?

೭. ಗುರುರಾಜ ಶಾಸ್ತ್ರಿ



ವಿವಾಹ ಪೂರ್ವ ಛಾಯಾಗ್ರಹಣ

"ಇದೇನಿದು, ಮೊಮ್ಮಗಳ ಆರತಕ್ಷತೆ ಇನ್ನೇನು ಆರಂಭವಾಗಬೇಕು, ಆದರೆ ಅಲ್ಲಿ ದೊಡ್ಡ ಪರದೆಯ ಮೇಲೆ ಯಾವುದೋ ಸಿನಿಮಾದ ಹಾಡು ಹಾಕಿದ್ದಾರೆ" ಅಂತ ರಾಮಾಶಾಸ್ತ್ರಿಗಳು ತಮ್ಮ ಸೊಸೆ ಶಾರದೆಗೆ ಕೇಳಿದರು. "ಅಯ್ಯೋ ಅದು ಸಿನಿಮಾ ಹಾಡಲ್ಲ ಮಾವ, ನಮ್ಮ ಅನಿತಾದು ಪ್ರೀ ವೆಡ್ಡಿಂಗ್ ಫೋಟೋಗ್ರಫಿ ವೀಡಿಯೋ" ಎಂದಳು ಶಾರದೆ. "ಅದೆ ಅಂದುಕೊಂಡೆ, ಮುಖ ನೋಡಿದರೆ ನಮ್ಮ ಅನಿತಾ ಇದ್ದ ಹಾಗೇ ಇದೆ, ಆದರೆ ಆ ಉಡುಪು ಆ ವೇಶ ನೋಡಿ ಅನಿತಾ ಅಲ್ವೇನೋ ಅನ್ನಿಸಿತು" ಎಂದರು ರಾಮಾಶಾಸ್ತ್ರಿಗಳು. "ಮಾವ ನೀವು ಸುಮ್ಮನಿರಿ, ಏನೇನು ಹೇಳಿ ರಿಸೆಪ್ಶನ್‌ನಲ್ಲಿ ನಿಲ್ಲಬೇಕಾದ ಹುಡುಗಿ ಮೂಡ್ ಆಫ್ ಮಾಡಬೇಡಿ" ಎನ್ನುತ್ತಾ ಶಾರದೆ ಮಾವನ ಬಾಯಿ ಮುಚ್ಚಿಸಲು ಪ್ರಯತ್ನಪಟ್ಟಳು. "ಏನ್ ಕರ್ಮಾನೋ,ಈ ವೀಡಿಯೋ ನೋಡುದ್ರೆ, ತಾಳಿ ಒಂದು ಕಟ್ಟಿಸಿಕೊಂಡಿಲ್ಲ ಅಷ್ಟೆ. ಅನಿಸುತ್ತೆ, ಇನ್ನೆಲ್ಲಾ ಮುಗಿದುಹೋಗಿರೋ ಹಾಗಿದೆ. ಈ ಪರಿಗೆ ಇಷ್ಟೋಂದು ದುಡ್ಡು ಖರ್ಚು ಮಾಡಿ ಮದುವೆ ಅಂತ ಯಾಕೆ ಮಾಡ್ಬೇಕಿತ್ತೋ" ಎನ್ನುತ್ತಾ ಮಾತು ಮುಂದುವರೆಸಿದರು ರಾಮಾಶಾಸ್ತ್ರಿಗಳು. "ಜಯಪುರದ ಅರಮನೆ, ಕಾರವಾರದ ಸಮುದ್ರ ತೀರ, ಯಾಣಾ ಕಾಡು ಎಲ್ಲಾ ಕಡೆ ಮದುವೆಗೆ ಮುಂಚೆಯೇ ಭಾವಿ ಗಂಡನೊಡನೆ ಹೋಗಲು ಬಿಟ್ಟಿದ್ದೀರೆಲ್ಲಾ, ಬಾಯಿ ಬಡ್ಕೋಬೇಕು ನಿಮ್ಮ ಹೊಸ ಆಟಗಳನ್ನ ನೋಡಿ" ಎಂದಾಗ ಶಾರದೆ, ಮಾವನವರನ್ನು ನಿಧಾನಕ್ಕೆ ಕರೆದುಕೊಂಡು ಹೋಗಿ ಟ.ವಿ.ಪರದೆ ಕಾಣದೇ ಇರೋ ಕುರ್ಚಿಮೇಲೆ ಕೂಡಿಸಿ," ಇಲ್ಲಿಂದ ನೀವು ಏಳ್ಬೇಡಿ ಅಷ್ಟೇ" ಎಂದು ಸ್ವಲ್ಪ ಜೋರಾಗಿಯೇ ಹೇಳಿ ತಾನು ತೊಟ್ಟಿದ್ದ ಪೂರ್ತಿ ಬೆನ್ನು ಕಾಣಿಸುವ ಬ್ಲೌಸ್ ಮಾವನ ಕಣ್ಣಿಗೆ ಬೀಳದಂತೆ ಸೀರೆಯ ಸೆರಗನ್ನು ಹೊದ್ದಿಕೊಂಡು ಸ್ಟೇಜ್ ಕಡೆಗೆ ಹೆಜ್ಜೆ ಹಾಕಿದಳು.



ಇತ್ತೀಚಿನ ದಿನಗಳಲ್ಲಿ ತುಂಬಾ ಸಾಂಪ್ರದಾಯಿಕ ಕುಟುಂಬಗಳ ಮದುವೆಗಳಲ್ಲಿ ಮೇಲಿನ ಸಂಭಾಷಣೆ ನಡೆಯುತ್ತಾ ಇರುತ್ತದೆ. ಏನಿದು ವಿವಾಹ ಪೂರ್ವ ಛಾಯಾಗ್ರಹಣ. ಏನಿದರ ಅವಶ್ಯಕತೆ ಎಂದು ಯೋಚನೆ ಮಾಡಿದರೆ ಎಲ್ಲೂ ಇದಕ್ಕೆ ಸರಿಯಾದ ಉತ್ತರ ಸಿಗುವುದಿಲ್ಲ.

ಅಗತ್ಯಕ್ಕಿಂತ ಹೆಚ್ಚಾಗಿ ಹಣ ಸಂಪಾದಿಸುತ್ತಿದ್ದು ಅದನ್ನು ಬಳಸಲು ಬೇರೆ ಬೇರೆ ದಾರಿಗಳನ್ನು ಜನ ಕಂಡುಕೊಳ್ಳುತ್ತಿರುತ್ತಾರೆ. ಅಂತಹ ದಾರಿಗಳಲ್ಲಿ ಒಂದು ಈ ವಿವಾಹ ಪೂರ್ವ ಛಾಯಾಗ್ರಹಣ ಎಂಬುದು ನನ್ನ ಅನಿಸಿಕೆ. ಇನ್ನು ವಧು ವರರ ತಂದೆ ತಾಯಂದಿರು ಹೇಳುವ ಕಾರಣವೇ ಬೇರೆ. ಮದುವೆಯ ನಿಶ್ಚಿತಾರ್ಥ ಆದಮೇಲೆ, ಒಮ್ಮೆಗೇ ವಿವಾಹವೆಂಬ ವಿಶಾಲವಾದ ಪ್ರಪಂಚಕ್ಕೆ ದೂಡುವ ಮೊದಲು ಹುಡುಗ ಹುಡುಗಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದಕ್ಕೆ ಸಿಕ್ಕಿರುವ ಒಂದು ಒಳ್ಳೇ ಅವಕಾಶ ಈ ವಿವಾಹ ಪೂರ್ವ ಛಾಯಾಗ್ರಹಣ ಎಂದು. ಇನ್ನು ಛಾಯಾಗ್ರಾಹಕರು ಹೇಳುವುದೇನೆಂದರೆ ಯಾವುದೇ ಪೂರ್ವಗ್ರಹಿಕಗಿಳಿಲ್ಲದೆ ಸ್ವೇಚ್ಛೆಯಿಂದ ಕ್ಯಾಮೆರಾಗೆ ಪೋಸ್ ಕೊಡಲು ಹುಡುಗ ಹುಡುಗಿಗಿ ಈ ವಿವಾಹಪೂರ್ವ ಛಾಯಾಗ್ರಹಣದಲ್ಲಿ ಮಾತ್ರ ಸಾಧ್ಯ. ವಿವಾಹದ ನಂತರ ಜವಾಬ್ದಾರಿಯೆಂಬುದೊಂದು ಮನದಲ್ಲಿ ಮೂಡಿ ಮುಖದ ಮೇಲೆ ಅದರೆ ಛಾಯೆ ಬಂದು ಬಿಡುತ್ತದೆ ಎಂದು.

ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯ ಎಂಬಂತೆ ಶ್ರೀಮಂತರು ತಮ್ಮ ಹುಚ್ಚಾಟಕ್ಕೆ ಆರಂಭಿಸಿದ ಈ ವಿವಾಹ ಪೂರ್ವ ಛಾಯಾಗ್ರಹಣ ಈಗ ಒಟ್ಟಾರೆ ವಿವಾಹದ ಖರ್ಚುಗಳಲ್ಲಿ ಒಂದಾಗಿ ಸೇರಿ, ಸಾಲ ಮಾಡಿ ಮದುವೆ ಮಾಡುವವರು ಕೂಡ ವಿವಾಹ ಪೂರ್ವ ಛಾಯಾಗ್ರಹಣ ಮಾಡಿಸಲು ಆರಂಭಿಸಿದ್ದಾರೆ. ಇದಕ್ಕಾಗಿಯೇ ನುರಿತ ಛಾಯಾಗ್ರಾಹಕರು ತಯಾರಾಗಿದ್ದಾರೆ. ಅಂತಹ ಛಾಯಾಗ್ರಾಹಕನೊಬ್ಬ ನನ್ನ ಖಾಸಾ ಗೆಳೆಯ ಇದ್ದಾನೆ. ಅವನೇ ಈ ಲೇಖನ ಬರೆಯಲು ನನಗೆ ಸ್ಫೂರ್ತಿ.

ವಿವಾಹ ಪೂರ್ವ ಛಾಯಾಗ್ರಹಣ ಸುಲಭವಂತು ಖಂಡಿತಾ ಅಲ್ಲ. ಒಮ್ಮೆ ಛಾಯಾಗ್ರಾಹಕರು ಯಾರೆಂದು ಕಂಡುಕೊಂಡಮೇಲೆ, ಕನಿಷ್ಠವೆಂದರು ಐದರಿಂದ ಆರು ಸಲ ಹುಡುಗ ಹುಡುಗಿ ಮತ್ತು ಛಾಯಾಗ್ರಾಹಕರ ಗುಂಪು ಹೋಟಲ್ ಕಾಫಿ ಡೇಗಳಲ್ಲಿ ಭೇಟಿ ಮಾಡಿ ಅವರಿಬ್ಬರಿಗೆ ಇವರು ಎಷ್ಟೋ ದಿನಗಳಿಂದ ಪರಿಚಯ ಮತ್ತು ಈ ಛಾಯಾಗ್ರಾಹಕರ ಗುಂಪು ಅವರ ಆಪ್ತ ಮಿತ್ರರು ಎಂಬ ಮನವರಿಕೆಯಾಗಬೇಕು. ಈ ಛಾಯಾಗ್ರಾಹಕರು ಹೇಳುವ ಭಂಗಿಗಳಲ್ಲಿ ನಿಲ್ಲಬೇಕು, ನಗು ಎಂದಾಗ ನಗಬೇಕು, ಕೋಪ ನಾಚಿಕೆ ಹೇಗೆಲ್ಲಾ ಬೇರೆ ಬೇರೆ ಭಾವಗಳನ್ನು ಮುಖದಲ್ಲಿ ತೋರಿಸಬೇಕು, ಹುಡುಗನಂತು ಮರದಿಂದ ಹಾರಬೇಕು, ಕಾಂಪೌಂಡ್ ಹತ್ತಬೇಕು, ಮಂಡಿಗಾಲಲ್ಲಿ ಕೂರಬೇಕು

ಹೀಗೆ ಹಲವು ವಿಷಯಗಳಿಗೆ ಛಾಯಾಗ್ರಾಹಕರು ಡೈರೆಕ್ಟರ್ ಆಗುತ್ತಾರೆ. ಹೀಗಾಗಿ ಛಾಯಾಗ್ರಾಹಕರ ಮೇಲೆ ಹುಡುಗ ಹುಡುಗಿಗೆ ಸಂಪೂರ್ಣ ನಂಬಿಕೆ ಇರಬೇಕೆಂಬುದು ಪೂರ್ಣ ಸತ್ಯ.

ವಿವಾಹ ಪೂರ್ವ ಛಾಯಾಗ್ರಹಣ ಬೇರೆ ಬೇರೆ ಊರುಗಳಲ್ಲಿ ನಡೆಯುತ್ತದೆ. ಈ ಸಮಯದಲ್ಲಿ ಹುಡುಗಿಗೆ ತುಂಬಾ ಹೊಂದಿಕೊಂಡಿರುವ ಅವಳ ಚಿಕ್ಕಮ್ಮ, ಅಥವಾ ಅಕ್ಕ ಹೀಗೆ ಯಾರಾದರೊಬ್ಬರು ಹಿರಿಯರು ಇವರ ಜೊತೆ ಪ್ರಯಾಣಿಸಬೇಕೆಂಬುದು ಛಾಯಾಗ್ರಾಹಕರ ಒಂದು ನಿಯಮ. ಮದುವೆಗೆ ಮುಂಚೆಯೇ ಹುಡಗನೊಂದಿಗೆ ಮಗಳನ್ನು ಪರ ಊರುಗಳಿಗೆ ಕಳಿಸ ಬೇಕಾಗಿರುವುದರಿಂದೆ ಹೀಗೆ ಜೊತೆಯಲ್ಲೊಬ್ಬರು ಹಿರಿಯರಿದ್ದರೆ ತಂದೆತಾಯಿಗೂ ಸ್ವಲ್ಪ ಧೈರ್ಯ. ಅಷ್ಟೇ ಅಲ್ಲ ಹುಡುಗಿ ಆಗಾಗ ಮೇಕಪ್ ಬದಲಾಯಿಸುವುದು, ಹೊಸ ಉಡುಪುಗಳನ್ನು ಶೀಘ್ರವಾಗಿ ಧರಿಸಬೇಕಾದ ಸಂದರ್ಭದಲ್ಲಿ ಈ ಹಿರಿಯರ ಸಹಾಯದ ಅವಶ್ಯಕತೆ ಇರುತ್ತದೆ.

ಸುಮಾರು ನಾಲ್ಕರಿಂದ ಐದು ಕ್ಯಾಮೆರಾ ಹೊತ್ತ ಛಾಯಾಗ್ರಾಹಕರು, ಹುಡುಗ ಹುಡುಗಿಗೆ ಉಡುಪು ಬದಲಾಯಿಸಿಕೊಳ್ಳಲು ಅವಶ್ಯವಾದ ಟೆಂಟ್‌ಗಳು ಮತ್ತು ಫ್ಲಾಶ್ ಲೈಟುಗಳನ್ನು ಹೊತ್ತಿಕೊಂಡು ಓಡಾಡುವ ಸಹಾಯಕರು, ಹುಡುಗ, ಹುಡುಗಿ ಮತ್ತು ಹಿರಿಯ ಬಂಧು ಹೀಗೆ ಸುಮಾರು ಏಳರಿಂದ ಎಂಟು ಜನರ ಪ್ರಯಾಣ ನಿಶ್ಚಿತಾರ್ಥದ ನಂತರ ಆರಂಭವಾಗುತ್ತದೆ. ಈ ಛಾಯಾಗ್ರಾಹಕರಲ್ಲಿ ಒಬ್ಬ ಅವಿತು ಛಾಯಾಗ್ರಹಣ ಮಾಡುವವನು. ಇವನು ಈ ಗುಂಪಿನಲ್ಲಿ ಇರುವುದು ಹುಡುಗ ಹುಡುಗಿಗೆ ತಿಳಿದೇ ಇರುತ್ತದೆ, ಆದರೆ ಇವನು ಎಲ್ಲಿ ಅವಿತು ಕುಳಿತು ಕ್ಯಾಮೆರಾದಿಂದ ಫೋಟೋ ವೀಡಿಯೋ ತೆಗೆಯುತ್ತಿದ್ದಾನೆ ಎಂಬುದು ಗೊತ್ತಿರುವುದಿಲ್ಲ. ಗಿಡದ ಪೊದೆಗಳ ಮಧ್ಯದಲ್ಲೋ, ಮರದ ಕೊಂಬೆಯ ಮೇಲೋ ಅಥವಾ ಯಾವುದೋ ಕಟ್ಟಡದ ಬಾಲ್ಕನಿಯಲ್ಲೋ ಇವನು ಅವಿತು ಕುಳಿತಿರುತ್ತಾನೆ. ಕಾಡು, ಪಾರ್ಕು, ಸಮುದ್ರ ತೀರ, ಬೆಟ್ಟ ಗುಡ್ಡ ಎಲ್ಲಾ ಕಡೆಯೂ ಇವರುಗಳ ಛಾಯಾಗ್ರಹಣ ಕಾರ್ಯಕ್ರಮ ನಡೆಯುತ್ತದೆ.

ಸುಮಾರು ಹತ್ತು ಗಂಟೆಗಳಷ್ಟು ಛಾಯಾಗ್ರಹಣ ಮಾಡಿ ಅದರಲ್ಲಿ ಹತ್ತು ನಿಮಷದಷ್ಟು ಮಾತ್ರ ಬೇರೆ ಮಾಡಿ ಅದನ್ನು ಒಂದು ಸಿನಿಮಾ ಹಾಡಿಗೆ ಜೋಡಿಸಿದರೆ ಅದು ಮದುವೆಯ ಆರತಕ್ಷತೆಯಲ್ಲಿ ಪ್ರದರ್ಶಿಸಲು ಸಿದ್ಧ ಎಂದರ್ಥ. ಇದನ್ನು ನೋಡಿದ ವಿವಾಹ ಆಹ್ವಾನಿತರು, ‘‘ಪರವಾಗಿಲ್ಲ ಕಣೇ, ನಿನ್ನ ಮಗಳನ್ನು ಏನೋ ಅಂದುಕೊಂಡಿದ್ದೆ, ತುಂಬಾ ಬೋಲ್ಡ್ ಆಗಿದ್ದಾಳೆ’’ ಎಂದು ಬಿಟ್ಟರೆ, ತಲೆಯ ಮೇಲೆ ಗರಿ ಸಿಕ್ಕಿಸಿಕೊಂಡಷ್ಟು ಸಂತೋಷ ತಂದೆ ತಾಯಿಗೆ ಮತ್ತು ಎರಡರಿಂದ ಮೂರು ಲಕ್ಷ ಖರ್ಚುಮಾಡಿದ್ದಕ್ಕೆ ಸಾರ್ಥಕ ಮನೋಭಾವ.

ಈ ರೀತಿ ಕೆಲವೊಮ್ಮೆ ಮಿತಿಯನ್ನು ಮೀರಿ ತಯಾರಿಸುವ ಈ ವೀಡಿಯೋ ನನಗೆ ಬೇಡವೇ ಬೇಡವೆಂದು ನನ್ನ ಬಂಧುವಿನ ಮಗಳೊಬ್ಬಳು, ಕಡೆಗೆ ನನ್ನನ್ನೇ ತನ್ನ ವಿವಾಹ ಪೂರ್ವ ಛಾಯಾಗ್ರಹಣ ಮಾಡಲು ಕರೆದುಕೊಂಡು ಹೋಗಿದ್ದಳು. ಕೇವಲ ಪಕ್ಷಿ ಪ್ರಾಣಿ ಫೋಟೋ ತೆಗೆಯುವ ನನಗೆ ಇದೊಂದು ಹೊಸ ಸವಾಲೇ ಆಗಿತ್ತು. ಆದರೂ ಅವಳ ಮದುವೆಯಲ್ಲಿ ಬಂದ ಜನ ಈ ಫೋಟೋಗಳು ಚೆನ್ನಾಗಿದೆ ಎಂದಾಗ ನಾನು ಮಾಡಬಹುದಾದ ಇನ್ನೊಂದು ಕಸುಬು ನನಗೆ ಗೊತ್ತಾಯಿತು.

ಇತ್ತೀಚೆಗೆ ನಾನು ಕೆಮ್ಮಣ್ಣುಗುಂಡಿಗೆ ಪಕ್ಷಿ ಛಾಯಾಗ್ರಹಣಕ್ಕೆ ಹೋದಾಗ ಈ ರೀತಿಯ ವಿವಾಹ ಪೂರ್ವ ಛಾಯಾಗ್ರಹಣ ಗುಂಪು ನಮಗೆ ಸಿಕ್ಕಿತ್ತು. ಬೇರೆ ಪ್ರವಾಸಿಗರು ಇದ್ದಾರೆಂಬಾ ಪರಿವೆಯೇ ಇಲ್ಲದೆ ಈ ಗುಂಪು ತಮ್ಮದೇ ಪ್ರಪಂಚದಲ್ಲಿ ಮುಳುಗಿಹೋಗಿರುತ್ತಾರೆ. ಅವಿವಾಹಿತರು ಈ ಹುಡುಗ ಹುಡುಗಿಯ ಪರದಾಟವನ್ನು ನೋಡಿ ಅಯ್ಯೋ ಪಾಪ ಎಂದು ಕರುಣೆ ತೋರಿದರೆ, ವಿವಾಹಿತರು "ಅಯ್ಯೋ ನಮ್ಮ ಸಮಯದಲ್ಲಿ ಇವೆಲ್ಲಾ ಇರಲೇ ಇಲ್ಲವಲ್ಲ" ಎಂದು ಕೊರಗುತ್ತಾರೆ, ಮತ್ತು ವೃದ್ಧರು ಇವರುಗಳನ್ನು ನೋಡಿ, ಹುಚ್ಚಲ್ಲ, ಬೆಪ್ಪಲ್ಲ ಶಿವಲೀಲೆ ಅಷ್ಟೇ ಎಂದು ಯಾರಿಗೂ ಕೇಳದ ಹಾಗೇ ತಮ್ಮಷ್ಟಕ್ಕೆ ತಾವೇ ವದರಿಕೊಳ್ಳುತ್ತಿರುತ್ತಾರೆ.

ಕೆಟ್ಟ ಭಂಗಿಗಳಲ್ಲಿ ನಿಂತು, ಕಣ್ಣಿಗೆ ಹೊಡೆಯುವ ಫ್ಲಾಷ್ ದೀಪಗಳನ್ನು ಬಳಸುವ, ಕಿವಿ ಕತ್ತುಹೋಗುವಷ್ಟು ಜೋರಾಗಿ ಹಾಡುಗಳನ್ನು ಹಾಕಿ ಪ್ರವಾಸಿಗರಿಗೆ ತೊಂದರೆಯಾಗುತ್ತಿರುವ ಈ ಛಾಯಾಗ್ರಹಣವನ್ನು ಲಾಲ್‌ಬಾಗ್, ಕಬ್ಬನ್ ಪಾರ್ಕಿನಂತಹ ಸಾರ್ವಜನಿಕ ಪಾರ್ಕ್‌ಗಳಲ್ಲಿ ನಿಷೇಧಿಸಲಾಗಿದೆ.

ಇಲ್ಲಿಯವರೆಗೆ ನನ್ನಿಂದ ತಯಾರಾಗಿದ್ದು ಒಂದೇ ಒಂದು ವಿವಾಹ ಪೂರ್ವ ಛಾಯಾಗ್ರಹಣ. ಸಾಂಪ್ರದಾಯಿಕವಾಗಿ ಈ ರೀತಿಯ ವಿವಾಹ ಪೂರ್ವ ಛಾಯಾಗ್ರಹಣ ಮಾಡುವ ನನ್ನಂತಹವರು ಯಾರಿಗೂ ಬೇಕಿಲ್ಲ ಅಲ್ಲವೇ, ನೀವೇನಂತೀರಿ.

೮. ನಾಗರತ್ನ ಚಂದ್ರಶೇಖರ



ಒಲೆ,ಚಹಾ,ಮನಸ್ಸು.

ಕುದಿಯುತ್ತಲೇ ಇತ್ತು ಒಲೆಯ ಮೇಲೆ
ಹಾಲು, ನೀರು ,ಹಾಕಿದ ಪಾತ್ರೆಯೊಳಗೆ
ಚಹಾದ ಎಲೆಗಳೊಂದಿಗೆ ,ಶುಂಠಿ ,ಪುದೀನಗಳು.
ಅಯ್ಯೋ !ಅದೇಕೆ ಅಷ್ಟೊಂದು ಕುದಿಸುತ್ತೀರಿ?

ಹಾಗೆ ಮಾಡಿದರೆ ಚಹಾದ ನೈಜ ರುಚಿ ಹೋದೀತು
ಹಾಗಲ್ಲ ಮೇಡಂ ,ಇದೇ ಸರಿಯಾದ ರೀತಿ !
ಅದು ಕುದ್ದಷ್ಟು ಅವೆಲ್ಲದರ ಸತ್ವ ಚಹಾದ ಒಳಗೆ ಇಳಿದು
ಒಳ್ಳೆ ಪರಿಮಳ ಬರುತ್ತದೆ ನೋಡಿ.

ಹೀಗೇ ಕುದಿಯುವುದಲ್ಲವೇ? ಆಗಾಗ ಸಿಟ್ಟಿಗೆದ್ದ ಮನ
ಆಗೆಲ್ಲ ಬರುವುದೇ ಪರಿಮಳಯುಕ್ತ ಮಾತುಗಳು?
ಕುದಿಯುತ್ತಲೇ ಇರುವ ಗಂಜಿ ಒಳಗಿನ ಅಕ್ಕಿ,
ಅರಳಿ ಅನ್ನವಾದೊಡನೆ ಬಸಿದು ಬಿಡಬೇಕಲ್ಲವೇ?

ಕುದ್ದು,ಕುದ್ದು ತನ್ನೊಳಗೆ ತಾನೆ
ಕರಟಿ ಹೋಗುವ ಮುನ್ನ
ಒಲೆಯ ಉರಿಯನೊಮ್ಮೆ
ಆರಿಸಿ ಬಿಡಿ ಸಾಕು.

ಕುದಿಸಿ ಆರಿಸಿದ ನೀರು ಆರೋಗ್ಯವಂತೆ
ಕುದ್ದು ಆರಿದ ಮನಸ್ಸು ಆಪ್ಯಾಯ ಮಾನವೆ?
ಕುದಿ ಬರದೇ ಬೇಳೆ ಬೇಯಿಸಲಾಗದು
ಕುದಿಯುವ ಮನಸ್ಸಿಗೆ ಯಾವ ಮಾತೂ ಹಿತವಾಗದು .

ಕಾವಿಯೊಳಗಿನ ಕಾಮಿಯ ಕ್ರೌರ್ಯ ಕಂಡಾಗ
ಉರಿಯದಿರದೆ ಮನಸ್ಸು !
ಇನ್ನೂ ಅರಳದ ಮೊಗ್ಗುಗಳ ಹಿಸುಕಿದವರ
ಕತ್ತು ಹಿಸುಕಬೇಕೆಂದು!

ಆಹಾ ಕುದಿಯ ಬೇಕಂತೆ ಚಹಾದ ನೀರು
ಪರಿಮಳ ಬಿಡುವ ತನಕ
ಕಾಯ ಬಲ್ಲದೆ ಕುದಿಯುವ ಮನಸ್ಸು
ನಿರ್ಲಜ್ಜರೆಲ್ಲ ಬದುಕಿನ ಪಾಠ ಕಲಿವ ತನಕ!

ಆಗೊಮ್ಮೆ ಈಗೊಮ್ಮೆ ಒಳಗೆ ಕುದಿಯುವ
ಅಗ್ನಿ ಪರ್ವತವೂ ಬೆಂಕಿ ಉಗುಳಿ ಬಿಡುವುದಿಲ್ಲವೇ
ಎದೆಯೊಳಗೆ ಬಚ್ಚಿಟ್ಟ ಭಾವನೆಗಳ ಕುದಿಯ
ಕುಲುಮೆಯೊಳಗೆ ಬೆಂದ ಹೃದಯಗಳಿಗೆ
ಏಲಕ್ಕಿ ,ಶುಂಠಿ ,ಪುದೀನಗಳ ಗಮಲುಂಟೆ?

ಕುದಿಯಲೆಂದುಬಿಟ್ಟ ಸಂಘರ್ಷಗಳೆಷ್ಟೋ
ಬಂದೂಕಿನ ಬಾಯೊಳಗೆ ಸಿಕ್ಕಿ ಸತ್ತೇ ಹೋದವು.
ರಕ್ತದೊಕುಳಿಯಲಿ ಕಲಸಿ ಹೋದವು.

ಲಂಚದರ ಮನೆಯ ಮಂಚದಲಿ,
ನೋಟುಗಳ ಹಾಸಿಗೆಯ ಮೇಲೆ
ಕಾಲ್ಚಾಚಿ ಮಲಗಿ ನಿದ್ರಿಸುವವರ ಕಂಡು
ಕುದಿಯುವ ಮನಸ್ಸುಗಳು
ಸಿಡಿಸಲಾರವು ಗುಂಡುಗಳನು

ವರುಣ ನಾರ್ಭಟಕ್ಕೆ ಉಕ್ಕಿ ಹರಿವ ನದಿಗಳಂತೆ
ಕುದ್ದು ಕುದ್ದು ಮೇಲೆದ್ದು ಅಪ್ಪಳಿಸಿದ ಸುನಾಮಿ ಯಲೆಗಳಂತೆ
ನಡುಗಿದ ಭೂತಾಯಿ ಒಡಲ ಸೀಳಿ ಕಂಪಿಸಿದಂತೆ
ಮನುಜ ಮನದಿ ಕುದಿಯುವ ದಾರಿಗಳೆಲ್ಲ
ಈಗ ಹಿಮಗಟ್ಟುತಿದೆ, ಹಿಮಗಟ್ಟುತಿದೆ

ಏನ್ ಸಮಾಚಾರ?

ಗಿಣಿ ರಾಮ, ಗಿಣಿ ರಾಮ ಏನ್ ಸಮಾಚಾರ?
ಎಲ್ಲೆಲ್ಲೂ ಈಗ ಚುನಾವಣೆ ಜ್ವರ ಬಂದ್ಬೈತೆ ಅಕ್ಕ!
ಸೀರೆ, ಕುಕ್ಕರ್, ಲಾರಿ ತುಂಬಾ ಓಡಾಡ್ತೈತೆ
ನೋಟಿನ ಮಳೆ ,ಮಧ್ಯದ ಹೊಳೆ ಹರೀತೈತೆ


ಗಿಣಿ ರಾಮ, ಗಿಣಿ ರಾಮ,ಈ ಸಾರಿ ಸಿಂಹಾಸನ ಯಾರು ಏರತ್ತಾರೆ?
ಪೇಪರ್ನೋರು ಟಿ.ವಿ ಅವರು ಕಣಿ ಹೇಳೋದೇ ಬೇರೆ
ಹಾರಾಡ್ತಾ ಹಾರಾಡ್ತಾ ನಾನ್ ನೋಡ್ತಿರೋದೇ ಬೇರೆ
ಕೈ ಮುಗಿಯೋದು ಕಾಲೀಗ್ ಬೀಳೋದು ಓಕೆ!
ಓಪನ್ ಆಗಿ ಮುತ್ತು ಕೊಡುವುದು ಯಾಕೆ

ಕೋಟಿ , ಕೋಟಿ ಕೈಲಿದ್ರೆ ಜೀರೋನೂ ಹೀರೋ ಆಗೋ ಕಾಲ ಇದು.
ಊರ್ ತುಂಬಾ ಕಾರ್ಪೊರೇಷನ್ ಅವರು ರಸ್ತೆನೆಲ್ಲಾ
ಮುದುಕಿ ಮೇಕಪ್ ಮಾಡ್ತಾ ಇದ್ರೆ
ಈ ಕಡೆಯಿಂದ ಎರಡು ಮಳೆಗೆ ಅವು ಕಿತ್ತು ಗುಂಡಿಗಳಾಗ್ತಾ ಇದ್ದಾವೆ

ಹೋಗ್ಲಿ ಬಿಡು ಗಿಣಿ ರಾಮ, ಒಳ್ಳೆ ಸೋಪು ಎಲ್ ಸಿಗುತ್ತೆ ಹೇಳು? ಅಯ್ಯೋ
ಅಕ್ಕ ಈ ಮೈಯಿನ ದುರ್ಗಂಧ ತೆಗಿಯೋಕೆ
ಗಂಧದ ಸಾಬೂನೆ ಏ ವನ್ ಅನ್ಕೊಂಡಿದ್ರು ಜನ.
ಒಳಗಿನ ಅಸಲಿ ಯತ್ತು ಬೇರೇನೇ ಇದೆ.

ನಮ್ ಕಾನೂನಿಗೆ ಜಯ್ ಅನ್ನ ಬೇಕು
ಮಾಡಬಾರದ್ ಮಾಡವರೆಲ್ಲ ಜೈಲ್ ಸೇರ್ತಾ ಇದಾರೆ
ರಾಹುಲ್ ಬಾಯಿಗೆ ಬೀಗ ಬಿತ್ತು
ಟ್ರಂಪಣ್ಣನ್ಗೆ ಜೈಲ್ ಶಿಕ್ಷೆ ಆದ್ರೂ ಆಗಬಹುದು
ಸಿಕ್ಕಿದ್ರು ಸಿಗ್ವಹುದು ಬೇಲು
ಸನ್ಯಾಸಿಗೂ, ಸಾಮ್ರಾಟಂಗೂ ಜೈಲೂಟನೇ ಗತಿ!

೮. ಕೆ ಎನ್ ಮಹಾಬಲ



ನಿವೃತ್ತರು

ಆ ಹೋಟೆಲಿನ ಮುಂದಿನ ವಿಶಾಲವಾದ ಮರದ ಸುತ್ತ ಕಟ್ಟಿದ್ದ ಕಟ್ಟೆಯ ಮೇಲೆ ದಿನಾ ಸಾಯಂಕಾಲ ಆ ಮೂರು ಮಂದಿ ನಿವೃತ್ತರು ಜಮಾಯಿಸುತ್ತಿದ್ದುದು ಸರ್ವೇಸಾಧಾರಣವಾಗಿತ್ತು.ಭಿನ್ನ ಸ್ವಭಾವದ ,ವೃತ್ತಿಯ ಅವರುಗಳು ಅದು ಯಾವ ಕಾರಣವೋ ಏನೊ ಅಂತೂ ದಿನಾ ತಪ್ಪದೆ ಅಲ್ಲಿ ಹಾಜರಿರುತ್ತಿದ್ದರು.ಅವರಾರೂ ಹಳೆ ಪರಿಚಯದವರಲ್ಲ,ಸಹಪಾಠಿಗಳಂತೂ ಅಲ್ಲವೇ ಅಲ್ಲ.ಶ್ರೀಪಾದರಾಯ ಬಿ ಎಸ್ಎನ್ಎಲ್ನಿವೃತ್ತ ಅಧಿಕಾರಿಯಾಗಿದ್ದರೆ, ಪರಾಶರನ್



ಬ್ಯಾಂಕ್ನಲ್ಲಿದ್ದವನು.ಇನ್ನು ನಿರಂಜನ ಕಾರ್ಖಾನೆಯಲ್ಲಿ ಕೆಲಸ ಮಾಡಿ ನಿವೃತ್ತನಾದವನು. ಆಗಾಗ್ಗೆ ಬಂದು ಹೋಗುತ್ತಿದ್ದ ಕಂದಸ್ವಾಮಿ ಹೆಚ್ಚೂ ಕಡಮೆ ಇದೇ ವಯೋಮಾನದವನಾದರೂ ಇನ್ನೂ ತನ್ನ ಸ್ವಂತ ವ್ಯಾಪಾರದಲ್ಲಿ ಮುಂದುವರೆದಿರುವ ಆಸಾಮಿ.

"ಎಷ್ಟು ದಿನಾ ಹೀಗೆ ದುಡೀತೀಯಯ್ಯ ಕಂದ,ನಿನಗೂ ವಯಸ್ಸಾಯಿತಲ್ಲವೆ? ಅಂತ ಅಪರೂಪಕ್ಕೆ ಹಾಜರಾಗುತ್ತಿದ್ದ ಕಂದಸ್ವಾಮಿಯನ್ನು ಒಂದು ದಿನ ಶ್ರೀಪಾದರಾಯ ಕೇಳಿದ್ದಾಗ .

"ಗೊತ್ತಿದ್ದೂ ಕೇಳ್ತಿಯಲ್ಲ ಶ್ರೀಪಾದ ,ನನಗೆ ನಿನ್ನ ತರಹ ಪೆನ್ಷನ್ಭಾಗ್ಯ ಇಲ್ಲವೆ?"ಎಂದು ಹಲುಬಿದ್ದ ಕಂದಸ್ವಾಮಿ.

ಪೆನ್ಷನ್ ಪಡೆಯುತ್ತಿದ್ದ ಆ ಮೂವರಲ್ಲಿ ಶ್ರೀಪಾದರಾಯನೇ ಭಾರಿ ಮೊತ್ತ ಪಡೆಯುತ್ತಿದುದು.ಸ್ವಂತ ಮನೆ ,ಜತೆಗೆ ಒಂದು ಮನೆ ಬಾಡಿಗೆ,ಅಮೆರಿಕದಲ್ಲಿ ಒಳ್ಳೆ ಹುದ್ದೆಯಲ್ಲಿದ್ದ ಒಬ್ಬನೇ ಮಗ ಶ್ರೀಕಾಂತ. ಒಟ್ಟಾರೆ ನಿಶ್ಚಿಂತ. ಪರಾಶರನ್ ನದು ನಂತರದ ಸರದಿ.ಶ್ರೀಪಾದರಾಯನ ಅರ್ಧದಷ್ಟು ಪಿಂಚಣಿ.ಇಬ್ಬರು ಹೆಣ್ಣುಮಕ್ಕಳ ಮದುವೆ ಜವಾಬ್ದಾರಿಯನ್ನು ಸರ್ವಿಸಿನಲ್ಲಿದ್ದಾಗಲೇ ಮುಗಿಸಿದ್ದ.ಸ್ವಂತ ಸಣ್ಣ ಮನೆಯನ್ನೂ ಹೊಂದಿದ್ದ.

ಪಾಪ ನಿರಂಜನ ಬಡಪಾಯಿ.ಬರುವ ಇ ಪಿ ಎಫ್ ಪೆನ್ಷನ್ನು ಅರೆಕಾಸಿನ ಮಜ್ಜಿಗೆ ಸಮಾನ. ಅವನಿಗೂ ಒಬ್ಬನೇ ಮಗ ,ಒಳ್ಳೆ ಕೆಲಸದಲ್ಲಿದ್ದಒಟ್ಟಾರೆ ಒಂದೇ ವಯೋಮಾನದವರಾದರೂ ವರಮಾನದ ದೃಷ್ಟಿಯಲ್ಲಿ ಆ ನಿವೃತ್ತರುಗಳ ನಡುವೆ ಒಂದು ಭಾರಿ ಕಂದಕವೇ ಇತ್ತು.

ನಿತ್ಯ ಅವರ ಭೇಟಿಯ ಮೊದಲ ಭಾಗದಲ್ಲಿ ಲೋಕಾಭಿರಾಮ ವಿಷಯಗಳು , ರಾಜಕೀಯ ವಿದ್ಯಮಾನಗಳು , ಇಂದಿನ ಪೇಟೆಧಾರಣೆ,ಬೆಲೆ ಏರಿಕೆಗೆ ಕಾರಣರಾದವರು,ಪಿಂಚಣಿ ಡಿ ಎ ಬಾಕಿ ಸುದ್ದಿ ಇಂಥವುಗಳ ಬಗ್ಗೆಯೇ ಮಾತುಗಳು ಹಾರಾಡುತ್ತಿದ್ದವು. ಎರಡನೆಯ ಸುತ್ತಿನಲ್ಲಿ ದೇವರ ತಲೆಯ ಮೇಲೆ ಹೂವು ತಪ್ಪಿದರೂ ಶ್ರೀಪಾದರಾಯ ಅಮೆರಿಕದಲ್ಲಿರುವ ತನ್ನ ಮಗನ ಗುಣಗಾನ ತಪ್ಪಿಸುತ್ತಿರಲಿಲ್ಲ.

ಶ್ರೀಪಾದರಾಯನ ಈ ಬಡಿವಾರ ಉಳಿದಿಬ್ಬರಿಗೂ ಅಷ್ಟೊಂದು ಸಮ್ಮತ ಎನಿಸುತ್ತಿರಲಿಲ್ಲ.ಬೇರೊಂದು ವಿಷಯ ತೆಗೆದು ಅವರ ಮಾತಿಗೆ ಕಡಿವಾಣ ಹಾಕಲು ಅವರು ಕೈಲಾದಷ್ಟೂ ಪ್ರಯತ್ನಿಸುತ್ತಿದ್ದರು.

ಹೋಟೆಲಿನವ ಒಂದು ಕಾಫಿಗೆ ಹದಿನೈದು ರೂಪಾಯಿಗೆ ಏರಿಸಿದ್ದು ಅಂದಿನ ಬಿಸಿ ಬಿಸಿ ಚರ್ಚೆಗೆ ಕಾರಣವಾಗಿತ್ತು.

“ಹಾಲು,ಕಾಫಿಪುಡಿ ಬೆಲೆ ಏರಿದೆಯಂತಯ್ಯ ಅದಕ್ಕೇ ಹದಿನೈದು ರೂಪಾಯಂತೆ.”ನಿರಂಜನ ಹೇಳುತ್ತಿದ್ದಂತೆ ಶ್ರೀಪಾದರಾಯ “ಅದೆಷ್ಟು ಮಹಾ ಜಾಸ್ತಿ ಆಗಿದ್ಯಂತೆ, ಕಾಫಿ ಬೆಲೆ ಏರಿಸೋಕೆ? ಹೀಗಾದ್ರೆ ನಮ್ಮಂಥ ಪಿಂಚಣಿದಾರರು ಬದುಕೋದು ಹೇಗೆ ಅಂತ?”ಎಂದ.

“ನಿನ್ನಂಥವರು ಅಂದರೇನಯ್ಯ ಶ್ರೀಪಾದ ? ಇನ್ನೂ ನನ್ನಂಥವರು ಎಂದರೆ ಸರಿ .ನಿನ್ನ ಪೆನ್ಷನ್ ಮೊತ್ತಕ್ಕೆ ಈ ಏರಿಕೆ ಇರುವೆ ಲೆಕ್ಕ ಅಷ್ಟೆ.”ಪರಾಶರನ್ ವಾದಿಸಿದ.

“ಸರಿ ಸರಿ ನನ್ನಂಥವರು ಮತ್ತೆ ಯಾವ ವರಮಾನ ಇಲ್ಲದವರು ಹೇಗ್ರಯ್ಯಾ ಜೀವನ ನಡೆಸೋದು.?”ನಿರಂಜನ ಪರಿತಪಿಸಿದ.

ಹಿಂದೆಯೂ ಅಷ್ಟೆ .ಯಾವುದೇ ಚರ್ಚೆ ಹೇಗೇ ಆರಂಭವಾದರೂ ಅಂತಿಮವಾಗಿ ಅವರುಗಳ ಪೆನ್ಷನ್ ಮೊತ್ತದತ್ತಲೇ ಗಿರಕಿ ಹೊಡೆಯುತ್ತಿತ್ತು.”ಯೋಗಿ ತಂದದ್ದು ಯೋಗಿಗೆ,ಭೋಗಿ ತಂದದ್ದು ಭೋಗಿಗೆ” ಎಂಬ ಒಣ ವೇದಾಂತದೊಂದಿಗೆ ಅವರ ಸಭೆ ಬರಾಖಾಸ್ತಾಗುತ್ತಿತ್ತು.

ಇವೆರಲ್ಲರ ನಿತ್ಯದ ಭೇಟಿ ಹೀಗೇ ನಡೆದಿತ್ತು. ಭಿನ್ನ ವೃತ್ತಿಯಲ್ಲಿದ್ದ,ಪಿಂಚಣಿ ವರಮಾನದಲ್ಲೂ ಅಗಾಧ ಕಂದಕವಿರುವ ಈ ಗುಂಪನ್ನು ತೊರೆದುಹೋಗಲು ಆಗಾಗ ಪ್ರತಿಯೊಬ್ಬರಿಗೆ ಅನ್ನಿಸುತ್ತಿದ್ದರೂ ಸಾಯಂಕಾಲ ಆರು ಗಂಟೆಯಾದರೆ ಸಾಕು ಯಾವುದೋ ಅವ್ಯಕ್ತ ಶಕ್ತಿ ಅವರನ್ನು ಹೋಟೆಲಿನ ಮುಂದಿನ ಕಟ್ಟೆಯತ್ತ ದೂಡುತ್ತಿತ್ತು.

ಅವತ್ತು ಈ ಮೂವರು ಎಂದಿನಂತೆ ತಮ್ಮ ಹರಟೆಕಟ್ಟೆಯಲ್ಲಿ ಕೂತು ಮಾತಿನ ಮಂಟಪ ಕಟ್ಟುತ್ತಿದ್ದಾಗ ಸೂಟುಬೂಟು ಧರಿಸಿದ್ದ ಆ ವಯಸ್ಸಾದ ವ್ಯಕ್ತಿ ಕಷ್ಟಪಟ್ಟು ವಾಕಿಂಗ್ ಸ್ಟಿಕ್ ಊರಿಕೊಂಡು ಬಂದು.''ಸಾರ್ ಈ ಮ್ಯಾಜಿಕ್ ಸ್ಲೇಟ್ ಕೊಂಡುಕೊಳ್ಳಿ ದಯವಿಟ್ಟು. ಒಂದಕ್ಕೆ ನೂರು ರೂಪಾಯಿ ಅಷ್ಟೆ.ನಿಮ್ಮ ಮೊಮ್ಮಕ್ಕಳಿಗೆ ಉಪಯೋಗಕ್ಕೆ ಬರತ್ತೆ''ಎಂದು ಗೋಗರೆದ.

''ನನಗೆ ಬೇಡಪ್ಪ .ನನ್ನ ಮಗ ಅಮೆರಿಕಾದಲ್ಲಿದ್ದಾನೆ. ಇನ್ನೂ ಚೆನ್ನಾಗಿರೋ ಸ್ಲೇಟು ಅಲ್ಲಿ ಮಾಲ್ ಗಳಲ್ಲಿ ಸಿಗತ್ತೆ''ಎಂದ ಶ್ರೀಪಾದರಾಯ.

''ನಮಗೂ ಬೇಡಪ್ಪ''ಎಂದರು ಉಳಿದಿಬ್ಬರು.

''ಸಾರ್,ಹಾಗೆನ್ನಬೇಡಿ.ನನ್ನ ಹೆಂಡತಿಗೆ ಹುಷಾರಿಲ್ಲ ,ನನಗೂ ಮಂಡಿನೋವು,ಮಕ್ಕಳ ಸಹಾಯವೂ ಇಲ್ಲ. ಪಿಂಚಣಿ ಅಂಥವು ಕೂಡ ಇಲ್ಲ. ಹೇಗೋ ಕಷ್ಟ ಪಟ್ಟು ಜೀವನ ಸಾಗಿಸ್ತಾ ಇದೀನಿ.ನೀವು ಒಂದೊಂದು ಕೊಂಡುಕೊಳ್ಳಿ.ನನ್ನ ಸಂಸಾರಕ್ಕೆ ಸಹಾಯ ಮಾಡಿ''ಮತ್ತೆ ಇನ್ನೂ ದೈನ್ಯವಾಗಿ ಯಾಚಿಸಲು ಆರಂಭಿಸಿದ ಆ ಮುದುಕ.

''ನೋಡಿ ಸ್ವಾಮಿ.ನಾವು ಪಿಂಚಣಿದಾರರು ಏನೋ ಅಲ್ಪ ವರಮಾನದಲ್ಲಿ ಸಂಸಾರ ಸಾಗಿಸುತ್ತಿದ್ದೇವೆ.ಸುಮ್ಮನೆ ಕಾಡಬೇಡಿ.''ಎಂದ ಶ್ರೀಪಾದರಾಯ.ಹೀಗೆ ಬಡತನವನ್ನು ನಟಿಸುವುದರಲ್ಲಿ ಅವನನ್ನು ಮೀರಿಸಿದವರು ಯಾರೂ ಇರಲಿಲ್ಲ.

ಆ ಮುದುಕ ಬಿಡದೆ ತನ್ನ ಅಹವಾಲು ಮುಂದುವರೆಸಿದ್ದ.ಶ್ರೀಪಾದರಾಯ ಮತ್ತು ಪರಾಶರನ್ ಅದನ್ನು ಲೆಕ್ಕಿಸದವರಂತೆ ಏನೋ ಮಾತುಕತೆಯಲ್ಲಿ ತೊಡಗಿಕೊಂಡಿದ್ದರು. ಈ ಆಸಾಮಿ ಹೋಗುವವನಲ್ಲ ಎಂದು ನಿರಂಜನನಿಗೆ ಮನದಟ್ಟಾಯಿತು.ಜೇಬಿಗೆ ಕೈ ಹಾಕಿ ತನ್ನಲ್ಲಿದ್ದ ಇನ್ನೂರು ರೂಪಾಯಿಯಲ್ಲಿ ನೂರು ಕೊಟ್ಟು ಅ ಸ್ಲೇಟ್ ಖರೀದಿಸಿದ.ಅ ಮುದುಕ ಮತ್ತೊಂದೆಡೆ ತನ್ನ ಅದೇ ವ್ಯಥೆಯ ಕಥೆ ನಿವೇದನೆಗೆ ಹೊರಟ.

ಅವನು ಹೋದದ್ದನ್ನು ಗಮನಿಸಿದ ಶ್ರೀಪಾದರಾಯ ''ಇಂಥವರನ್ನು

ನಂಬಬಾರದು.ನೋಡಿದ್ರಾ ಅವನ ಸೂಟು ಬೂಟು,ದುಬಾರಿ ವಾಕಿಂಗ್ ಸ್ಟಿಕ್ಕು.ನಾನು ಸರ್ವೀಸಿನಲ್ಲಿ ಇದ್ದಾಗಲೂ ಇಂಥ ಡ್ರೆಸ್ಸು ಧರಿಸಿರಲಿಲ್ಲ.''ಎಂದ.

``ಅಲ್ಲ ನಿರಂಜನ್,ನಿಮ್ಮ ಮನೇಲಿ ಯಾವ ಮಕ್ಕಳು ಇದ್ದಾರೆ?ಈ ಸ್ಲೇಟ್ ಕೊಂಡೆಯಲ್ಲ.'' ಪರಾಶರನ್ ಪ್ರಶ್ನಿಸಿದ.

``ಇಲ್ಲ ಕಣಯ್ಯ.ನಮ್ಮ ಮನೆ ಕೆಲಸದವಳ ಮಗಳಿಗೆ ಇದು.ಆಗಾಗ್ಗೆ ನನ್ನ ಹತ್ತಿರ ಲೆಕ್ಕ ಹೇಳಿಸ್ಕೊಳ್ಳತ್ತೆ ಅದು.ಈ ಸ್ಲೇಟು ಅದಕ್ಕೆ ಅನುಕೂಲವಾಗತ್ತೆ.'' ಎಂದ ನಿರಂಜನ್.

``ಬಹಳ ಸಂತೋಷ ಕಣಯ್ಯ.ನಾನೂ ಹೀಗೆ ಮಾಡಬಹುದಿತ್ತು ಅನಿಸುತ್ತೆ.''ಎಂದ ಪರಾಶರನ್. ಶ್ರೀಪಾದರಾಯ ಏನೂ ಪ್ರತಿಕ್ರಿಯಿಸಲಿಲ್ಲ.

ಎಂಟು ಗಂಟೆಯಾಗತೊಡಗಿತ್ತು .''ಪುಟ್ಟಗೌರಿ'' ಸೀರಿಯಲ್ ನೋಡುವ ತವಕದಿಂದ ಮೂವರೂ ಅಂದಿನ ಸಭೆ ಮುಗಿಸಿ ಮನೆಯತ್ತ ಹೆಜ್ಜೆ ಹಾಕಿದರು.

೧೦. ಸುಜಾತಾ ರವೀಶ್



ಲಾಲಿ/ ಜೋಗುಳ

ಲಾಲಿ ಹಾಡು ಕೇಳಿ ನಿದ್ರಿಸದ ಕಂದನಿಲ್ಲ ಹಾಡಿ ಮಲಗಿಸದ ಅಮ್ಮನಿಲ್ಲ. ಅಮ್ಮ ಮತ್ತು ಮಗುವಿನ ಕರುಳ ಬಂಧದೊಡನೆ ಭಾವದ ಬೆಸುಗೆ ಜೋಗುಳ .ಅಮ್ಮನ ಲಾಲಿ ಹಾಡು ಕೇಳುತ್ತಾ ಇದ್ದರೆ ಮಗುವಿಗೊಂದು ಸುರಕ್ಷತಾ ಭಾವ ಹಾಗೂ ಆ ಬೆಚ್ಚಗಿನ ಭಾವನೆಯೊಂದಿಗೆ ಅದು ನಿದ್ರೆಗೆ ಜಾರುತ್ತದೆ. ಇನ್ನು ಹೆಣ್ಣುಮಕ್ಕಳಂತೂ ಕೈಯಲ್ಲೊಂದು ಪುಟ್ಟ ಗೊಂಬೆ ಹಿಡಿದು ಅದಕ್ಕೆ ಲಾಲಿ ಹಾಡುತ್ತಾ ಮಲಗಿಸುತ್ತಾ ಇರುವ ಆಟ ಆಡುತ್ತಾರೆ ಮುಂದಿನ ಜೀವನ ನಾಟಕಕ್ಕೆ ನಡೆಯುವ ತಾಲೀಮಿನಂತೆ. ಸರಳ ಸುಂದರ ನುಡಿಗಳು ಮೆಲುದನಿಯ ರಾಗ ಎಲ್ಲಕ್ಕಿಂತ ಹೆಚ್ಚು ಗರ್ಭದಲ್ಲಿದ್ದಾಗಿನಿಂದ ಪರಿಚಿತವಾದ ಅಮ್ಮನ ಕಂಠ ಇನ್ನೇನು ಬೇಕು ಜೋಗುಳದ ಅಪ್ಯಾಯತೆ ಯನ್ನು ಹೆಚ್ಚಿಸುವುದಕ್ಕೆ .



ಇನ್ನು ನನ್ನ ಹಾಗೂ ಲಾಲಿ ಹಾಡುಗಳ ನಂಟು. ನನಗಿಂತ ನಾಲ್ಕು ವರ್ಷ ಏಳು ವರ್ಷ ಕಿರಿಯರಾದ ನನ್ನ ತಂಗಿಯರನ್ನು ಮಲಗಿಸುವಾಗ ತೊಟ್ಟಿಲು ತೂಗುವ ಕೆಲಸವನ್ನು ಅಮ್ಮ ನನಗೆ ವಹಿಸಿದ್ರಂತೆ. ಮೊದಲ ತಂಗಿಯ ವಿಷಯ ಅಷ್ಟು ನೆನಪಿಲ್ಲ. ಆದರೆ ಅಮ್ಮ ಹೇಳುವಂತೆ ಬರುವ ಹಾಡುಗಳನ್ನೆಲ್ಲ ಸಾಲಾಗಿ ಹೇಳುತ್ತಿದ್ದೆನಂತೆ. ಕೆಲವೊಮ್ಮೆಮಗು ನಿದ್ರಿಸಿದ್ದರೂ ನನ್ನ ತೂಗಾಟ ಹಾಡಾಟ ನಿಂತಿರುತ್ತಿರಲಿಲ್ಲವಂತೆ. ನಮ್ಮ ಸೋದರಮಾವ ಮೈಸೂರಲ್ಲೇ ಇದ್ದುದರಿಂದ ಅವರ ಮಕ್ಕಳಿಗೂ ನನ್ನ ಈ ತೊಟ್ಟಿಲು ತೂಗುವ ಜೋಗುಳ ಹಾಡುವ ಸೇವೆ ಸಂದಿತ್ತು. ಕೆಲವೊಮ್ಮೆ ತಂಗಿಯರನ್ನು ಸೇರಿಸಿಕೊಂಡು ಜುಗಲ್ ಬಂದಿ .ಪಾಪ ! ಅವರ ಕರ್ಣಗಳಿಗದೆಷ್ಟು ಕಠೋರ ಶಿಕ್ಷೆ ಕೊಟ್ಟಿರಬಹುದು. ಇನ್ನು ಈಗಲೂ ಕೆಲವೊಮ್ಮೆ ಸಂಬಂಧಿಕರ ಮಕ್ಕಳನ್ನು ಮಲಗಿಸುವುದುಂಟು. ಮಕ್ಕಳು ನನ್ನ ಬಳಿ ಬೇಗ ಮಲಗುತ್ತವೆ .ಆದರೆ ಅದಕ್ಕೆ ನನ್ನವರ expert comment ಏನು ಗೊತ್ತಾ? ನನ್ನ ಹಾಡು ಕೇಳುವುದಕ್ಕಿಂತ ಮಲಗುವುದು ಲೇಸು ಎಂದು ಬೇಗ ಮಲಗಿಬಿಡುತ್ತವಂತೆ. ನಾನು ಈ ಮಾತು ಒಪ್ಪುವುದಿಲ್ಲ. ಅದು ಬೇರೆ ವಿಷಯ ಬಿಡಿ .

ಕನ್ನಡದ ಲಾಲಿ ಹಾಡುಗಳ ವಿಷಯಕ್ಕೆ ಬಂದರೆ ಜಾನಪದ ದಾಸರ ಪದಗಳು ಭಾವಗೀತೆಗಳು ಮತ್ತು ಸಿನಿಮಾ ಹಾಡುಗಳು ಎಂಬ ನಾಲ್ಕು ವಿಂಗಡಣೆಯನ್ನು ಮಾಡಬಹುದು

ಜನಪದದಲ್ಲಿ ಲಾಲಿ ಹಾಡುಗಳ ವೈವಿಧ್ಯತೆಯನ್ನೇ ಕಾಣಬಹುದು. ಹೆಚ್ಚಾಗಿ ತ್ರಿಪದಿ ಶೈಲಿಯಲ್ಲಿರುವ ಈ ಪದಗಳಲ್ಲಿ ಮೂರನೆಯ ಸಾಲಿನಲ್ಲಿ ಎರಡನೆಯ ಸಾಲಿನ ಕಡೆಯ ಪದದ ದ್ವಿರುಕ್ತಿಯಾಗುತ್ತದೆ .ಉದಾಹರಣೆಗೆ

ಏಕಳುವೆ ಎಲೆ ರಂಗ ಬೇಕಾದ್ದು ನಿನಗೀವೆ
ನಾಕೆಮ್ಮೆ ಕರೆದ ನೊರೆಹಾಲು
ನಾಕೆಮ್ಮೆ ಕರೆದ ನೊರೆ ಹಾಲು ಸಕ್ಕರೆ
ನೀ ಕೇಳಿದಾಗ ಕೊಡುವೇನು

ಅಳ್ಳೊಳ್ಳಾಯೀ ಎಂದು ಶುರು ಮಾಡಿ ಮುಂದೆ ಸಾಗುವ ಈ ತ್ರಿಪದಿಗಳ ಅದೆಷ್ಟೋ ಪದಗಳ ಭಂಡಾರವಿದ್ದು ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಸಂಸ್ಕೃತಿಯ ಸಂಪತ್ತು ಇದು. ಅತ್ತರೆ ಅಳಲವ್ವಾ ಈ ಕೂಸು ನಮಗಿರಲಿ, ಕತ್ತೆಯ ಮರಿ ಚೆಂದ ,ಕೂಸಿದ್ದ ಮನೆಗೆ ಬೀಸಣಿಗೆ ಯಾಕ ,ತಾಯಿದ್ರೆ ತವರು ಹೆಚ್ಚು, ಕಂದನ ತುಟಿಯ ಹವಳಾದ ಕುಡಿ ಹಂಗ ಮುಂತಾದವು ಜನಪ್ರಿಯ ಜೋಗುಳ ಪದಗಳು. ಇತ್ತೀಚೆಗೆ ಕೇಳುವವರಿಲ್ಲದೆ ಬಳಕೆಯಲ್ಲಿಲ್ಲದೆ ಈ ಪದ ಕಣಜ ಸೊರಗುತ್ತಿದೆ ನಶಿಸುವ ಹಾದಿಯಲ್ಲಿದೆ .ಉಳಿಸಿಕೊಳ್ಳಲು ಸೂಕ್ತ ಪ್ರಯತ್ನ ಬೇಕಾಗಿದೆ .

ಇನ್ನು ದಾಸರ ಪದಗಳು. ನಮ್ಮ ದಾಸವರೇಣ್ಯರಿಗಂತೂ ಎಷ್ಟು ವಿಧದಲ್ಲಿ ಹಾಡಿ ಹರಿಯನ್ನು ಮಲಗಿಸಿದರೂ ತೃಪ್ತಿ ಇಲ್ಲ. ಬಹುಶಃ ಬೇರೆಲ್ಲಾ ಅವತಾರಗಳಿಗಿಂತ ಶ್ರೀ ಕೃಷ್ಣಾವತಾರದಲ್ಲಿ ಭಗವಂತನಿಗೆ ಹೆಚ್ಚು ಲಾಲಿ ಕೇಳಿದ ಭಾಗ್ಯ. ಜೋಜೋ ಶ್ರೀಕೃಷ್ಣ ಪರಮಾನಂದ ಕೇಳಿ ಮಲಗದ ಕನ್ನಡದ ಕಂದ ಇರಲಿಕ್ಕೇ ಇಲ್ಲ .ನಮ್ಮ ದಾಸ ಸಾಹಿತ್ಯದಲ್ಲೂ ಕೃಷ್ಣನ ಲಾಲಿ ಹಾಡುಗಳ ಸಂಖ್ಯೆ ವಿಫುಲ. ಕೆಲವನ್ನು ಹೆಸರಿಸಿದ್ದೇನೆ ಅಷ್ಟೇ .ತೂಗುವೆ ರಂಗನ, ಜೋಜೋ ರಂಗಧಾಮ, ಪವಡಿಸು ಪರಮಾತ್ಮನೇ ಸ್ವಾಮಿ, ಲಾಲಿ ಪಾವನ ಚರಣ, ಜೋಜೋ ಕಂದರ್ಪ ಕೋಟಿ ಲಾವಣ್ಯ, ಲಾಲಿ ಗೋವಿಂದ ಲಾಲಿ .ಒಂದು ಡಾಕ್ಟರೇಟ್ ಪ್ರಬಂಧವನ್ನೇ ಬರೆಯ ಬಹುದಾದಷ್ಟು ಸಮಗ್ರ ಈ ವಿಷಯ .

ಲಾಲಿ ಹಾಡುವುದರಲ್ಲಿ ನಮ್ಮ ಕನ್ನಡ ಕವಿಗಳೇನೂ ಹಿಂದುಳಿದಿಲ್ಲ.

ಭಾವಗೀತೆಗಳಲ್ಲಿ ಜೋಗುಳದ ಲಾಲಿ ಹಾಡುಗಳ ಅಪಾರ ಸಂಖ್ಯೆ ಕಾಣಬಹುದು .ಕನ್ನಡಕ್ಕೇ ವಿಶಿಷ್ಟವಾದ ಭಾವಗೀತೆಯ ಪ್ರಕಾರ ಲಾಲಿ ಹಾಡುಗಳನ್ನು ಕೊಡುವುದರಲ್ಲಿ ಹಿಂದೆ ಬಿದ್ದಿಲ್ಲ. ನನ್ನ ಸೀಮಿತ ಜ್ಞಾನಕ್ಕೆ ಅಲ್ಪಕಾಲದಲ್ಲಿ ಹೊಳೆದ ಕೆಲವು ಗೀತೆಗಳ ಪಟ್ಟಿ ಮಾಡಿದ್ದೇನೆ ಅಷ್ಟೇ .ಆದರೆ ಸಂಖ್ಯೆ ಮಾತ್ರ ಅನಂತ ಹಾಗೂ ಇನ್ನೂ ಅವಿರತ .ಅತ್ತಿತ್ತ ನೋಡದಿರು ಅತ್ತು ಹೊರಳಾಡಿದರು ,ಮಲಗು ಮಲಗೆನ್ನ ಮರಿಯೇ, ನಿದ್ದೆ ಬರುತ್ತಿದೆ ಕಣ್ಣಿನಲ್ಲಿ ,ನಿದಿರೆ ನಗರಕ್ಕೆ ಬಾರೆನ್ನ ದೊರೆಯೇ, ಹೂಬಳ್ಳಿಯ ಹಿಗ್ಗೆ ಆನಂದದ ಮೊಗ್ಗೆ ,ತಿಳಿ ಮುಗಿಲು ತೊಟ್ಟಿಲಲ್ಲಿ ಮಲಗಿದ್ದ ಚಂದಿರನ ಇತ್ಯಾದಿ ಇತ್ಯಾದಿ .

ಕನ್ನಡ ಚಿತ್ರರಂಗದಲ್ಲಂತೂ ಜೋಗುಳದ ಹಾಡುಗಳ ಸುರಿಮಳೆಯೇ ಆಗಿಹೋಗಿದೆ .ಪರಮಾತ್ಮನನ್ನು ಮಲಗಿಸುವ ದಾಸರ ಪದಗಳ ಅಳವಡಿಕೆ ಮತ್ತು ಎಸ್ಪಿಬಿಯವರ ಶ್ರೀನಿವಾಸ ಕಲ್ಯಾಣ ಚಿತ್ರದ "ಪವಡಿಸು ಪರಮಾತ್ಮ ಶ್ರೀ ವೆಂಕಟೇಶ "ಹಾಡನ್ನು ಸ್ಮರಿಸದಿದ್ದರೆ ಆದೀತೆ ?ಕಂದನಿಗೆ ಹಾಡುವ ಲಾಲಿಗಳಲ್ಲಿ ಮುಖ್ಯವಾಗಿ ಜೋಜೋ ಲಾಲಿ ನಾ ಹಾಡುವೆ (ಚಿನ್ನಾ ನಿನ್ನ ಮುದ್ದಾಡುವೆ) ನಿನ್ನ ಮುಖ ಅರವಿಂದ ನಿನ್ನ ನಗು ಶ್ರೀಗಂಧ ಮುದ್ದು ಕಂದ (ಕಲ್ಯಾಣಿ)ಲಾಲಿ ಲಾಲಿ ಲಾಲಿ (ಸರ್ವಮಂಗಳ) ಬಾರ ಒಲಿದು ಬಾರ (ಹಣ್ಣೆಲೆ ಚಿಗುರಿದಾಗ) ಲಾಲಿ ಲಾಲಿ ಸುಕುಮಾರ (ಭಕ್ತ ಪ್ರಹ್ಲಾದ) ರಾಜೀವ ನೇತ್ರನಿಗೆ (ಸ್ವಾತಿ ಮುತ್ತು) ಹಾಡೊಂದ ಹಾಡುವೆ ನೀ ಕೇಳು ಮಗುವೆ (ನಾಂದಿ) ನನ್ನ ಮುದ್ದು ತಾರೆ (ಮಂಕುತಿಮ್ಮ) ಇಲ್ಲಿಗೇ ಮುಗಿಯಲಿಲ್ಲ .ಪ್ರಿಯತಮೆಗೆ ಹಾಡುವ ಲಾಲಿ ಹಾಡುಗಳಲ್ಲಿ ಲಾಲೀ ಸುವ್ವಾಲಿ ಹಾಡೆಲ್ಲ ಲಾಲಿ (ಜೋಡಿ ಹಕ್ಕಿ) ಪ್ರಮುಖವಾದುದು .ಪವಡಿಸು ಪಾಲಾಕ್ಷ ಶ್ರೀ ವಿರೂಪಾಕ್ಷ ಹಾಡನ್ನು ಈ ಪಟ್ಟಿಗೆ ಸೇರಿಸಬಹುದು. ತಾಯಿಗೆ ಲಾಲಿ ಹಾಡುವ ತುಸು ಮೆಲ್ಲ ಬೀಸು ಗಾಳಿಯೇ ತುತ್ತಮುತ್ತ ಚಿತ್ರದ ಹಾಡು ಗಮನಾರ್ಹ. ಹೂವು ಹಣ್ಣು ಚಿತ್ರದ "ಲಾಲಿ ಹಾಡು ಭೂಮಿ ತಾಯಿಗೆ ಲಾಲಿ ಹಾಡು ಹೆತ್ತ ತಾಯಿಗೆ "ಸಹ ವಿಶಿಷ್ಟವಾಗಿದೆ .

ಯಾವುದಾದರೂ ಒಂದು ಹಾಡು ಬಗ್ಗೆ ಬರೆಯೋಣ ಎಂದು ಬರೆಯಲು ಕೂತಾಗ ಎಲ್ಲಾ ಲಾಲಿ ಹಾಡುಗಳು ನಾಮುಂದು ತಾಮುಂದು ಎಂದು ಬರತೊಡಗಿದವು ಒಂದನ್ನು ಬರೆದರೆ ಇನ್ನೊಂದಕ್ಕೆ ಅನ್ಯಾಯವಾದಂತೆ ಎಂದೆಣಿಸಿದ ಪರಿಣಾಮ ಈ ಸುದೀರ್ಘ ಬರಹ. ಬೇಸರಿಸದೆ ಓದಿ ಪ್ರತಿಕ್ರಿಯಿಸಿ ಪ್ರೋತ್ಸಾಹಿಸುವಿರಿ ಎಂದು ನನ್ನ ನಂಬಿಕೆ .

೧೧. ಮಾಧುರಿ ಕೃಷ್ಣ



ನಾನೂ,ನನ್ನ ಸಹಪಾಠಿ ಮಿತ್ರನೂ- ಲೇಖನ ಮಾಲೆ --5
ಕೋಟೇಶ್ವರ ಜಾತ್ರೆ--ಒಂದು ಸ್ವರಚನೆ

ಆ ದಿನ ಸರಿಯಾಗಿ ಮಗನಿಂದ ಕಾರಿನಿಂದಿಳಿಸಿಕೊಂಡು, ಅಲ್ಲಲ್ಲಿ ಅಷ್ಟಿಷ್ಟು ಹಸಿರು ಮೊಳಕೆಯೊಡೆಯುತ್ತಿದ್ದ ಖಾಲಿ ಜಾಗವನ್ನು ದಾಟಿಕೊಂಡು ನನ್ನ ಸಹಪಾಠಿ ಮಿತ್ರನ ದೊಡ್ಡ ಗೇಟಿನ ಚಿಲುಕವನ್ನು ಜಾರಿಸಿದಾಗ ಮಿತ್ರನ ಮನೆಯ ಬಾಗಿಲು ದೊಡ್ಡದಾಗಿ ತೆರೆದುಕೊಂಡೇ ಇತ್ತು.ಬಾಗಿಲಿಗೆ ಕಾಲಿಡುವುದಕ್ಕೂ ಮೊದಲೇ 'ಬಾ ಬಾ ' ಎಂಬ ಅವನ ಆತ್ಮೀಯ ನುಡಿ ನನ್ನನ್ನು ಸ್ವಾಗತಿಸಿತು. ಅದಕ್ಕೆ ಪ್ರತಿಯಾಗಿ ಬಾಯ್ತುಂಬ ನಗೆಯಾಡುತ್ತ ಒಳಹೊಕ್ಕವಳಿಗೆ ಮೊದಲು ಕಣ್ಣಿಗೆ ಬಿದ್ದದ್ದು ಅವನ ಕೈಯಲ್ಲಿದ್ದ 'ಸುವರ್ಣ ಸಂಭ್ರಮ--ನೆನಪಿನ ಸಂಚಿಕೆ 'ಹೊನ್ನ ಭಂಡಾರ! ಒಮ್ಮೆಲೇ ಘಟ್ಟೆಂದು ಮನಸ್ಸರಳಿ ಹೊನ್ನಿನ ಬಣ್ಣದ ಗುಲಾಬಿಯಾಗಿ ಘಮಘಮಿಸಿತು.ಆ ಉದ್ದದ ಪಡಸಾಲೆಯಲ್ಲಿ ನೇರ ನಡೆದು ಅವನಿಗೆದುರಾಗಿ ನಿಂತೆ. ಅವನ ಮುಖದಲ್ಲೋ ಚೆಲ್ಲುಚೆಲ್ಲಾಗಿ ಹೊರಸೂಸುತಿದ್ದ ಮುಗುಳು ಮುಗುಳಾದ ಮುಗುಳ್ನಗೆ. ಆ ನಗೆಯೊಂದಿಗೇ ಹೇಳಿದ "ಕೋಟೇಸ್ರ ಜಾತ್ರೆ' ಗೆ 50 ವರ್ಷಗಳಾದುವು ! ಎಂದು
ಹೊನ್ನ ಭಂಡಾರ ಸಂಪುಟದ 60--61 ನೇ ಪುಟವನ್ನು ಬಿಡಿಸಿ ನನ್ನೆದುರು ಹಿಡಿದ.

ಮನಸ್ಸಿಗೇನು.....ಪಕ ಪಕನೆ ರೆಕ್ಕೆ ಪುಕ್ಕ ಬಿಡಿಸಿ ಪುಟ ಪುಟನೆ 50 ವರ್ಷಗಳನ್ನು ಸುತ್ತಾಡಿ ಮರಳಿ ಬಂತು. " ಆಗಬಹುದು ಮಾರಾಯ ನೀನು, ನಾನು ಬರ್ತೇನೆ ಎಂದ ಕೂಡಲೇ ಈ ಕಾಲೇಜು ನೆನಪಿನ ಸಂಚಿಕೆಯನ್ನು ಕೈಯಲ್ಲೇ ಹಿಡಿದು ಕೂತದ್ದು ಗ್ರೇಟ್ "ಎನ್ನುತ್ತ ಒಳಗೊಳಗೇ ಉಕ್ಕಿದ ಹರ್ಷವನ್ನು ತಡೆಯಲಾಗದೆ ಸಿಂಗಲ್ ಸೀಟರ್ ಸೋಫಾದ ಮೇಲೆ ಕುಳಿತು ಪಕ್ಕದ ದಿವಾನ್ ಮೇಲೆ ಕಾಲು ಚಾಚಿದ್ದ ಅವನ ಶ್ರೀಮತಿಗೆ ಸ್ವೀಟಾಗಿ 'ಹಾಯ್' ಹೇಳಿದೆ.ಅವಳು ಅತಿ ಮುದ್ದಾದ ಮುಗ್ಧ ನಗುವನ್ನು ಪ್ರತಿಕ್ರಯಿಸಿದಳು. ಮಿತ್ರನ ಹೆಣ್ಣು ಮಕ್ಕಳಿಬ್ಬರಿಗೂ ನಮ್ಮಿಬ್ಬರ ಮಾತು ಅರ್ಥವಾಗದೆ ಕಾಯುತಿದ್ದರು. ಅಷ್ಟರಲ್ಲೇ ಮಿತ್ರನ ಮೊಮ್ಮಗ ಎಳನೀರಿನ ಉದ್ದ ಲೋಟ ಹಿಡಿದು ಬಂದ.

"ಏನೋ ,ಹೇಗಿದ್ದೀಯಾ? ಸ್ಟಡೀಸ್ ಹೇಗಿದೆ, ಚೆನ್ನಾಗಿ ನಡೀತಿದೆ ತಾನೇ?"
"ಹ್ಞಾಂ ಹ್ಞೂಂ .." ಎನ್ನುತ್ತ ಕಲಿಕೆಯ ವಿಚಾರ ಬಂದುದರಿಂದ ಮೆತ್ತಗೆ ಜಾಗ

ಖಾಲಿ ಮಾಡಿದ. ಎಳನೀರು ಗುಟುಕರಿಸಿದೆ. ಈ ನಿನ್ನ ಎಳನೀರಿನಷ್ಟು ಸಿಹಿಯಾದುದನ್ನು ಇನ್ನೆಲ್ಲೂ ನಾನು ಕುಡಿದಿಲ್ಲ ಕಣೋ "ಎಂದೆ ತೃಪ್ತಿಯಿಂದ.
"ಹೌದು!ಹಳೆಯ ನೆನಪುಗಳು ಹಾಗೇ....ಅಷ್ಟೇ ಸಿಹಿಯಾದವುಗಳು!" ಸಹಪಾಠಿ ಮಿತ್ರ ತೇಲುಗಣ್ಣಿಗೆ ಜಾರಿದ.
ಮತ್ತೊಮ್ಮೆ ಸಂಭ್ರಮದ ಸಾಗರ ತೆರೆ ತೆರೆಯಾಗಿ ಉಕ್ಕಿತು ಮನಸ್ಸಲ್ಲಿ.
"ಅಲ್ಲೋ, ನಿನಗೆ ಚೆನ್ನಾಗಿ ನೆನಪಿರಬೇಕಲ್ಲ....ಫಸ್ಟ್ ಟೈಮ್ ನೀನು ನಮ್ಮ ಕ್ಲಾಸಿನ ಹೊರಗೆ ಕಾರಿಡಾರಿನಲ್ಲಿ ನಿನ್ನ ಪೋಲಿಸರ ಪಟಾಲಂ ಜತೆ ನಿಂತು ನಾನು ಕ್ಲಾಸ್ ಪ್ರವೇಶಿಸುತ್ತಿದ್ದಂತೆ ಈ ಗೀತೆಯನ್ನು ಹಾಡಿದ್ದು ?"
50 ವರ್ಷಗಳ ಹಿಂದೆ ಕೇಳಲಾಗದೇ ಹೋದ ಪ್ರಶ್ನೆಯನ್ನು ಇಂದು ಅವನಿಗೆ ಕೇಳಿದೆ ನಾನು!
ಸಹಪಾಠಿ ಮಿತ್ರನ ಮುಖಭಾವ ವಿವಿಧ ವರ್ಣಗಳನ್ನು ಪ್ರದರ್ಶಿಸಿತು.ತತ್ಕ್ಷಣಕ್ಕೆ ಅವನಿಗೆ ಉತ್ತರಿಸಲಾಗಲಿಲ್ಲ....ಆಮೇಲೆ ಬಾಯ್ಬಿಟ್ಟ,"ನೀನಿನ್ನೂ ಅದನ್ನು ಮರೆತಿಲ್ಲ ಮಾರಾಯಿತಿ,?...ನಿಧಾನವಾಗಿ ಪದಗಳು ಹೊರಬೀಳುತ್ತಿರುವಾಗ ಕೊನೆಯಲ್ಲಿ ಗಹ ಗಹಿಸುವ
ನಗೆಯಾಗಿ ಪರಿವರ್ತಿಸಿತು.ಅದರೊಂದಿಗೆ ಅವನ ದೇಹವೂ ನೋವನ್ನನುಭವಿಸಿತು.ನನಗೆ ಬೇಸರವುಂಟಾಗಿ ತಲೆ ಕೆಳಗೆ ಹಾಕಿ ,"ಸಾರಿ" ಎಂದೆ.
ಅದನ್ನವನು ಕೇಳಿಸಿಕೊಂಡನೋ ಇಲ್ಲವೋ, ಅವನೆಂದ"ನಿನಗೆ ಮಾತ್ರವಲ್ಲ, ನನಗೂ ಆ ದಿನ ಮರೆಯಲಾಗದ್ದು! ಪಾಪ,ಆ ದಿನಗಳಲ್ಲಿ ಅದೆಷ್ಟು ನಿನಗೆ ಹೋದಲ್ಲಿ ಬಂದಲ್ಲಿ ಕಾಟ ಕೊಟ್ಟಿದ್ದೇವೆಂದರೆ ಈ ಕೃತಿಯಲ್ಲಿ ನಿನ್ನ 'ಕೋಟೇಸ್ರ ಜಾತ್ರೆ' ಕಂಡಾಗಿನಿಂದ ಅದೇ ಅದೇ ಮನಸ್ಸಿಗೆ ಬರುತ್ತಿದೆ "ಎಂದ.
ಸಟ್ಟನೆ ತಲೆಯೆತ್ತಿ ಸಹಪಾಠಿ ಮಿತ್ರನನ್ನೇ ನೋಡಿದೆ!
ಆದರೆ ಅದಾಗಲೇ ಅವನು ಆ ಹಿಂದಿನ ದಿನಗಳಿಗೆ ಇಳಿದಾಗಿತ್ತು;ನಾನೂ ಅವನನ್ನೇ ಹಿಂಬಾಲಿಸಿದೆ.
ಆಗ ನಮ್ಮ ಡಿಗ್ರಿ ಕ್ಲಾಸು ಶುರುವಾದ ಮೊದಲ ದಿನಗಳು..ನಾವು 6 ಹುಡುಗಿಯರ ಮೆಹನತ್ತಿನಿಂದಾಗಿ ಆಗಷ್ಟೇ ಪ್ರಾರಂಭಗೊಂಡ ಹೊಸ ಕಾಲೇಜಿನಲ್ಲಿ ಬಿ.ಎ.ಆರ್ಟ್ಸ್ ಕೋರ್ಸಿಗೆ ಅಕಾಡೆಮಿ ಒಪ್ಪಿಗೆ ಕೊಟ್ಟು, ಬಾಕಿ ಸೈನ್ಸ್ ಮತ್ತು ಬಿಕಾಂ ನವರಿಗೆ ಕ್ಲಾಸುಗಳು ಶುರುವಾಗಿ ಎರಡು ವಾರಗಳ ಮೇಲೆ ನಮಗೆ ಅವಕಾಶ ದೊರೆಯಿತು.
ಅಂದು ಮೊದಲ ದಿನ ಖುಷಿ ಖುಷಿಯಿಂದ ತರಗತಿಯೆಡೆಗೆ ಹೋಗುತ್ತಿದ್ದಾಗ ಕಾರಿಡಾರಿನಲ್ಲಿ ಹುಡುಗರು ಅಲ್ಲಲ್ಲಿ ನಿಂತು ಏನೇನೋ ಧ್ವನಿಯನ್ನುಹೊರಡಿಸುತ್ತಿದ್ದುದನ್ನು ಕೇಳಿ ಬೇಗ ಕ್ಲಾಸ್ ಸೇರಿಕೊಳ್ಳುವ ತರಾತುರಿಯಲ್ಲಿಯಲ್ಲಿದ್ದಾಗ, ಇದ್ದಕ್ಕಿದ್ದಂತೆ ಕೇಳಿ ಬಂತು....'ಕೊರ್ರನಿಗೊಂದು ಕೊರಾತಿ---ಕೊರಾತಿಗೊಂದು ಕೊರಗ....
ಡುಡ್ಡೊಳ್ಮೆ ಚೈಂಯ್ ಚೈಂಯ್..ಡುಡ್ಡೊಳ್ಮೆ ಚೈಂಯ್ ಚೈಂಯ್..

ನನಗೆ ಎದೆ ಧಸಕ್ಕೆಂದಿತು!ಆ ಕ್ಷಣಕ್ಕೆ ಹಿಂದಿರುಗಿ ಲೇಡೀಸ್ ವೈಟಿಂಗ್ ರೂಮಿಗೆ ಓಡಬಯಸಿದೆ. ಆದರೆ ಜತೆಗಿದ್ದ ಇಬ್ಬರು ಗೆಳತಿಯರು ರಟ್ಟೆ ಬಿಗಿ ಹಿಡಿದು ಎಳೆದೊಯ್ದು ಡೆಸ್ಕಿನ ಮುಂದೆ ಕೂರಿಸಿದರು.ಅದೃಷ್ಟವಶಾತ್ ಅಷ್ಟರಲ್ಲೇ ಟೈ ಕಟ್ಟಿದ ಉಪನ್ಯಾಸಕರೊಬ್ಬರು ಕೈಯಲ್ಲಿ ಡಸ್ಟರ್ ಹಾಗೂ ಚಾಕ್ ಪೀಸ್ ಹಿಡಿದು, 'ಗುಡ್ ಮಾರ್ನಿಂಗ್ ಸ್ಟೂಡೆಂಟ್ಸ್' ಎನ್ನುತ್ತ ಒಳಬಂದು ಪ್ಲಾರ್ಟ್ ಫಾರ್ಮ್ ಏರಿದರು. ಹೊರಗಿದ್ದ ಕೆಲ ಹುಡುಗರು ಗಡಬಡಿಸಿ ಒಳ ಬರುವಾಗ ಆರಡಿ ಎತ್ತರಕ್ಕಿದ್ದ ಹುಡುಗನೊಬ್ಬನನ್ನು ಕಂಡೆ ನಾನು.

ಅಂದಿನಿಂದ ನಾನು ಓಡಾಡುವಾಗಲೆಲ್ಲ ಕಾಲೇಜ್ ಮ್ಯಾಗಝೀನ್ ನಲ್ಲಿ ಪ್ರಕಟಗೊಂಡ ನನ್ನ ಗೀತೆಯ ಲುಗಳನ್ನು ಹೇಳಿಕೊಳ್ಳುತ್ತ ಹುಡುಗರು ಛೇಡಿಸುತ್ತಿದ್ದರೂ, ಕ್ಲಾಸಿಗೆ ಬಂದು ಅಟೆಂಡೆನ್ಸ್ ತೆಗದುಕೊಳ್ಳುತ್ತಿದ್ದ ಪ್ರತಿಯೊಬ್ಬ ಉಪನ್ಯಾಸಕರೂ ನಾನು ಕುಂದಾಪ್ರ ಕನ್ನಡದಲ್ಲಿ ಬರೆದ ಜನಪದ ಗೀತೆಯನ್ನು ಹೊಗಳಿ ಪ್ರಶಂಸಿಸುತ್ತಿದ್ದುದರಿಂದ ನನ್ನ ಅಳುಕು, ಸಂಕೋಚ, ಮುಜುಗರವೆಲ್ಲ ಮಾಯವಾಗುವಂತಾಯಿತು. ಮತ್ತು ವಿದ್ಯಾವಂತರು, ಬರಹಗಾರರು ಸಂದರ್ಭ ಬಂದಾಗ ಅದನ್ನು ಹೆಸರಿಸುವುದೂ ನನಗೆ ಹೆಮ್ಮೆ ತಂದಿತು. ಈಗ ಈ ಕುಂದಾಪ್ರ ಕನ್ನಡಕ್ಕೆ ವಿಶ್ವವಿದ್ಯಾಲಯದ ಸ್ಥಾನಮಾನ ಬೇಕೆಂಬ ಕೂಗು ಎದ್ದಿದೆ. ಅಲ್ಲದೆ ನಡೆದ ಚಿಕ್ಕ ಘಟನೆಯೊಂದು ನನ್ನ ವಿಶ್ವಾಸವನ್ನು ಹೆಚ್ಚಿಸಿದ್ದೂ ಉಂಟು.


ಇಸವಿ 2002ರ ಅಗಸ್ಟನಲ್ಲಿ ಎಂಜಿನೀಯರಿಂಗ್ ಫೈನಲ್ ಬರೆದ ನನ್ನ ಮಗಳಿಗೆ ಮದುವೆಯಾಗಿ ಕ್ಯಾಲಿಫೋರ್ನಿಯಾಕ್ಕೆ ಹೋದಳು. ಅಲ್ಲಿ ಕನ್ನಡ ಕೂಟದ ಸಮ್ಮಿಲನವೊಂದರಲ್ಲಿ ಕೆಲವು ಕನ್ನಡಿಗರ ಪರಿಚಯವಾಗಿ ಮಾತನಾಡುತ್ತಿರುವಾಗ ಲೋಕಾಭಿರಾಮವಾಗಿ 'ನೀನು ಎಲ್ಲಿಂದ ಬಂದಿದ್ದು, ನಿನ್ನ ತಂದೆತಾಯಿ ಯಾರು? ಎಂದು ಒಬ್ಬರು ಕೇಳಿದರಂತೆ. ಇವಳು ಹೇಳಿದಳು.ಆ ಕೂಡಲೇ ಆ ಮಹಾರಾಯರು ಗೀತೆಯೊಂದನ್ನು ಹಾಡತೊಡಗಿದರಂತೆ. ಅಷ್ಟೊಂದು ಗ್ರಾಮ್ಯ ಕನ್ನಡದ ಅನುಭವವಿಲ್ಲದ ಮಗಳಿಗೆ, "ಗೊತ್ತಿಲ್ಲವೇ ನಿನಗೆ? ಈ ಹಾಡನ್ನು ನಿನ್ನ ಅಮ್ಮನೇ ಬರೆದದ್ದು "ಎಂದಾಗ ಮಗಳು ಚಕಿತಳಾಗಿ ಆ ಕೂಡಲೇ ನನಗೆ ಫೋನ್ ಮಾಡಿ ಚೆನ್ನಾಗಿ ಆಕ್ಷೇಪಿಸಿದಳು.

ಈ ನನ್ನ ಮಾತುಗಳನ್ನು ಕೇಳಿಸಿಕೊಂಡ ಸಹಪಾಠಿ ಮಿತ್ರ, "ಹೌದು, ನಿನಗೆ ತಮಾಷೆ ಮಾಡುವ ಉದ್ರೇಕದಲ್ಲಿ ನಾವೆಷ್ಟೋ ಹುಡುಗರಿಗೆ ಬಾಯಿಪಾಠವಾಗಿಯೇ ಬಿಟ್ಟಿತ್ತು. ಹೀಗೂ ಕುಂದಾಪ್ರ ಕನ್ನಡದಲ್ಲಿ ಬರೀತಾರೇನು ಕವಿತೆ? ಎಂದು ಹಾಸ್ಯವಾಗಿ ಅಂದು ನಿನ್ನನ್ನು ಆಡಿಕೊಳ್ಳವುದು ನಮಗೆ ತಮಾಷೆಯ ಸಂಗತಿ ಆಗಿತ್ತು. ಆದರೆ ಅದರ ಮೌಲ್ಯ ಇಂದು ನನಗರ್ಥವಾಗುತ್ತಿದೆ,

ಪಾಪ ನೀನು ಆ ಮೇಲಿಂದ ಬರೆಯುವುದನ್ನೇ ನಿಲ್ಲಿಸಿದೆಯೆಂದು ಅನಿಸುತ್ತೆ.."ಎಂದು ಸಂತಾಪ ವ್ಯಕ್ತ ಪಡಿಸಿದ. ಮತ್ತೆ ಮುಂದುವರೆದು, "ಈಗ ನನಗೆ ನಮ್ಮ ಊರು,ನಮ್ಮ ಭಾಷೆ, ನಮ್ಮ ಜನ –ನಮಗೆಷ್ಟು ಆಪ್ತ ಎಂದು ಅರಿವಾಗುತ್ತಿದೆ "ಎಂದು ಗಂಭೀರವಾಗಿ ಹೇಳಿದ. ಅವನ ಮಾತು ನನ್ನನ್ನೂ ಕಣ್ಣೀರಾಗಿಸಿತು. ಅದನ್ನು ಗಮನಿಸಿದ ಅವನ ಚುರುಕು ಕಣ್ಣುಗಳು ಪುನಹ ಮಾತನಾಡಿದುವು." ನೋಡು ಪೂರಾ 50 ವರ್ಷ ನಿರಂತರ ನಿನ್ನ ಸಹಪಾಠಿಗಳ ಮನಸ್ಸಿನಲ್ಲಿ, ಓದಿದ ಇತರರ ಮನಸ್ಸಿನಲ್ಲಿ ನೀನು ನೆಲೆ ನಿಂತು, ಅವರಿಂದ ಪ್ರಶಂಸಿಸಿಕೊಂಡು, ಬಾಯ್ತುಂಬಾ ಹಾಡಿಸಿಕೊಳ್ಳುತ್ತಿರುವ ಈ ಉನ್ನತ ಭಾವಕ್ಕಿಂತಲೂ ಬೇರೆ ಹೆಚ್ಚಿನ ಪ್ರಶಸ್ತಿ ನಿನಗೆ ಬೇಕೇ??

ಈಗ ಯಾವ ಮುಜುಗರವಿಲ್ಲದೆ ಜೋರಾಗಿ ಅತ್ತು ಬಿಟ್ಟೆ ನಾನು.

೧೨. ಮಾಲತಿ ಶ್ರೀನಿವಾಸನ್



ಯಾರಿವರು?

ಬಾಳ ಪಯಣದಲ್ಲಿ ಆಸ್ತಿ,ಅಂತಸ್ತು,
ಸಂಪತ್ತಿಗೆ ಆಸೆ ಪಡೆದವರು ,
ವಿಜ್ಞಾನ ಸುಜ್ಞಾನ ತಂತ್ರಜ್ಞಾನದ
ಅಧ್ಯಯನದ ಹಾದಿಯಲಿ, ಉತ್ಸಾಹ
ಹುರುಪಿನಲಿ,, ಬೇರೆಲ್ಲ ಮರೆತವರು.

ಬೆಳ್ಳಿ ಬಂಗಾರ ವಜ್ರ ವೈಡೂರ್ಯಗಳು
ಬರಿ ಕಲ್ಲಿನೊಳಗಣ ಖನಿಜಗಳು,
ಮನುಜನ ದುರಾಸೆಗೆ ದೂರಾಗುವ,
ಪ್ರಕೃತಿಯ ಸೋಜಿಗಗಳು ಎನುತ
ಬೆಲೆಕಟ್ಟದೆ ಅವಕೆ,
ಶೋಧನೆಯಲಿ ಮುಳುಗಿ, ಸ್ವಾರ್ಥಕ್ಕೆ
ಸಂಗ್ರಹಣದ ಆಸೆ ತೊರೆದವರು
ಯಾರಿವರು?

ಒಂದಾಗುವರು ಇಂತವರು
ಜೋಡಿಹಕ್ಕಿಗಳಂತೆ ಹಾದಿಯಲಿ,
ಒಮ್ಮೊಮ್ಮೆ, ಪಯಣಿಸುವರು
ಜೊತೆಗೂಡಿ ಸಾಮರಸ್ಯದಲಿ,
ಸಮತೆಯಲಿ, ಸಮನಾಂತರ
ರೇಖೆಗಳಂತೆ. ನಡುವೆ ಪ್ರೀತಿ
ಅನುಬಂಧದ ಸರಳುಗಳು
ಇಬ್ಬರನು ತಬ್ಬಿ ಹಿಡಿದಂತೆ.

ಹುಡುಕುತ್ತ ಮನದ ಜಾಡನ್ನು
ಬಾಳ ಸಂಜೆಯಲಿ ಕಟ್ಟುವರು
ಗೂಡನ್ನು,. ಎಲ್ಲರಂತೆ ಇವರದೂ
ಏರಿಳಿತದ ಪಯಣ, ಹಾದಿ ಸೋಲು
ಗೆಲುವುಗಳ ಹೂರಣ,
ಕುಗ್ಗದೆ ಹಿಗ್ಗದೆ ತೆರೆದಿಡುವರು ಮನೆ/

ಮನದ ಬಾಗಿಲನು, ಎಲ್ಲರಿಗೂ ಬಿಚ್ಚು
ನಗೆಯ ಸ್ವಾಗತದ ತೋರಣ.
ಯಾರಿವರು?

ಜೀವನದ ನಶ್ವರತೆಯನರಿತವರು
ಉಳಿಪೆಟ್ಟು ಸಹಿಸಿ, ಮಾನಾಪಮಾನ
ಸರಿಸಿ, ಜೀವನ ರೂಪಿಸಿಕೊಂಡವರು,
ನಮ್ಮೆಲ್ಲರ ನಡುವೆ ಸಾಮಾನ್ಯರಂತಿದ್ದು
ಎಲೆ ಮರೆಯ ಹೂವು ಹಣ್ಣುಗಳಂತೆ
ಸುಗಂಧ ಪಸರಿಸಿ ನಿಶಬ್ದತೆಯಲಿ,
ಶುಷ್ಕತೆಗೆ ಸರಿಯಲು ಇಚ್ಛಿಸುವವರು.

ಅನುಕರಣೀಯರು,
ಯಾರಿವರು?,

ಜೀವನದ ಗಮ್ಮತ್ತು

ಜೀವನದ ಗಮ್ಮತ್ತು ಅನುಭವಿಸೆ
ದಾಟಬೇಕು ಅರವತ್ತು,
ಬಂಡಿ ಸಾಗುವುದು ಹಾದಿಯಲಿ
ನೂರಾರು ಜವಾಬ್ದಾರಿಗಳ ಮಣ
ಭಾರ ಹೊತ್ತು.

ಅರವತ್ತರಾಚೆ, ಸುತ್ತ ಪ್ರೀತಿ ವಾತ್ಸಲ್ಯದ
ಸೆಳೆತವಿರಬೇಕು, ಎಲ್ಲವನು, ಎಲ್ಲರನು
ಒಪ್ಪಿ ಅಪ್ಪಿಕೊಳ್ಳುವ ಪಾಠ ಕಲಿತಿರಬೇಕು,
ಸಂಬಂಧಗಳ ಸಿಹಿ ಕಹಿ ಏರಿಳಿತದ ಭಾವ
ಮನವ ತಟ್ಟದಂತಿರಬೇಕು,ಎಲ್ಲೆಡೆ ಒಳಿತ
ಕಾಣುವಭಾವ ಮನದಲಿರಬೇಕು.

"ಬುದ್ಧಿ ಕರ್ಮಾಣುಸಾರೆ "ಎಂಬ ಕೃಷ್ಣನ
ಗೀತಾ ತತ್ವದ ಅರ್ಥವರಿತು, ಪರರ
ಕಾರ್ಯಗಳ ಪರಕಿಸುವ ಭಾವ ಮನದಿಂದ

ಕಿತ್ತೊಗೆಯಬೇಕು. ಮನೆ/ಮನದಲಿ
ಸಂಗ್ರಹಣದ ಭಾವ ದೂರಾಗಿಸಿ, ಬಾಳ
ಹಗುರಾಗಿಸಲು, ಸರಳೀಕರಣದ ಸುಲಭ
ಉಪಾಯ, ದಾನ ಧರ್ಮದ ಪಾಠ ಮನಕೆ
ಕಲಿಸಲು ಬೇಕು.

ಇಂದಿನಲಿ ಸುಖಿಸಿದರು, ವಿಧಿಯಾಟದ
ಪರಿಧಿ,ನಶ್ವರ ಜೀವನದ ಕ್ಷಣಿಕತೆಯ
ಅರಿತು, ಕ್ಷಿತಿಜದೊಡೆಯನ ಕರೆಗೆ ಸದಾ
ಸಿದ್ಧರಾಗಿರಬೇಕು.
ಜೀವನದ ಗಮ್ಮತ್ತು ಅನುಭವಿಸೆ ,
ದಾಟಿದರೂ ಅರವತ್ತು, ಅಂಟಿದರು
ಅಂಟದಂತೆ,ಇದ್ದು ಇರದಂತೆ ಇರಬೇಕು.
ಇದ್ದು ಇರದಂತೆ ಇರಬೇಕು.

೧೩. ಸುವರ್ಣಲಕ್ಷ್ಮಿ



ಶಿವಾಜಿ ಸ್ಫೂರ್ತಿ ಕೇಂದ್ರ ಶ್ರೀಶೈಲಂ

ಶಿವಾಜಿ ಮಹಾರಾಜರ ಜಯಂತಿಯಂದು ವಿಶಿಷ್ಟ ಸ್ಥಳದ ಪರಿಚಯವಿದೋ "ಶ್ರೀಶೈಲ ಶಿಖರಂ ದೃಷ್ಟ್ವಾ ಪುನರ್ಜನ್ಮ ನವಿಶ್ಯತಿ". ಶ್ರೀಶೈಲಂನ ಶಿವ ದೇಗುಲದ ಶಿಖರವನ್ನು ದರ್ಶಿಸಿದರೆ ಪುನರ್ಜನ್ಮ ಇರುವುದಿಲ್ಲ ಎಂದು ನಾವೆಲ್ಲಾ ಶ್ರೀಶೈಲಕ್ಕೆ ಭೇಟಿ ನೀಡುತ್ತೇವೆ. ಆದರೆ ದೇವಾಲಯದಿಂದ ಅನತಿ ದೂರದಲ್ಲಿರುವ ಶಿವಾಜಿ ಮಹಾರಾಜರ ಸ್ಮಾರಕದ ಬಗ್ಗೆ ನಮ್ಮಲ್ಲಿ ಬಹಳ ಜನಕ್ಕೆ ತಿಳಿದಿಲ್ಲ. ಕಳೆದ ಬೇಸಿಗೆಯಲ್ಲಿ ಮುಖಪುಟದ ಸ್ನೇಹಿತರ ಮಾಹಿತಿ ಮೇರೆಗೆ ನಾನು ಶ್ರೀಶೈಲಂನ ದೇಗುಲ ಹಾಗೂ ಶಿವಾಜಿ ಸ್ಮಾರಕಕ್ಕೆ ಭೇಟಿ ನೀಡಿದ್ದೆ ರಾಜಕಳೆ ತುಂಬಿರುವ ಶಿವಾಜಿ ವಿಗ್ರಹ ವಾಹ್ ತುಂಬಾ ಚೆನ್ನಾಗಿದೆ ಇಗೋ ವಿವರಗಳು,



1677 ರಲ್ಲಿ, ಶ್ರೀ ಶಿವಾಜಿ ಮಹಾರಾಜರು ತಮ್ಮ ದಕ್ಷಿಣದ ದಂಡಯಾತ್ರೆಯ ಸಮಯದಲ್ಲಿ ಶ್ರೀಶೈಲಂ ದೇವಸ್ಥಾನಕ್ಕೆ ಭೇಟಿ ನೀಡಿದರು ಮತ್ತು ಅವರ ಅನುಯಾಯಿಗಳು ತನಗಾಗಿ ನಿರ್ಮಿಸಿದ ಧ್ಯಾನ ಮಂದಿರದಲ್ಲಿ ತಾಯಿ ಭವಾನಿಯನ್ನು ಪ್ರಾರ್ಥಿಸಿದರು. ಮತ್ತೆ ತಾಯಿಯು ಶ್ರೀ ಶಿವಾಜಿ ಮಹಾರಾಜರಿಂದ ಸಂತುಷ್ಟಳಾದಳು ಮತ್ತು ಸನಾತನ ಧರ್ಮವನ್ನು ರಕ್ಷಿಸಲು ಕತ್ತಿಯನ್ನು ನೀಡಿ ಆಶೀರ್ವದಿಸಿದಳು ಎಂದು ಪುರಾಣಗಳು ಹೇಳುತ್ತವೆ.

1974 ರಲ್ಲಿ, ಶ್ರೀ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ತ್ರಿಶತಮಾನೋತ್ಸವವನ್ನು “ಛತ್ರಪತಿ” ಎಂದು ದೇಶದಾದ್ಯಂತ ಆಚರಿಸಲಾಯಿತು. ಈ ಸಮಯದಲ್ಲಿ ಹಿರಿಯ ಸಮಾಜ ಸೇವಕ, ಇತಿಹಾಸಕಾರ ಮತ್ತು ಹಿರಿಯ ಆರೆಸ್ಸೆಸ್ ನಾಯಕ, ಮೋರೇಶ್ವರ ನೀಲಕಂಠ ಪಿಂಗಳೆ ಅವರು ಮೋರೋಪಂತ್ ಜಿ ಎಂದು ಜನಪ್ರಿಯರಾದ ಶ್ರೀ ವಿ. ರಾಮಮೋಹನ ರಾವ್ ಅವರೊಂದಿಗೆ ಜಾಗೃತಿ, ತೆಲುಗು ವಾರಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಶಿವಾಜಿ ತಪಸ್ಸನ್ನು ಮಾಡಿದ ಧ್ಯಾನ ಮಂದಿರಕ್ಕೆ ಭೇಟಿ ನೀಡಿದರು. ಧ್ಯಾನ ಮಂದಿರವು ಶಿಥಿಲಾವಸ್ಥೆಯಲ್ಲಿದ್ದು, ತುರ್ತು ನವೀಕರಣದ ಅಗತ್ಯವಿತ್ತು. ಆ ಸ್ಥಳದಲ್ಲಿ ಶ್ರೀ ಶಿವಾಜಿ ಮಹಾರಾಜರ ತಪಸ್ಸನ್ನು ಸ್ಮರಿಸಲು ಸೂಕ್ತವಾದ ಸ್ಮಾರಕವನ್ನು

ನಿರ್ಮಿಸಬೇಕೆಂದು ಅವರು ನಿರ್ಧರಿಸಿದರು. ಸ್ಮಾರಕವು ಶ್ರೀ ಶಿವಾಜಿ ಮಹಾರಾಜರ ಚೈತನ್ಯದ ಸ್ಫೂರ್ತಿಯ ಕೇಂದ್ರವಾಗಿದೆ ಮತ್ತು ಇದನ್ನು "ಶ್ರೀ ಶಿವಾಜಿ ಸ್ಫೂರ್ತಿ ಕೇಂದ್ರ" ಎಂದು ಸೂಕ್ತವಾಗಿ ಕರೆಯಲಾಗುತ್ತದೆ.

ಸ್ಮಾರಕದ ಎಲ್ಲಾ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸಲು, ಒಂದು ಸಮಿತಿ ಅಂದರೆ. ಶ್ರೀ ಶಿವಾಜಿ ಸ್ಮಾರಕ ಸಮಿತಿಯನ್ನು 1975 ರಲ್ಲಿ ರಚಿಸಲಾಯಿತು ಮತ್ತು ನೋಂದಾಯಿಸಲಾಯಿತು. ಕನ್ಯಾಕುಮಾರಿಯಲ್ಲಿರುವ "ವಿವೇಕಾನಂದ ರಾಕ್ ಮೆಮೋರಿಯಲ್" ಮಾದರಿಯಲ್ಲಿ ಸ್ಮಾರಕವನ್ನು ಕಲ್ಪಿಸಲಾಯಿತು. ಇದನ್ನು ಮಹಾಬಲಿಪುರಂನ (ತಮಿಳುನಾಡು) ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಗಣಪತಿ ಸ್ತಪತಿ ಅವರು ವಿನ್ಯಾಸಗೊಳಿಸಿದ್ದಾರೆ ಮತ್ತು ಕಂಚಿ ಕಾಮಕೋಟಿ ಪೀಠದ ಜಗದ್ಗುರು ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳ ಆಶೀರ್ವಾದಿಂದ ಪ್ರಾರಂಭಗೊಳಿಸಲಾಯಿತು.

ಎಪಿ ದತ್ತಿ ಇಲಾಖೆಯು 10,233 ಚ. ಅಡಿ ಭೂಮಿಯನ್ನು ಶ್ರೀ ಶ್ರೀ ಶಿವಾಜಿ ಸ್ಮಾರಕ ಸಮಿತಿಗೆ 99 ವರ್ಷಗಳ ಭೋಗ್ಯಕ್ಕೆ ನೀಡಲಾಗಿದೆ. 1983 ರಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಶ್ರೀ ವಸಂತ ದಾದಾ ಪಾಟೀಲ್ ಅವರು ಭೂಮಿ ಪೂಜೆಯನ್ನು ನೆರವೇರಿಸಿದರು.

ಸ್ಮಾರಕವು 7500 ಚದರ ವಿಸ್ತೀರ್ಣದ ಸಭಾಂಗಣವನ್ನು ಒಳಗೊಂಡಿದೆ. ಅಡಿ, ನೆಲ ಮಹಡಿಯಲ್ಲಿ "ಸಮರ್ಥ ಸಭಾ ಮಂಟಪ" ಎಂದು ಹೆಸರಿಸಲಾಗಿದೆ ಮತ್ತು ಮೊದಲ ಮಹಡಿಯನ್ನು 10,000 ಚದರ ಅಡಿ ವಿಸ್ತೀರ್ಣದೊಂದಿಗೆ 'ದರ್ಬಾರ್ ಹಾಲ್" ಎಂದು ಕರೆಯಲಾಗುತ್ತದೆ.ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಕಂಚಿನ ಪ್ರತಿಮೆಯನ್ನು ಸಭಾಂಗಣದಲ್ಲಿ 4 ಅಡಿ ಪೀಠದ ಮೇಲೆ ಸ್ಥಾಪಿಸಲಾಗಿದೆ. ಸುತ್ತಲಿನ ಗೋಡೆಗಳ ಮೇಲೆ ಶಿವಾಜಿಯವರ ಜೀವನದ ಘಟ್ಟಗಳನ್ನು ಕಂಚಿನ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಇಡೀ ಸ್ಮಾರಕ ಮನಮೋಹಕವಾಗಿದೆ ಶಿವಾಜಿ ಪ್ರತಿಮೆಯಂತೂ ತಾನೇ ಬಂದು ಕುಳಿತಂತಿದೆ.

ಈ ಸಲದ ಶ್ರೀಶೈಲಂನ ಭೇಟಿಯಲ್ಲಿ ತಪ್ಪದೇ ಶಿವಾಜಿ ಸ್ಮಾರಕಕ್ಕೆ ಭೇಟಿ ನೀಡಿ.

೧೪. ಅನ್ನಪೂರ್ಣ ಸುಬ್ಬರಾವ್



ಕರುಳು

ವಾಣಿಯ ಮನಸಿಗೆ ಎಲ್ಲಿಲ್ಲದ ಬೇಸರ. ಏನೋ ಕಳವಳ, ಹೇಳಿಕೊಳ್ಳಲಾಗದ ಸಂಕಟ. ತಿಂಡಿ ಬೇಡ ಅನ್ನಿಸಿತು. ತಿನ್ನುವ ಮನಸೂ ಇಲ್ಲ. ನನಗೆ ಬೇಡ ಅಂದಮಾತ್ರಕ್ಕೆ ಉಳಿದವರಿಗೂ ಬೇಡ ಅನಿಸುವುದೇ..? ಅವರ ಹೊಟ್ಟೆ ತುಂಬಿಸಬೇಕಲ್ಲ..!



ಒಲೆ ಮುಂದೆ ನಿಂತವಳ ಕೈ ಯಾಂತ್ರಿಕವಾಗಿ ದೋಸೆ ಹಾಕುತ್ತಿದೆ. ಹೆಂಚಿನ ಮೇಲೆ ದೋಸೆ ಬೇಯುವ ಹಾಗೆ, ಮನಸೂ ಬೇಯುತ್ತಿದೆ. ಹೇಗೆ ಮುಗಿತೋ ಅಂತೂ ತಿಂಡಿಯ ಕೆಲಸ ಮುಗಿಸಿದಳು..

ವಾಣಿ, ಈಕಡೆ ಬಾ. ನಾನು ಬಿಸಿ ಬಿಸಿ ದೋಸೆ ಹಾಕ್ಕೊಡ್ತೀನಿ. ನೆಮ್ಮದಿಯಾಗಿ ಕೂತ್ಕೊಂಡು ತಿಂಡಿ ತಿನ್ನು ಎಂದ ವಾಸು.

ಗಂಡ ಹೇಳಿದ್ದು ಪೂರ್ತಿ ತನ್ನ ಕಿವಿಗೆ ತಲುಪುವ ಮುಂಚೆಯೇ ವಾಣಿಯ ಶರೀರ ಮಂಚದ ಮೇಲೆ ಅಡ್ಡಾದಿಡ್ಡಿಯಾಗಿ ಮೈಚೆಲ್ಲಿತ್ತು. ಕೈ ಕಾಲುಗಳಲ್ಲಿ ಶಕ್ತಿಯನ್ನೇ ಕಳೆದುಕೊಂಡ ಹಾಗೆ, ಎಂದೂ ಇಲ್ಲದ ಈ ಸಂಕಟ ಯಾಕೇ...? ಎಂದು ತಿಳಿಯಲಿಲ್ಲ. ತಟ್ಟೆಯಲ್ಲಿ ದೋಸೆಯನ್ನುತಂದ ವಾಸು, ನನ್ನ ಅವಸ್ಥೆ ನೋಡಿ, ಯಾಕೋ ನಿನ್ನ ಮನಸು ಸರಿಯಿಲ್ಲ ಸ್ವಲ್ಪ ಹೊತ್ತು ಮಲಗು.. ಎಲ್ಲ ಸರಿಹೋಗುತ್ತೆ ಎಂದು ತಟ್ಟೆ ಪಕ್ಕಕ್ಕಿಟ್ಟು, ಬಿಪಿ ಪರೀಕ್ಷೆ ಮಾಡಿದರು..

ಅಲ್ಲಾ...!! ಬಿಪಿ ಇಷ್ಟು ಜಾಸ್ತಿ ಇದ್ರೆ ಇನ್ನೇನಾಗುತ್ತೆ ಹೇಳು..! ಒಂದು ದೋಸೆ ತಿಂದು , ಈ ಮಾತ್ರೆ ನುಂಗಿ ಮಲಕ್ಕೋ ಏದ್ದೇಳು..!!
ರೀ... ಇದು ಬಿಪಿದಲ್ಲ ರಿ. ಬಿಪಿ ಜಾಸ್ತಿ ಆದ್ರೆ ಆಗೋ ಪರಿಣಾಮ ಏನೂಂತ ನಂಗೊತ್ತಿಲ್ವಾ.. ಹೇಳಿ..? ಬೇರೆ ಏನೋ ಸಂಕಟರಿ.. ಏನೂ ಅಂತಾನೆ ಹೇಳಕ್ಕಾಗ್ತಾಇಲ್ಲ ರಿ. ಯಾವತ್ತೂ ಹೀಗಾಗಿಲ್ಲ..?

ಹೋಗ್ಲಿ.. ಬಿಡು ಮಾರಾಯ್ತಿ.. ಕಣ್ಣು ಮುಚ್ಚಿ ಮಲಗು ಸ್ವಲ್ಪ ಹೊತ್ತು, ಮಾತಾಡ್ಬೇಡ..!! ಎಂದ ವಾಸು.

ವಾಣಿ.. ನಿಮ್ಮಾವಂಗೆ ಕಾಫಿ ಬೇಕಂತಮ್ಮ ಅನ್ನುತ್ತಾ ಒಳಗೆ ಬಂದ ಅಮ್ಮ , ಇವಳನ್ನು ನೋಡಿ ಯಾಕಮ್ಮ ಏನಾಯ್ತು..? ತಿಂಡಿ ತಿಂದ್ಯೋ ಇಲ್ವೋ..? ಅಂತ ಕೇಳಿದ್ರು..

ಇಲ್ಲಮ್ಮ, ಯಾಕೋ ವಿಚಿತ್ರವಾದ ಸಂಕಟ ಆಗ್ತಿದ್ಯಂತೆ, ಏನೂಂತನೆ ಹೇಳಕ್ಕಾಗ್ತಿಲ್ಲ ಅಂತ ಒದ್ದಾಡ್ತಾ ಇದ್ದಾಳೆ. ಆದಕ್ಕೆ ಒಂದು ಘಳಿಗೆ ಮಲಕ್ಕೋ ಅಂತ ಹೇಳ್ದೆ. ಅನ್ನುತ್ತಿದ್ದ ಹಾಗೇ ಟೇಬಲ್ ಮೇಲಿದ್ದ ಫೋನ್ ರಿಂಗಣಿಸಿತು.. ಮೊದ್ಲು ಅದನ್ನ ಸ್ವಿಚ್ ಆಫ್ ಮಾಡಿಡು .. ಇಲ್ಲಾಂದ್ರೆ ಅವ್ಳನ್ನ ಮಲಗೋಕು ಬಿಡಲ್ಲ ಅದು...!! ಅಂದ್ಲು ಅಮ್ಮ.

ಅಮ್ಮನ ಮಾತಿನಂತೆ ಫೋನ್ ಸ್ವಿಚ್ ಆಫ್ ಮಾಡಿ, ಅವಳ ಹತ್ತಿರವೆ ಕುಳಿತ ವಾಸು.

ಹೊಲದಿಂದ ಓಡೋಡಿ ಬಂದ ಆಳು ಕೆಂಚ, ಅಮ್ಮಾವ್ರೇ..!! ಅಮ್ಮಾವ್ರೇ.. !! ಎಂದು ಕೂಗುತ್ತ ಅಂಗಳಕ್ಕೆ ಬಂದ.. ಅವನು ಗಾಬರಿಯಿಂದ ಕೂಗುವುದನ್ನು ಕೇಳಿ, ಎಲ್ಲರೂ ಅಂಗಳಕ್ಕೆ ಬಂದರು. ಬಾಯಿಮೇಲೆ ಚೌಕ ಅಡ್ಡ ಇಟ್ಕೊಂಡು ನೆಲ ನೋಡ್ತ ಅಳುತ್ತಿದ್ದವನನ್ನು ಏನಾಯ್ತೋ ಕೆಂಚ ಎಂದಳು ವಾಣಿ...?

ಹೆಂಗವ್ವ ಹೇಳ್ಲಿ'..ನಮ್ಮ ತುಂಗೆ.. ನಮ್ ತುಂಗೆ..!

ಏನಾಯ್ತು...? ತುಂಗೆಗೆ .. ಏನಾಯ್ತೋ ಹೇಳೋ.!! ತುಂಗೆ..ತುಂಗೆ..ತಡೆ ತಡೆದು, ತೀರ್ಕೊಂಡ್ ಬುಡ್ತು ಕಣ್ರವ್ವ.'. ಎಂದ..

ಹೇಗಾಯ್ತೋ..? ಆರಾಮಾಗೇ ಇದ್ಲಲ್ಲೋ..? ಕೇಳಿದ ವಾಸು ಆತಂಕದಿಂದ ..!
"ಕರ ಹೊಟ್ಯಾಗೆ ಸತ್ತೋಗಿತ್ತು ಬುದ್ಧಿ. ಶಾನೆ ತ್ರಾಸಾಯ್ತು".. ಕೊನೆಗೂ ಉಳ್ಕೊಳ್ಳಕ್ಕಾಗ್ಲಿಲ್ಲ ಬುದ್ಧಿ.. ಎಂದ.. ದುಃಖದಿಂದ.

ಸುದ್ದಿ ಕೇಳಿ, ಏನೂ ಮಾತಾಡದೇ, ನಿಂತಲ್ಲೇ ಕುಸಿದು ಕುಳಿತಳು ವಾಣಿ.

ನಿಟ್ಟುಸಿರು ಬಿಟ್ಟ ಅಮ್ಮ, ಈಗ ಗೊತ್ತಾಯ್ತು ಕಣೋ ವಾಸು.. ನಿನ್ ಹೆಂಡ್ತಿಗೆ ವಿಚಿತ್ರವಾದ ಸಂಕಟ ಯಾಕಾಗ್ತಾ ಇತ್ತು ಅಂತ.. ನಿಂಗೆ ನೆನಪಿದ್ಯಾ..? ನಿನ್ನ ಮಗಳು ಚೈತ್ರ ಹುಟ್ಟಿದ ದಿನವೇ ತುಂಗೆಯು ಹುಟ್ಟಿ , ಅವಳಮ್ಮ ಗಂಗೆ

ತೀರ್ಕೊಂಡಿದ್ದು.. ತಾಯಿಯಿಲ್ಲದ ತುಂಗೆಯನ್ನು, ನಂಗೆ ಎರಡು ಮಕ್ಕಳು ಅಂತ ಜೊತೆಯಲ್ಲಿ ಅದನ್ನೂ ಕರ್ಕೊಂಡ್ ಬಂದು, ಮಗಳಿಗಿಂತ ಹೆಚ್ಚಾಗಿ ನೋಡ್ಕೊಂಡು , ಆದರ ಮೇಲೆ ಜೀವಾನೆ ಇಟ್ಕೊಂಡಿದ್ಲು.. ಇಷ್ಟು ದಿನ ಮನೆ ಮಂದಿಗೆಲ್ಲ ಸಂವೃದ್ದಿಯಾಗಿ ಹಾಲು ಕೊಟ್ಟವಳು ತುಂಗೆ.
ನಿನ್ನ ಮಗಳು ಗಂಡನ ಮನೆಗೆ ಹೋದ್ಮೇಲೆ, ತುಂಗೆ ಅವಳ ಬೇಸರ ಕಳೆವ ಮಗಳಾಗಿದ್ಲು..

ಈಗ ಹೇಗೆ ಸಹಿಸ್ಕೊತಾಳೊ..? ಅವಳಿಗೆ ಸಮಾಧಾನ ಮಾಡೋದೇ ಇರೋದು...!!

"ಹೌದಮ್ಮ.. ನಂಗೂ ಅದೇ ಚಿಂತೆ..ಅತಿಯಾಗಿ ಹಚ್ಕೊಂಡ್ ಬಿಟ್ಟು.' ಅನ್ಸುತ್ತೆ.. ನೀನೇ ಸಮಾಧಾನ ಹೇಳಮ್ಮ..! ಅಂದ ವಾಸು.

ಮಾತಿಲ್ಲದೆ ಕುಳಿತಿದ್ದ ವಾಣಿಯ ಭುಜ ಹಿಡಿದ ಅತ್ತೆ, ವಾಣಿ , 'ಆದಕ್ಕೆ ಕಣೇ ನಿಂಗೆ ಈ ಸಂಕ್ಟ.. ಕಣ್ಣರಿಯದೆ ಹೋದ್ರೂ ಕರುಳರಿಯುತ್ತೆ ಅನ್ನೋದು ಇದಕ್ಕೆ ನೋಡು.ಮನುಷ್ಯರಾದ್ರೇನು, ಮೂಕ ಜೀವಿ ಆದ್ರೇನು ....? ಭಾವನೆ ಒಂದೇ ಅಲ್ವಾ..! ಭಾವನಾತ್ಮಕ ಸಂಬಂಧ ಅಂದ್ರೇನೆ ಹಾಗೆ ನೋಡು. ರಕ್ತದಲ್ಲಿ ಬೆರೆತು ಹೋಗಿದೆ.' ಸಮಾಧಾನ ಮಾಡ್ಕೊ ಮಗಳೇ..! ಏಳು..

'ವಾಸು ಕರ್ಕೊಂಡ್ ಹೋಗೋ ಇವ್ಳನ್ನ ಒಳಕ್ಕೆ'

ಏಳು ವಾಣಿ. ಒಳಗೋಗೋಣ.. 'ಎಷ್ಟು ಹೊತ್ತು ಅಂತ ಹೀಗೇ ಕೂತಿರ್ತಿ..?'
ವಾಣಿಯಿಂದ ಯಾವ ಮಾತೂ ಬರ್ಲಿಲ್ಲ.

ಮಾತಾಡು ವಾಣಿ, ಮೌನವಾಗಿರ್ಬೇಡ..
'ಅತ್ತುಬಿಡು . ಮನಸು ಹಗುರಾಗುತ್ತೆ. ದುಃಖ ಹೆಚ್ಚಾದಷ್ಟೂ ಮನಸು ಭಾರ ಆಗುತ್ತೆ ಕಣೇ. ದುಖಃ ಹೊರಹಾಕು, ಅತ್ತುಬಿಡು.'
ನಡಿ, 'ತುಂಗೆನ ಕೊನೇ ಸಾರೀ ನೋಡ್ಕೊಂಡ್ ಬರೋಣ'.

ವಾಣಿ, ಮಾತಿಲ್ಲದೆ ಕಣ್ಣುಮುಚ್ಚಿ ವಾಸುವಿನ ಎದೆಯ ಮೇಲೆ ಒರಗಿದಳು. ಸದ್ದಿಲ್ಲದೆ ಅವಳ ಜೀವ ತುಂಗೆಯನ್ನು ಅರಸಿ ಹೋಗಿತ್ತು. ಸಾಂತ್ವನ ಹೇಳುವಂತೆ ಶಾಶ್ವತವಾಗಿ ತುಂಗೆಯನ್ನು ಅಪ್ಪಿಕೊಂಡಿದ್ದಳು ವಾಣಿ..!!

.

೧೫. ಪ್ರಮೋದಾ ಮೂರ್ತಿ



ಓಂ ನಮಃ ಶಿವಾಯ !

ಅಬ್ಬಾ! ಈ ಶಿವರಾತ್ರಿಯ ಜಾಗರಣೆ ಮಾಡಿ ಸುಸ್ತಾಯ್ತಪ್ಪ. ಈ ಉಪವಾಸ, ವನವಾಸ ಎಲ್ಲಾ ಬಿಟ್ಟುಬಿಡಬೇಕು. ಜಾಗರಣೆ ಮಾಡೋದು ಅಂದ್ರೆ ಸುಲಭ ಏನಲ್ಲ. ವಯಸ್ಸೂ ಆಯ್ತಲ್ಲ... ಎಂದುಕೊಳ್ಳುತ್ತಾ ಗಿರಿಜಮ್ಮ ಮನೆ ಎದುರುಗಡೆ ಇರುವ ಶ್ರೀಕಂಠೇಶ್ವರನ ದೇವಸ್ಥಾನದ ಕಡೆ ನೋಡಿದರು. ಅಲ್ಲೊಬ್ಬರು ಇಲ್ಲೊಬ್ಬರು ಅಂತ ಬೆರಳೆಣಿಕೆಯಷ್ಟು ಜನ. ಎಲ್ಲರೂ ಜಾಗರಣೆ ಮಾಡಿ ಸುಸ್ತಾಗಿ ಮನೆಗಳಲ್ಲಿ ಆರಾಮ ಮಾಡುತ್ತಿರಬೇಕು ಅಂತ ಅಂದುಕೊಂಡರು.



ಹಿಂದಿನ ದಿನ ಉಪವಾಸ ಮಾಡಿದ್ದು ಹೊಟ್ಟೆ ಹಸಿಯುತ್ತಿತ್ತು. ಆದರೂ ಬೆಳಿಗ್ಗೆ ತಿಂಡಿ ಮಾಡದೆ ಬೇಗನೆ ಅಡಿಗೆ ಮಾಡಿ, ಊಟ ಮುಗಿಸಿ ಸುಸ್ತಾಗಿ ಮನೆ ಬಾಲ್ಕನಿಯಲ್ಲಿ ಕುಳಿತರು. ಅಲ್ಲಿಂದ ದೇವಸ್ಥಾನಕ್ಕೆ ಬರೋ ಹೋಗೋ ಜನರು, ಬೀದಿಯಲ್ಲಿ ಓಡಾಡೋ ಜನ ಎಲ್ಲರೂ ಕಾಣಿಸುತ್ತಿದ್ದರು. ಕೊನೆಯ ಭಕ್ತಾದಿಗಳು ಹೊರಗೆ ನಡೆಯುತ್ತಿದ್ದಂತೆಯೇ ದೇವಸ್ಥಾನದ ವಾಚ್ಮನ್ ಗೇಟುಗಳಿಗೆ ಬೀಗ ಹಾಕುತ್ತಿದ್ದ. ಹೊರಗಡೆ ಬಿಸಿಲಿನ ಜೊತೆ ತಂಗಾಳಿ ಇದ್ದರೂ ಹೊಟ್ಟೆ ತುಂಬಿದ್ದಕ್ಕೋ ಅಥವಾ ಹಿಂದಿನ ದಿನ ನಿದ್ದೆ ಬಿಟ್ಟ ಪ್ರಭಾವವೋ ಕಣ್ಣು ಎಳೆಯುತ್ತಿತ್ತು. ಮುಂದುಗಡೆ ಬಾಗಿಲು ಭದ್ರಪಡಿಸಿ ಒಳಗೆ ಬಂದ ಗಿರಿಜಮ್ಮ ಹಾಸಿಗೆ ಮೇಲೆ ಉರುಳಿಕೊಂಡರು. ಅವರ ಯಜಮಾನರಾದ ನಾಗರಾಜರಾಯರು ಆ ವೇಳೆಗಾಗಲೇ ಗೊರಕೆ ಹೊಡೆಯುತ್ತಿದ್ದರು..ಅವರನ್ನು ನೋಡುತ್ತಾ ಇದ್ದ ಗಿರಿಜಮ್ಮನೂ ನಿದ್ದೆಗಿಳಿಯುತ್ತಾ ಪತಿಯ ಜೊತೆ ಗೆ ಶ್ರುತಿ ಸೇರಿಸತೊಡಗಿದರು.

ಅಭಿಷೇಕ ಪ್ರಿಯ ಶ್ರೀಕಂಠೇಶ್ವರನಿಗೆ ಅಭಿಷೇಕ ನಡೆಯುತ್ತಿದೆ. ಅರ್ಚಕರ ಕಂಠದಿಂದ ರುದ್ರ ,ಚಮೆ ರಾಗವಾಗಿ ಜೋರಾಗಿ ಮೊಳಗುತ್ತಿದೆ. ಅಭಿಷೇಕದಿಂದ ತೊಯ್ದ ಲಿಂಗ ಫಳ ಫಳನೆ ಹೊಳೆಯುತ್ತಿದೆ. ಭಕ್ತಾದಿಗಳು ಅದನ್ನು ವೀಕ್ಷಿಸುತ್ತಾ ಭಕ್ತಿ ಭಾವಗಳಲ್ಲಿ ಸ್ತೋತ್ರ, ಭಜನೆ ಹೇಳಿಕೊಳ್ಳುತ್ತಿದ್ದಾರೆ.

ಅಲಂಕಾರ ಹಾಗೂ ನೈವೇದ್ಯಕ್ಕೋಸ್ಕರ ತೆರೆ ಹಾಕಿದ್ದ ಅರ್ಚಕರು ತೆರೆಸರಿಸಿದಾಗ ಭಕ್ತಭಾಂದವರಲ್ಲಿ ಹರ್ಷೋದ್ಗಾರ. ದಿನವೂ ನೋಡುತ್ತಿದ್ದ ಅದೇ ಶಿವಲಿಂಗವನ್ನು ಶಿವರಾತ್ರಿಯ ದಿನ ನೋಡುವುದು ಏನೋ ಒಂದು ಸಂತಸ, ಸಡಗರ, ಆನಂದ. ಮಂಗಳಾರತಿ ಮತ್ತು ಪ್ರಸಾದವಿನಿಯೋಗವಾಗಿ ಭಕ್ತರ ಒಂದು ತಂಡ ಕರಗಿತ್ತು.. ಹಿಂದೆ ದರುಶನಕ್ಕೆ ಕ್ಯೂನಲ್ಲಿ ಕಾದು ನಿಂತಿರುವ ಜನಸಾಗರ ಜಾಮ ಜಾಮಗಳಲ್ಲಿ ನಡೆಯುತ್ತಿರುವ ಅಭಿಷೇಕಕ್ಕೆ ಸಾಕ್ಷಿಯಾಗಿ ತಂಡೋಪ ತಂಡವಾಗಿ ಬರುತ್ತಾ ದರ್ಶನ ಪಡೆಯುತ್ತಾ ಮುಂದೆ ಸರಿಯುತ್ತಿದ್ದಾರೆ. ಧನ್ಯತಾಭಾವದಿಂದ ಶಿವಸ್ಮರಣೆ ಮಾಡುತ್ತಾ ಪೂಜೆಯನ್ನು ಕಣ್ಣಿನಲ್ಲಿ ತುಂಬಿಕೊಳ್ಳುತ್ತಾ ದೇವಸ್ಥಾನದಲ್ಲಿ ಒಂದು ಕಡೆ ಕುಳಿತು ಗಿರಿಜಮ್ಮ ಜಾಗರಣೆಯಲ್ಲಿ ತಮ್ಮನ್ನು ತಾವು ಮರೆತು ಬಿಟ್ಟಿದ್ದಾರೆ . ಆನಂದಭಾವದಿಂದ ಮೈಮನಗಳು ಪುಳಕಗೊಂಡಿವೆ.

"ದೂರದಲ್ಲಿಲ್ಲ ಶಿವ... ಹೃತ್ಕಮಲದೊಳ್ ತಾನೆ ತಾನಾದ ಭವ" ಎಂಬ ಹಾಡನ್ನು ಗುನುಗುನಿಸುತ್ತ ಗಿರಿಜಮ್ಮನ ತನು ಮನವೆರಡು ನಿಧಾನವಾಗಿ ಎಚ್ಚರಗೊಂಡಿತ್ತು. ಹಾಗೆಯೇ ಬಲಕ್ಕೆ ತಿರುಗಿ ನೋಡಿದರು. ಪಕ್ಕದಲ್ಲಿ ಮಲಗಿದ್ದ ಯಜಮಾನರು ಹಾಸಿಗೆಯಲ್ಲಿ ಕಾಣಲಿಲ್ಲ. ಎಲ್ಲೋ ಮನೆ ನಾಯಿ ಗಲಾಟೆ ಮಾಡಿರಬೇಕು, ವಾಕಿಂಗ್ ಕರೆದುಕೊಂಡು ಹೋಗಿದ್ದಾರೇನೋ ಅಂತ ಅಂದುಕೊಂಡು ಮಗ್ಗುಲು ತಿರುಗಿಸಿ ಮಲಗಿದಾಗ ಮತ್ತೆ ಕಣ್ಣು ತೇಲಿ ಬಂದಿತ್ತು. ಸ್ವಲ್ಪ ಹೊತ್ತಿನ ನಂತರ ನಾಯಿ ಬೊಗಳಿದ ಶಬ್ದಕ್ಕೆ ಎಚ್ಚರವಾಗಿತ್ತು. "ಏನೂಂದ್ರೆ" ಅಂತ ಜೋರಾಗಿ ಕರೆದರು. ನಿಶ್ಶಬ್ದ..... ಯಾವ ಪ್ರತಿಕ್ರಿಯೆಯೂ ಇಲ್ಲ. ವಾಕಿಂಗ್ ನಿಂದ ಬಂದಿಲ್ಲವೇ? ಎಲ್ಲಿ ಹೋಗಿರಬಹುದು? ಎಂದು ಮಲಗಿದ್ದಲ್ಲೇ ಯೋಚನೆ ಮಾಡತೊಡಗಿದರು. ಇನ್ನೂ ಬೆಳಕು ಆಗಿಲ್ಲ. ಆವಾಗ ಯಜಮಾನರು ಹೇಳುತ್ತಾ ಇದ್ದ ಮಾತು ಜ್ಞಾಪಕಕ್ಕೆ ಬಂತು. ಅವರ ಬಹಳಷ್ಟು ಸ್ನೇಹಿತರೆಲ್ಲಾ 75 ವಯಸ್ಸು ದಾಟಿದವರು. ದಿನ ಬೆಳಗಾಗಿ ಎದ್ದರೆ ಏನಾದರೊಂದು ಸುದ್ದಿ ಸಾಮಾನ್ಯ. ಇವತ್ತು ಯಾರಿಗೋ ಏನೋ ಆಗಿದೆ. ನಾನು ನಿದ್ದೆ ಮಾಡುತ್ತಾ ಇದ್ದುದನ್ನು ನೋಡಿ ನನ್ನನ್ನು ಎಬ್ಬಿಸದೇ ಹಾಗೆ ಎದ್ದು ಹೋಗಿರಬಹುದು ಎಂದುಕೊಂಡರು.

ಹೂಂ.. ಯಾರಿಗೆ ಏನಾಯ್ತೋ ಅಂತ ಅಂದುಕೊಳ್ಳುತ್ತಾ ಇದ್ದ ಹಾಗೆ, ಮತ್ತೆ ನಿದ್ರಾದೇವಿ ಆವರಿಸಿದ್ದಳು. ಎಷ್ಟೋ ಸಮಯದ ನಂತರ ಎಚ್ಚರವಾದಾಗ ಎಲ್ಲಾ ಕಡೆಯೂ ನಿಶ್ಶಬ್ದ. ಇನ್ನೂ ಯಾಕೆ ಬೆಳಕೇ ಆಗಿಲ್ಲವಲ್ಲ ಎಂದುಕೊಳ್ಳುತ್ತಾ ಹಾಸಿಗೆ ಮೇಲೆ ಎದ್ದು ಕುಳಿತು ಕಿಟಕಿಯಿಂದ ಹೊರಗೆ ನೋಡಿದಾಗ ದೇವಸ್ಥಾನದ ದೀಪಗಳು, ಜನ ಸೇರಿದ್ದು ಕಂಡುಬಂತು. ಅಪ್ಪಾ... ನಮ್ಮ ಈ ಶಿವನಿಗೆ ಭಕ್ತಾದಿಗಳು ಪುರುಸೊತ್ತು ಕೊಡೋದೇ ಇಲ್ಲ. ಅಲ್ಲೇನಾದರೂ "ಇವರು" ಹೋಗಿದ್ದಾರೇನೋ ನೋಡಿಕೊಂಡು ಬರೋಣ ಅಂತ ತಲೆ ಹಾಗೂ

ಬಟ್ಟೆ ಸರಿ ಮಾಡಿಕೊಂಡು ದೇವಸ್ಥಾನಕ್ಕೆ ಹೋಗಿ ದೇವರಿಗೆ ನಮಿಸಿ ಗಂಡನನ್ನು ಹುಡುಕಾಡಿದರು. ಅಲ್ಲಿ ಎಲ್ಲಿಯೂ ಯಜಮಾನರನ್ನು ಕಾಣದೇ ಆತಂಕಕ್ಕೆ ಒಳಗಾದರು.

ಎಷ್ಟು ಹೊತ್ತಾಯಿತು, ಎಲ್ಲಿ ಹೋಗಿದ್ದಾರೆ? ನನ್ನ ಎಬ್ಬಿಸಿ , ಹೀಗೆ ಹೋಗ್ತಾ ಇದೀನಿ...ಅಂತ ಹೇಳಿ ಹೋಗಬಾರದೆ? ನಮ್ಮ ಆತಂಕ ಇವರಿಗೆ ಅರ್ಥವೇ ಆಗುವುದಿಲ್ಲ ಎಂದು ಗೊಣಗಿಕೊಳ್ಳುತ್ತಾ ತಿರುಗಿ ಮನೆಗೆ ಬಂದು ಸೋಫಾದ ಮೇಲೆ ಕುಳಿತರು. ಹಾಲೇನಾದ್ರೂ ತರಲು ಹೋಗಿರಬಹುದೇ? ಎಂದು ಕಾದರು. ಆದರೂ ಯಜಮಾನರ ಸುಳಿವಿಲ್ಲ... ಸಮಯ ಏನಾಗಿದೆಯೋ ಗೊತ್ತಾಗುತ್ತಿಲ್ಲ. ದರಿದ್ರದ ಗಡಿಯಾರವೂ ಕೆಟ್ಟು ಹೋಗಿದೆ.. ಅದು ಸರಿ ಬೆಳಕ್ಯಾಕೆ ಆಗುತ್ತಿಲ್ಲ... ಎಂದು ತಮ್ಮ ಮೊಬೈಲ್ ಫೋನ್ ಹುಡುಕಿಕೊಂಡು ಹೊರಟರು. ಚಾರ್ಜ್ ಗೆ ಹಾಕಿದ್ದ ಫೋನ್ ಫುಲ್ ಚಾರ್ಜ್ ಆಗಿ ತಣ್ಣಗೆ ಕುಳಿತಿತ್ತು. ಫೋನ್ "ಆನ್" ಮಾಡುತ್ತಿದ್ದಂತೆ ಮಗಳಿಂದ ಕರೆ. ಇದ್ಯಾಕೆ ಇಷ್ಟು ಬೇಗ ಇವಳು ಕರೆ ಮಾಡ್ತಾ ಇದ್ದಾಳೆ ಅಂತ ಗಾಬರಿಯಾಗಿ ಫೋನ್ನಲ್ಲಿ ಟೈಮ್ ನೋಡಿದಾಗ ಅವರಿಗೆ ಅರ್ಥವೇ ಆಗಲಿಲ್ಲ. 7:30 PM ಎಂದು ಸಮಯ ತೋರುತ್ತಾ ಇದೆ ಫೋನ್. ಸ್ವಲ್ಪ ಹೊತ್ತು ಬೆಪ್ಪು ಬಡಿದವರಂತೆ ನಿಂತೇ ಇದ್ದರು. ಮಗಳು "ಅಮ್ಮಾ, ಅಮ್ಮಾ " ಎಂದು ಕರೆಯತೊಡಗಿದಾಗ ವಾಸ್ತವದ ಅರಿವಾಗ ತೊಡಗಿತ್ತು.. ಸಾಯಂಕಾಲ ಕತ್ತಲೆಡೆಗೆ ಜಾರಿದ ಸೂರ್ಯನ ದರ್ಶನ ಆಗುತ್ತೆ, ಆಗುತ್ತೆ ಎಂದು ಕಾದರೆ, ಸೂರ್ಯ ಬರುವುದಾದರೂ ಎಲ್ಲಿ? ಇನ್ನು ಅವನ ದರ್ಶನ ನಾಳೆ ಬೆಳಿಗ್ಗೆಯೇ. ತಾನು ಮಲಗಿದ್ದು ಮಧ್ಯಾಹ್ನವಲ್ಲವೇ ಎಂಬ ಅರಿವು ನಿಧಾನವಾಗಿ ಮರುಕಳಿಸಿದ್ದು ಆಗಲೇ! ಇಷ್ಟು ಹೊತ್ತಲ್ಲಿ ನಮ್ಮವರು ಕ್ಲಬ್ನಲ್ಲಿ ಸ್ನೇಹಿತರ ಜೊತೆ ಹರಟೆ ಹೊಡೆಯುತ್ತಿರುತ್ತಾರೆ. ಇಲ್ಲಿ ಹುಡುಕಿದರೆ ಅವರೆಲ್ಲಿ ಸಿಗುತ್ತಾರೆ?

ಯಾಕೆ ಹೀಗಾಯ್ತು? ದಂಗು ಬಡಿದವರಂತೆ ಕೈಯಲ್ಲಿದ್ದ ಫೋನ್ ನೋಡುತ್ತಲೇ ನಿಂತಿದ್ದರು. ಸುಧಾರಿಸಿಕೊಂಡು ಅವರು ಪರದಾಡಿದ್ದನ್ನೆಲ್ಲಾ ಆಮೇಲೆ ಮಗಳಿಗೆ ಹೇಳಿದಾಗ ಅವಳು ಆ ಕಡೆಯಿಂದ ಒಂದೇ ಸಮ ನಗುತಿದ್ದಳು. ಅಂತೂ ಅವರ ದೇಹದ ಗಡಿಯಾರ ಅವರನ್ನು ಬೇಸ್ತು ಬೀಳಿಸಿತ್ತು . ಗೋಡೆಯ ಮೇಲೆ ಗಡಿಯಾರವಿಲ್ಲದ ಸಮಯದಲ್ಲಿ ದೇಹದ ಗಡಿಯಾರವೂ ಕೈ ಕೊಟ್ಟಿತ್ತು.

ಅಬ್ಬ ಜಾಗರಣೆಯ ಪ್ರಭಾವವೇ.... ಮನೆಯಲ್ಲಿ ಎಲ್ಲರ ಕೈಲೂ ಆಮೇಲೆ ಬೈಸಿಕೊಂಡು ಇನ್ನು ಮೇಲೆ ಜಾಗರಣೆಗೆ ಇತಿಶ್ರೀ ಹಾಕಲು ನಿರ್ಧರಿಸಿದರು. ಜೊತೆಗೆ ಮರುದಿನ ಮನೆಯಲ್ಲೊಂದು ಹೊಸ ಗಡಿಯಾರ ಗೋಡೆಯ ಮೇಲೆ ಬಂದು ಕುಳಿತು ಅವರನ್ನು ನೋಡಿ ನಗುತ್ತಿತ್ತು.

೧೬. ಶ್ರೀಧರ ಬಾಣಾವರ



ವ್ಯಕ್ತಿತ್ವ ಹಾಗೂ ಅದರ ಹಿರಿಮೆ ಕಾಪಾಡಿಕೊಳ್ಳುವ ಬಗೆ.

ನಾವು ಬೆಳೆದಂತೆಲ್ಲಾ ನಮ್ಮ ವ್ಯಕ್ತಿತ್ವವೂ ವಿಕಸನವಾಗುತ್ತಾ ಹೋಗುತ್ತದೆ. ಬಾಲ್ಯದಲ್ಲಿ ಇದು ಸುತ್ತಲಿನ ಪರಿಸರದ ಗಮನಕ್ಕೆ ಅಷ್ಟಾಗಿ ಬಾರದಿದ್ದರೂ, ಇಲ್ಲಿ ಅಂತರ್ಗತವಾಗುವ ಮೂಲದ್ರವ್ಯ ಮುಂದೆ ನಮ್ಮ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಸರಿಯಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಲೇ ಅದನ್ನು ಕಾಪಾಡಿಕೊಳ್ಳುವ ಕೆಲಸವೂ ಮುಖ್ಯವಾಗುತ್ತದೆ. ಬದುಕಿರುವಾಗಿನ ವ್ಯಕ್ತಿತ್ವದ ಹಿರಿಮೆ ನಾವು ಸತ್ತಮೇಲೂ ಬಹುಕಾಲ, ನಮ್ಮನ್ನು ಕಂಡವರ ಮನಸ್ಸಿನಲ್ಲಿ ಉಳಿಯಬೇಕಂತೆ. ವ್ಯಕ್ತಿತ್ವವನ್ನು ಬೆಳೆಸಿ ಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ನಮ್ಮ ಜೀವನದುದ್ದಕ್ಕೂ ಸಾಗುತ್ತದೆ.

ಇನ್ನು ಸು-ವ್ಯಕ್ತಿತ್ವದ ಕಟ್ಟಡ ಕಟ್ಟಲು ಬೇಕಾಗುವ ಮೂಲ ಸಲಕರಣೆಗಳಾವುವು? ಮೊದಲಿಗೆ ನಮ್ಮ ಅರಿವಿಗೆ ಬರಬೇಕಾದ ಅಂಶವೆಂದರೆ “ವ್ಯಕ್ತಿ ಮುಖ್ಯನಲ್ಲ, ವ್ಯಕ್ತಿತ್ವ ಮುಖ್ಯ“ ಎಂಬ ಮೂಲಮಂತ್ರ. ವ್ಯಕ್ತಿತ್ವದ ಬೆಳವಣಿಗೆಯು ಎರಡು ರೀತಿಯ ಉಪಯೋಗಗಳನ್ನು ಕುರಿತಾಗಿರಬೇಕು. ಮೊದಲನೆಯದಾಗಿ ಅದು ವ್ಯಕ್ತಿಯ ಸರಿಯಾದ ರೀತಿಯ ಬೆಳವಣಿಗೆಯನ್ನು ರೂಪಿಸುವಲ್ಲಿ ಸಹಕಾರಿಯಾಗಿರಬೇಕು. ಇದೇ ಸಮಯದಲ್ಲಿ ವ್ಯಕ್ತಿಯ ಬಗ್ಗೆ ಆತ ಬದುಕುವ ಪರಿಸರದ ದೃಷ್ಟಿಯಿಂದ ಯೋಗ್ಯನಾಗಿಯೂ, ಪ್ರೀತಿಸಬಲ್ಲವನಾಗಿಯೂ, ನಂಬಬಲ್ಲವನಾಗಿಯೂ ಬದುಕುವಂತಾಗಿರಬೇಕು. ಸು-ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗುವ ಹಲವು ಅಂಶಗಳನ್ನು ಗುರುತಿಸಿಕೊಳ್ಳುವುದು ಮುಖ್ಯ. ಆಶಾದಾಯಕ ಯೋಚನೆ ಪ್ರಮುಖ ಅಂಶವಾಗುತ್ತದೆ. ನಮ್ಮ , ನಾವು ಕೆಲಸಮಾಡುವ ಸಂಸ್ಥೆಯ, ಸಮಾಜದ ಬೆಳವಣಿಗೆಯ ಕುರಿತಾದ ಧನಾತ್ಮಕ ಕನಸುಗಳನ್ನು ನಾವು ಕಾಣಬೇಕು. ಈ ಕನಸುಗಳನ್ನು ನನಸಾಗಿಸುವ ಯೋಚನೆಗಳು ಆಶಾದಾಯಕವಾಗಿರಬೇಕು. ಒಮ್ಮೆ ನಮ್ಮಲ್ಲಿ ಮಾನಸಿಕ ಧನಾತ್ಮಕತೆ ಮೂಡಿತೆಂದರೆ ಅದರ ಮುಂದುವರಿಕೆ ತಾನಾಗಿಯೇ ಆಗುವಂತೆ ರೂಪಿಸಿಕೊಳ್ಳಬೇಕು. ನಕಾರಾತ್ಮಕ ಧೋರಣೆ ಯಾವುದೇ ಸಂದರ್ಭದಲ್ಲಿಯೂ ನಮ್ಮಲ್ಲಿ ಬೆಳೆಯದಂತೆ ಎಚ್ಚರವಹಿಸಬೇಕು.

ನಮ್ಮ ವೃತ್ತಿಯ ಹಾಗೂ ಜೀವನದ ಕುರಿತಾಗಿ ಯೋಚಿಸುವಲ್ಲಿ, ಆ ಯೋಚನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವಲ್ಲಿ,

ಮೊದಲಿಗೆ ಸ್ವ-ಶಕ್ತಿಯಲ್ಲಿ ಪೂರ್ಣ ವಿಶ್ವಾಸವಿರಬೇಕು. ನಮ್ಮ ಶಕ್ತಿ ಏನೆಂದು ಅರಿತುಕೊಳ್ಳುವ ಕೆಲಸ ಮೊದಲಿಗೆ ಆಗಬೇಕು. ನಮ್ಮ ದೌರ್ಬಲ್ಯಗಳ ಅರಿವು ಸಹಾ ನಮಗಿರಬೇಕು. ದೌರ್ಬಲ್ಯಗಳು ಅದೇ ಸ್ಥಿತಿಯಲ್ಲಿ ಸದಾ ಉಳಿಯಬೇಕಿಲ್ಲ. ವ್ಯವಸ್ಥಾಪನ ಶಾಸ್ತ್ರದ ಮೂಲ ಪಾಠದಂತೆ ನಮ್ಮ ದೌರ್ಬಲ್ಯಗಳನ್ನು ಶಕ್ತಿಯಾಗಿ ಪರಿವರ್ತಿಸಿಕೊಳ್ಳುವ ಕೌಶಲ್ಯ ಬೆಳೆಸಿಕೊಂಡು ಇದನ್ನು ನಿರಂತರವಾಗಿ ಪ್ರಯೋಗಿಸುತ್ತಾ ಇರಬೇಕು. ಇದೇ ತತ್ವದಂತೆ ಎದುರಾಗಬಹುದಾದ ಬೆದರಿಕೆಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳಲು ಸಹಾ ಕಾರ್ಯನಿರತರಾಗಿರಬೇಕು.

ಹೆಚ್ಚಿನ ಸಂದರ್ಭಗಳಲ್ಲಿ ನಾವು ಒಂಟಿಯಾಗಿ ಕ್ರಿಯಾಶೀಲರಾಗಿರಲು ಸಾಧ್ಯವಿಲ್ಲ. ವೃತ್ತಿಯಲ್ಲಂತೂ ನಾವು ಬೇರೆಯವರೊಡನೆ ಕೂಡಿ ಕೆಲಸ ಮಾಡಬೇಕಾಗುವುದು ಅನಿವಾರ್ಯ. ವೃತ್ತಿಯ ಹೊರಗೂ ಸಮಾಜದಲ್ಲಿ ಸಹಬಾಳ್ವೆ ನಡೆಸುವುದು ಅನಿವಾರ್ಯ. ಹಾಗಾಗಿ ವಿವಿಧ ಸಂದರ್ಭಗಳಲ್ಲಿ ಸಹಯೋಗದ, ಸಹಕಾರದ ಮನೋಭಾವ ನಮ್ಮ ವ್ಯಕ್ತಿತ್ವದ ಅನಿವಾರ್ಯ ಆಯ್ಕೆಯಾಗುತ್ತದೆ. ನಮ್ಮ ವೃತ್ತಿಯಲ್ಲಿ ಶ್ರೇಣಿಕೃತ ವ್ಯವಸ್ಥೆ ಸ್ವಾಭಾವಿಕ. ಈ ಶ್ರೇಣಿಯಲ್ಲಿ ನಾವು ಯಾವ ಸ್ಥರದಲ್ಲಿದ್ದೇವೆ ಎಂಬುದು ಸಹ ನಮ್ಮ ವ್ಯಕ್ತಿತ್ವವನ್ನು ಬೇರೆಯವರು ಅಳೆಯುವ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಹಲವೊಮ್ಮೆ ನಾವಿರುವ ಸ್ಥರಕ್ಕನುಗುಣವಾಗಿ ನಮ್ಮ ನಡವಳಿಕೆಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ನಮ್ಮ ವೃತ್ತಿ ವಾತಾವರಣದ ಭಾಗವಾಗಿರುವ ವ್ಯಕ್ತಿಗಳ ಹಾಗೂ ಸಾಧನಗಳ ಪೂರ್ಣ ಪರಿಚಯ ನಮಗಿರಬೇಕು. ಅವುಗಳ ಮೇಲೆ ಸಂಪೂರ್ಣ ಭರವಸೆಯಿಟ್ಟು, ಸಂಬಂಧಿಸಿದ ವ್ಯಕ್ತಿಗಳನ್ನು ಸೂಕ್ತ ಮಾರ್ಗದರ್ಶನದಿಂದ ಮುಂದುವರೆಯುವಂತೆ ಮಾಡಲು ಪ್ರಚೋದಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು. ನಮ್ಮೊಡನೆ ಸಹಚರ್ಯರಾಗಿರುವವರ ಸಾಮರ್ಥ್ಯದ ಪೂರ್ಣ ಅರಿವಿರಬೇಕು. ನಮ್ಮ ಮುಂದಿರುವ ಗುರಿಯ ಹಾಗೂ ಅದನ್ನು ಕ್ರಮಿಸುವ ಮಾರ್ಗದ ಸಂಪೂರ್ಣ ನೀಲ ನಕ್ಷೆಯನ್ನು ಯಾವುದೇ ಗೊಂದಲವಿಲ್ಲದಂತೆ ಮನನಮಾಡಿಕೊಳ್ಳಬೇಕು. ಕೈಗೆತ್ತಿಕೊಂಡಿರುವ ಕಾರ್ಯದಲ್ಲಿ ನಮ್ಮ ಪಾತ್ರ ನಾಯಕನದ್ದಾಗಿರಬಹುದು ಅಥವಾ ಸಹಾಯಕನದ್ದಾಗಿರಬಹುದು,

ನಮ್ಮ ಮುನ್ನಡೆಯುವಿಕೆಯಲ್ಲಿ ವ್ಯತ್ಯಾಸವಿರಬಾರದು. ತಂಡದ ಜೊತೆ ಒಂದಾಗಿ ಕೆಲಸಮಾಡುವ ಚಾಕಚಕ್ಯತೆಯನ್ನು ರೂಢಿಸಿಕೊಳ್ಳಬೇಕು. ನಮ್ಮ ಪಾಲಿನ ಕೆಲಸವನ್ನು ಎಂದಿಗೂ ಮುಂದೂಡಬಾರದು. ಅದರಿಂದ ಒಟ್ಟು ಕಾರ್ಯದ ಪ್ರಗತಿಗೆ ಕುಂಟಿತವಾದಲ್ಲಿ ಅದು ಆ ವೃತ್ತಿ ಪರಿಸರದ ದೃಷ್ಟಿಯಲ್ಲಿ ನಮ್ಮ ವ್ಯಕ್ತಿತ್ವವನ್ನು ಕುಂದಿಸಬಹುದು. ಶ್ರೇಣೀಕೃತ ವ್ಯವಸ್ಥೆಯ ನಿಯಮ, ನಿಬಂಧನೆಗಳ ಸಂಪೂರ್ಣ ಅರಿವು ನಮಗಿರಬೇಕು. ಅವುಗಳನ್ನು ಚಾಚೂತಪ್ಪದೆ ಪಾಲಿಸುವ

ಬದ್ಧತೆ ಇರಲೇಬೇಕು. ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವಿದ್ದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಯಾವುದೇ ಉದಾಸೀನತೆಗೆ ಅವಕಾಶಕೊಡಬಾರದು. ಕಾರ್ಯದ ಬಗ್ಗೆ ಅನುಮಾನರಹಿತ ಪೂರ್ಣ ಜ್ಞಾನವಿದ್ದಲ್ಲಿ ಹಾಗೂ ತೆಗೆದುಕೊಳ್ಳುವ ನಿರ್ಧಾರದ ಪರಿಣಾಮಗಳ ಪೂರ್ಣ ಅರಿವಿದ್ದಲ್ಲಿ, ನಿರ್ಧಾರ ತೆಗೆದುಕೊಳ್ಳದಿರಲು ಯಾವುದೇ ವಿಳಂಬವಾಗುವ ಸಾಧ್ಯತೆಗಳಿರುವುದಿಲ್ಲ. ನಿರ್ಧಾರಗಳು ಸ್ಪಷ್ಟವಾಗಿರುವುದು ಅತ್ಯಾವಶ್ಯಕ. ಕಾರಣಗಳೊಂದಿಗೆ ನಿರ್ದಾರಗಳನ್ನು ಸೂಕ್ತವಾಗಿ ದಾಖಲಿಸಬೇಕು. ಸಂದರ್ಭದ ಹಿನ್ನಲೆ , ನಿರ್ಧಾರ ಕೈಗೊಳ್ಳಲು ಪರಿಗಣಿಸಲಾದ ವಿವರಗಳು, ನಿರ್ಧಾರದ ಪರಿಣಾಮಗಳು, ಮುಂತಾದ ವಿಸ್ತೃತವಾದ ವರದಿಯನ್ನು ಮೇಲಿನವರಿಗೂ ಅದೇ ರೀತಿಯ ಕಾರ್ಯಾದೇಶವನ್ನು ಸಂಬಂದಿಸಿದವರಿಗೂ ಕಳಿಸಿಕೊಡುವುದು ಸರಿಯಾದ ಕ್ರಮ. ನಾವು ಕಾರ್ಯಾಚರಣೆಯ ಆದೇಶ ಪಡೆದ ಸಂದರ್ಭದಲ್ಲಿ ಅದರ ಬಗ್ಗೆ ಪೂರ್ಣವಾಗಿ ತಿಳಿದುಕೊಳ್ಳುವ ಹಾಗೂ ಅನುಮಾನಗಳಿದ್ದರೆ ಪರಿಹರಿಸಿಕೊಂಡು ಮುಂದುವರೆಯುವ ಕ್ರಮ ಅನುಸರಿಸಬೇಕು.

ನಮ್ಮಲ್ಲಿ ಮಾತನಾಡುವ ಗುಣಕ್ಕಿಂತ ಕೇಳಿಸಿಕೊಳ್ಳುವ ಗುಣ ಹೆಚ್ಚಾಗಿ ಬೆಳೆಯಬೇಕು. ನಮ್ಮ ಶಾಲಾ ಕಾಲೇಜು ದಿನಗಳಲ್ಲಿ, ತರಬೇತಿಗಳಲ್ಲಿ ನಾವು ಕೇಳಿಸಿಕೊಂಡು ನಮಗೆ ಮನನವಾದದ್ದೇ ನಮಗೆ ಉಪಯೋಗವಾಗಿದೆ ಎಂಬ ಅರಿವು ನಮಗಾಗಿದೆ. ಕೇಳಿಸಿಕೊಳ್ಳದೇ ಹೋದದ್ದು ಏನು, ಎಷ್ಟು ಎಂಬ ಅರಿವೇ ನಮಗಿರುವುದಿಲ್ಲವಾಗಿ ಅದರಿಂದ ನಾವು ಕಳೆದುಕೊಂಡದ್ದೆಷ್ಟು ಎಂದು ಅಂದಾಜಿಸಲೇ ಸಾಧ್ಯವಿಲ್ಲ. ಇದೇ ಮಾತು ನಮ್ಮ ತಂದೆ ತಾಯಿ, ಗುರು ಹಿರಿಯರು ಆಡಿದ ಮಾತುಗಳಿಗೂ ಅನ್ವಯಿಸಿ ನಮ್ಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಎಷ್ಟರಮಟ್ಟಿಗೆ ಸಹಕಾರಿ ಯಾಗಿದೆ ಎಂಬ ಅರಿವು ನಮಗಿದ್ದರೆ ಒಳ್ಳೆಯದು. ಎದುರಿನವರು ಮಾತನಾಡುವಾಗ ನಮ್ಮ ಗಮನ ಅವರ ಮಾತಿನ ಕಡೆಗಿರಬೇಕು. ಅವರ ಮಾತು ಮುಗಿಯುವವರೆಗೆ ಮೌನವಾಗಿದ್ದು ನಂತರ ನಮಗೇನಾದರೂ ಹೇಳುವುದಿದ್ದರೆ ನಾವು ಮಾತನಾಡಬೇಕು.

ನಮ್ಮ ಮಾತನ್ನು ಬೇರೆಯವರು ಕೇಳಿಸಿಕೊಳ್ಳುವ ಬಗ್ಗೆಯೂ ಸೂಕ್ತ ಎಚ್ಚರಿಕೆ ಅತ್ಯಗತ್ಯ. ಎದುರಿಗಿರುವವರು ನಮ್ಮಮಾತನ್ನು ಕೇಳಿಸಿಕೊಳ್ಳುವ ಮನೋಭಾವ ಉಳ್ಳವರಾಗಿರುವುದನ್ನು ಗಮನಿಸಿ ಸೂಕ್ತವಾಗಿದ್ದಲ್ಲಿ ಮಾತ್ರಾ ನಾವು ಮಾತನಾಡುವುದು ಅಪೇಕ್ಷಣೀಯ. ಇನ್ನು ಸೂಕ್ತವಾದ ಸಂವಹನಾ ಕೌಶಲ್ಯ ಬೆಳೆಸಿಕೊಂಡಿರುವುದು ಅಷ್ಟೇ ಮುಖ್ಯವಾಗುತ್ತದೆ. ಹೇಳಬೇಕಾಗಿರುವುದನ್ನು ಕ್ಲುಪ್ತವಾಗಿ ಸರಳ ಭಾಷೆಯಲ್ಲಿ ಹೇಳಬೇಕು. ನಮ್ಮ ಭಾಷಾಪ್ರೌಢಿಮೆಯನ್ನು ಪ್ರದರ್ಶಿಸುವ ಅಗತ್ಯ ಹೆಚ್ಚಿನ ಸಂದರ್ಭಗಳಲ್ಲಿ ಅಗತ್ಯವಿರುವುದಿಲ್ಲ. ನಾವು ಹೇಳಬಯಸುವ ವಿಷಯ ಸ್ಪಷ್ಟವಾಗಿ ಸಂಹವನಗೊಳ್ಳಬೇಕು. ಕೇಳುವವರ ಗ್ರಹಣ ಸಾಮರ್ಥ್ಯವನ್ನರಿತು ವಿಷಯ ಮಂಡನೆ ಮಾಡಬೇಕು. ನಮ್ಮ

ಅಭಿಪ್ರಾಯಗಳನ್ನು ಅವರು ಒಪ್ಪಿಕೊಳ್ಳದಿದ್ದರೂ ಅದನ್ನು ಗೌರವಿಸಬೇಕು. ಸಂವಹನದ ವಿಷಯಕ್ಕೆ ನಾನು ಹೆಚ್ಚು ಒತ್ತುಕೊಟ್ಟು ಹೇಳಲು ಕಾರಣವೆಂದರೆ ಹೆಚ್ಚಿನ ಸಂದರ್ಭಗಳಲ್ಲಿ ಇದೇ ನಮ್ಮ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಮುಖ್ಯ ಅಂಶವಾಗುತ್ತದೆ.

ಇನ್ನು ಕುಟುಂಬದ ಸದಸ್ಯರೊಡನೆ, ಸಹೋದ್ಯೋಗಿಗಳೊಡನೆ, ನಮ್ಮ ಸುತ್ತಮುತ್ತಲಿನವರೊಡನೆ ನಮ್ಮ ನಡವಳಿಕೆ ಸಹಾ ಸಹ್ಯವಾಗಿರಬೇಕು. ಕ್ಷಮೆ, ನಮ್ರತೆ, ಸಹನೆ ನಮ್ಮ ನಡತೆಯ ಭಾಗವಾಗಿರಬೇಕು. ಇದೆಲ್ಲವನ್ನೂ ಅಳವಡಿಸಿಕೊಂಡು ಸ್ನೇಹಭಾವದಿಂದ ಎಲ್ಲಾ ಸಂದರ್ಭಗಳಲ್ಲೂ ವರ್ತಿಸುವವರು ನಾವಾದರೆ ನಮಗರಿಲ್ಲದೆಯೇ ಇವರೆಲ್ಲರ ದೃಷ್ಟಿಯಲ್ಲಿ ನಮ್ಮ ವ್ಯಕ್ತಿತ್ವದ ಹಿರಿಮೆ ಶಿಖರಪ್ರಾಯವಾಗಿರುತ್ತದೆ. ನಮ್ಮ ಮಾತಿನ ಶೈಲಿ, ದೈಹಿಕ ಭಾಷೆ, ಪರಸ್ಪರರನ್ನು ಗೌರವಿಸುವ ರೀತಿ ಇವೆಲ್ಲವೂ ನಮ್ಮ ವ್ಯಕ್ತಿತ್ವವನ್ನು ಬೇರೆಯವರ ದೃಷ್ಟಿಯಲ್ಲಿ ನಿರ್ಧಾರಿತವಾಗಲು ನೆರವಾಗುತ್ತವೆ ಎಂಬುದನ್ನು ಮರೆಯಬಾರದು.

ನಾವು ನಮ್ಮ ಜೀವನದ ಮುಖ್ಯಭಾಗವನ್ನು ನಮ್ಮ ವೃತ್ತಿಯ ಪರಿಸರದಲ್ಲಿ ಕಳೆಯುತ್ತೇವೆ. ಅಲ್ಲಿ ನಾವು ಹೆಚ್ಚು ಹೆಚ್ಚು ಜನರೊಂದಿಗೆ ಬೆರೆಯುತ್ತೇವೆ. ಇವರಲ್ಲಿ ಪರಿಚಿತರಿರಬಹುದು, ಅಪರಿಚಿತರಿರಬಹುದು. ಕಳೆಯುವ ವೇಳೆ ದೀರ್ಘವಾಗಿರಬಹುದು, ಅಲ್ಪ ಕಾಲದ್ದಾಗಿರಬಹುದು. ಈ ಎಲ್ಲ ಸಂದರ್ಭಗಳಲ್ಲೂ ನಮ್ಮ ವ್ಯಕ್ತಿತ್ವದ ಮೌಲ್ಯಮಾಪನ ನಡೆಯುತ್ತಲೇ ಇರುವ ಸಾಧ್ಯತೆಗಳಿವೆ. ಅಪರಿಚಿತರೊಡನೆ ಅಲ್ಪಕಾಲದ ಸಂವಹನೆಯಲ್ಲಿಯೇ ನಮ್ಮ ವ್ಯಕ್ತಿತ್ವದ ಮೌಲ್ಯ ಹೆಚ್ಚುಕಡಿಮೆಯಾಗಬಹುದು ಹಾಗೂ ಅದರ ಪರಿಣಾಮದ ವ್ಯಾಪ್ತಿ ದೊಡ್ಡದಾಗಬಹುದು. ಹೀಗಾಗಿ ಎಲ್ಲ ಸಂದರ್ಭಗಳಲ್ಲಿ ನಮ್ಮತನವನ್ನು ಎಚ್ಚರಿಕೆಯಂದ ಕಾಪಾಡಿಕೊಳ್ಳಬೇಕಾಗುತ್ತದೆ.

ನಾವು ಯಾವುದೇ ಕೆಲಸವನ್ನು ಮಾಡಲಿ ಅಥವಾ ಯಾವುದೇ ವೃತ್ತಿಯವರಾಗಿರಲಿ, ನಾವು ಮಾಡುವ ಕೆಲಸವನ್ನು ಪ್ರೀತಿಸಬೇಕು. ನಮ್ಮ ಇಚ್ಛೆಗೆ ಅನುಗುಣವಾಗದ ವೃತ್ತಿಯನ್ನು ನಿರ್ವಹಿಸಬೇಕಾಗುವ ಅನಿವಾರ್ಯತೆಯ ಸಂದರ್ಭದಲ್ಲಿ ಕೂಡಾ ಆ ವೃತ್ತಿಯನ್ನು ದೂಷಿಸದೇ, ಕೀಳಾಗಿ ಕಾಣದೇ ಇರುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ನಮ್ಮಲ್ಲಿ ಸಹ ಆ ಕಾರಣಕ್ಕಾಗಿ ಯಾವುದೇ ಕೀಳರಿಮೆಯನ್ನು ಬೆಳೆಸಿಕೊಳ್ಳಬಾರದು. ಅನಿವಾರ್ಯತೆಯನ್ನು ಸಹನೀಯವಾಗಿಸಿಕೊಳ್ಳಬೇಕು. ಆಗ ಆ ವೃತ್ತಿಯನ್ನು ಸಹಾ ಪ್ರೀತಿಸಲು ಸಾಧ್ಯವಾಗಬಹುದು.

ಇನ್ನು ವ್ಯಕ್ತಿತ್ವದ ಹಿರಿಮೆಯನ್ನು ಕಾಯ್ದುಕೊಳ್ಳುವ ಬಗ್ಗೆ ಗಮನ ಹರಿಸೋಣ. ವೃತ್ತಿ ಪ್ರಪಂಚದ ಹೊರಗೆ ಯಾವುದೋ ಕ್ಷುಲ್ಲಕ ಕಾರಣಕ್ಕೆ ನಾಲ್ಕು ಮಂದಿಯ ಎದುರು ವ್ಯಕ್ತಿಯೊಬ್ಬ ನಮ್ಮನ್ನು ಹೀಯಾಳಿಸುತ್ತಾನೆ. ಎದುರಿಗಿರುವ ಮಂದಿ ನಮ್ಮನ್ನು ಒಂದು ರೀತಿಯಾಗಿ ನೋಡಿ ಪ್ರತಿಕ್ರಯಿಸುತ್ತಾರೆ. ಪರಿಚಯದವರಾಗಿದ್ದರೆ ಹಲವರು ಘಟನೆಯ ನಂತರವೂ ಸಂದರ್ಭವನ್ನು ಬೇರೆಯವರೊಡನೆ ಹಂಚಿಕೊಂಡು ನಮ್ಮ ಬಗ್ಗೆ ಲಘುವಾಗಿ ಮಾತನಾಡುವ ಸಂದರ್ಭ ಉಂಟಾಗಿರಬಹುದು. ಇದು ನಮ್ಮ ಗಮನಕ್ಕೂ ಬರಬಹುದು. ಇನ್ನು ವೃತ್ತಿಯ ಸಂದರ್ಭದಲ್ಲಂತೂ ನಮ್ಮ ಕೆಲಸದ ಮೌಲ್ಯಮಾಪನದ ಸಂದರ್ಭದಲ್ಲೂ ಹೆಚ್ಚಾಗಿ ಮೇಲಿನವರು ನಮ್ಮ ವ್ಯಕ್ತಿತ್ವಕ್ಕೆ ಪೆಟ್ಟಾಗುವ ರೀತಿ ಮಾತನಾಡಬಹುದು. ಇಂತಹ ಸಂದರ್ಭಗಳನ್ನು ಹೇಗೆ ಎದುರಿಸಬೇಕು? ಮೊದಲ ಸಂದರ್ಭಕ್ಕೆ ಹೇಳುವುದಾದರೆ ಇದು ನಮ್ಮ ವ್ಯಕ್ತಿತ್ವಕ್ಕೆ ಆಗುವ ಪೆಟ್ಟಿನ ಮೇಲೆ ನಿರ್ಧಾರವಾಗುತ್ತದೆ. ನಮಗೆ ಕುಂದು ತರುವ ವ್ಯಕ್ತಿಯ ವ್ಯಕ್ತಿತ್ವಕ್ಕನುಗುಣವಾಗಿ ನಾವು ಸಂದರ್ಭವನ್ನು ನಿರ್ವಹಿಸಬೇಕಾಗುತ್ತದೆ.


ಹೆಚ್ಚಿನ ಸಂದರ್ಭಗಳಲ್ಲಿ ಉದಾಸೀನವೇ ಮದ್ದಾಗಬೇಕಾಗುತ್ತದೆ. ಇನ್ನು ವೃತ್ತಿ ಸಂಬಂಧಿತ ಘಟನೆಗಳಲ್ಲಿ ಸೂಕ್ತ ಮನಸ್ಥಿತಿಯ ಪರಿಹಾರ ಆಯ್ದುಕೊಳ್ಳ ಬೇಕಾಗುತ್ತದೆ. ಮೇಲೆ ವಿವರಿಸಿದ ಕ್ರಮಗಳಲ್ಲಿ ನಮ್ಮ ವ್ಯಕ್ತಿತ್ವವನ್ನು ನಾವು ರೂಪಿಸಿಕೊಂಡು ಬಂದಿದ್ದಲ್ಲಿ ನಾವು ಹೆಚ್ಚಿಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಆ ಮೇಲಿನವ ನಮಗೆ ನೋವಾಗುವ ಹಾಗೆ ನಡೆದುಕೊಂಡಿದ್ದರೆ ಅದನ್ನು ಉಪೇಕ್ಷಿಸಬೇಕು. ನಾವು ನಮ್ಮ ನಿಷ್ಠೆಗನುಗುಣವಾಗಿ ಕೆಲಸ ಮಾಡಿದ್ದರೂ ನಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ಯಾವುದೇ ಲೋಪವಾಗಿಲ್ಲದ ಸಂದರ್ಭದಲ್ಲಿ ಆಗಿರುವ ಪರಿಣಾಮಗಳಿಗಳಿಗೆ ನಾವು ಖಂಡಿತಾ ಬಾಧ್ಯರಾಗಿರುವುದಿಲ್ಲ. ಈ ಬಗ್ಗೆ ನಮಗೆ ಖಚಿತ ನಿಲುವಿದ್ದಲ್ಲಿ ಅಲ್ಲಿಂದ ಹೊರಬಂದು ನಮ್ಮ ಅಂಗಿಯನ್ನೋ ಕೋಟನ್ನೋ ಒಮ್ಮೆ ಕೊಡವಿಕೊಂಡರಾಯಿತು. ಏಕೆಂದರೆ ಆ ಸಂದರ್ಭದಲ್ಲಿ ನಮ್ಮ ವ್ಯಕ್ತಿತ್ವಕ್ಕೆ ಯಾವ ಕುಂದೂ ಆಗಿರುವುದಿಲ್ಲ. ಅಲ್ಲಿ ನಮ್ಮದೇನಾದರೂ ಸಣ್ಣ ಕೊರತೆಯ ಅರಿವಾದರೂ ಅದನ್ನು ಸರಿಪಡಿಸಿಕೊಳ್ಳುವ ಕ್ರಮವನ್ನು ಕೂಡಲೇ ಕೈಗೊಳ್ಳಬೇಕು. ಇದು ವ್ಯಕ್ತಿತ್ವದ ಹಿರಿಮೆ ಕಾಪಾಡಿಕೊಳ್ಳುವ ವಿಷಯಕ್ಕಾಯಿತು. ಇನ್ನು ಅದೇ ವ್ಯಕ್ತಿ ತೊಂದರೆ ಮಾಡುವ ನೆಪದಿಂದ ಏನಾದರೂ ಕ್ರಮ ಕೈಗೊಂಡರೆ , ಅದರಿಂದ ನಮಗೆ ತೊಂದರೆ ಅಗುವಂತಿದ್ದರೂ ಸಹಿಸಿಕೊಳ್ಳುವ ಮನಸ್ಥಿತಿ ಬೆಳಸಿಕೊಂಡರೆ ಅದೂ ಕೂಡ ನಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತದೆ.

ಇನ್ನು ಕೌಟುಂಬಿಕವಾಗಿ ಒದಗಬಹುದಾದ ಅನಿವಾರ್ಯತೆಗಳನ್ನು ಹೆಚ್ಚು ಪ್ರಚಾರಕ್ಕೆಡೆಕೊಡದೆ ನಿವಾರಿಸಿಕೊಳ್ಳುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ವೃತ್ತಿ ಸಂಬಂಧಿತ ಉಪೇಕ್ಷೆ , ಸಿಗಬೇಕಾದ ಅವಕಾಶಗಳ ನಿರಾಕರಣೆಗಳನ್ನು ಸೂಕ್ತವಾಗಿ ನಿರ್ವಹಿಸುವ ಕೌಶಲ್ಯ ಬೆಳೆಸಿಕೊಳ್ಳುವುದು ವ್ಯಕ್ತಿತ್ವ

ಬೆಳವಣಿಗೆಯಲ್ಲಿನ ಪ್ರಮುಖ ಅಂಶವಾಗಬೇಕು. ವೃತ್ತಿಯ ಅನಿವಾರ್ಯತೆಗಳಾದ ವರ್ಗಾವಣೆ ಮುಂತಾದ ಸಂದರ್ಭಗಳಲ್ಲಿ ಆಗುವ ಅನಾನುಕೂಲತೆಗಳನ್ನು ತುಲನೆಮಾಡಿ ರದ್ದತಿಯ ಮೊದಲ ಅನಿಶ್ಚಿತ ಆಯ್ಕೆಗೇ ಜೋತುಬಿದ್ದು ನಿಮ್ಮ ಹಾಗೂ ಕುಟುಂಬದ ಮಾನಸಿಕ ಕ್ಲೇಷಕ್ಕೆ ಕಾರಣರಾಗದೇ ಸೂಕ್ತ ಪರ್ಯಾಯವಾಗಿರುವ ಎರಡನೇ ಆಯ್ಕೆಯನ್ನು ಮಾಡಿಕೊಂಡು ಮುಂದುವರಿಯುವುದು ನಿಮ್ಮ ವ್ಯಕ್ತಿತ್ವದ ಭಾಗವಾಗಿರಲಿ. ಹೆಚ್ಚಿನ ಸಂದರ್ಭಗಳಲ್ಲಿ ಎರಡನೇ ಆಯ್ಕೆಯೇ ಉತ್ತಮ ಆಯ್ಕೆಯಾಗಿ ಪರಿಣಮಿಸಬಹುದು.

ದೊಡ್ಡ ದೊಡ್ಡ ಕಾರ್ಪೋರೇಟ್ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ತಮ್ಮ ನಷ್ಟ ಸಂಭಾವ್ಯತಾ ನಿರ್ವಹಣಾ (ರಿಸ್ಕ್ ಮ್ಯಾನೇಜ್ಮೆಂಟ್) ವಿಭಾಗದಡಿಯಲ್ಲಿ ತಮ್ಮ ಬ್ರಾಂಡ್‌ನ ಹೆಸರಿಗೆ ಅಪಖ್ಯಾತಿ (ರೆಪ್ಯುಟೇಷನ್ ರಿಸ್ಕ್) ತಗಲುವ ಸಂದರ್ಭ ಬಾರದಂತೆ ನಿರ್ವಹಿಸಲು ನಿರಂತರ ಕಾರ್ಯನಿರತವಾಗಿರುತ್ತವೆ. ಇದಕ್ಕಾಗಿ ಸಾಕಷ್ಟು ಹಣವ್ಯಯಿಸುತ್ತವೆ ಕೂಡಾ. ಆದರೆ ನಮ್ಮ ವೈಯುಕ್ತಿಕ ವ್ಯಕ್ತಿತ್ವದ ಹಿರಿಮೆಯನ್ನು ಎತ್ತಿ ಹಿಡಿಯಲು ನಾವೇ ನಿರಂತರ ಕಾರ್ಯಪ್ರವೃತ್ತರಾಗದೇ ಬೇರೆ ದಾರಿಯಿಲ್ಲ.

೧೭. ಭ ರಾ ವಿಜಯಕುಮಾರ್



ನವಪಲ್ಲವಿ

ಹೊಸ ಹಾದಿಯ ಮಾಡೋಣ
ನಡೆಗೆ....ಮುನ್ನಡೆಗೆ...
ನವ ಪಲ್ಲವಿ ಹಾಡೋಣ
ಶ್ರುತಿಗೆ....ಹೊಸ ಲಯಕೆ....
ನವ ಭಾರತದ ನಿರ್ಮಾಣದಲಿ
ಇಡು ಹೆಜ್ಜೆಯ ಒಂದೇ ಗುರಿಗೆ ।ಹೊ।

ಪರಂಪರೆಯಿರಲಿ ಬೆನ್ನೆಡೆಗೆ
ತರ್ಕಕೆ ಸಿಕ್ಕುವ ಸಂಯಮಕೆ
ಇತಿಹಾಸವು ಕಲಿಸಿದ ಕಲಿಕೆ
ನೆನಪಿರಲಿ ನಮ್ಮೆದೆಯೊಳಗೆ
ನಾಡಿನೇಳ್ಗೆಗೆ...ನಮ್ಮ ನಾಳೆಗೆ..
ಮುನ್ನಡೆಯುವ ಬೆಳಕಿನ ಕಡೆಗೆ ।ಹೊಸ।

ಬದಲಾಗುತಿದೆ ದಿನದಿನಕೆ
ಹನುಮದ್ವಿಕಾಸ ಕ್ಷಣಕ್ಷಣಕೆ
ವಿಜ್ಞಾನದ ಈ ಬೆಳವಣಿಗೆ
ಬಳಕೆಯಲಿರಲಿ ತಿಳುವಳಿಕೆ
ನಮ್ಮದಾಗಿರುವ ಇಂದಿನ ದಿನವನು
ಕಾದಿಡೆ ಮುಂದಿನ ಪೀಳಿಗೆಗೆ...
ತುಸು ತ್ಯಾಗವ ಮಾಡೋಣ...
ಸುಖಕೆ...ಸಾಂತ್ವನಕೆ...
ನಾವ್ ಒಟ್ಟಿಗೆ ಬೆಳೆಯೋಣ...
ಬಲಕೆ......ಬೆಂಬಲಕೆ.... ।ನವ।

೧೮. ಜಿ. ವಿ. ಅರುಣ



ಬನ್ನಿ ಪಣ ತೊಡೋಣ

ಮುಂದಿನ ನೋಡಿಯೊ ಕಾರ್ಯಕ್ರಮದ ವೇಳೆಗೆ ಈ ಬಾರಿಯ ಕರ್ನಾಟಕದ ವಿಧಾನಸಭೆಯ ಚುನಾವಣೆಯು ಸಂಪನ್ನವಾಗಿರುತ್ತದೆ. ನಾವು ಮತ ಚಲಾವಣೆ ಮಾಡಲು ಪ್ರಾರಂಭಿಸಿದ ಮೊಟ್ಟಮೊದಲ ಚುನಾವಣೆಯಲ್ಲಿ, 'ನಾವು ಏಕೆ ಮತ ಚಲಾವಣೆ ಮಾಡಬೇಕು?, ನಮಗೆ ಏನು ಬೇಕು?' ಎಂಬುದರ ಅರಿವು ಅಷ್ಟಾಗಿ ಇರಲಿಲ್ಲ. ಮತದಾನದ ಹಕ್ಕು ಬಂದಿದೆ ಎಂಬ ಹಮ್ಮು ಬಂದುಬಿಟ್ಟಿತ್ತು. ಮತದಾನದ ಬಾಧ್ಯತೆ ಅರ್ಥವಾಗಿರಲಿಲ್ಲ. ಗುಪ್ತ ಮತದಾನವಾದ್ದರಿಂದ, ಯಾರಿಗೂ ಗೊತ್ತಾಗದಂತೆ ಏನೋ ಮಾಡಿಬಂದ ಹದಿಹರೆಯದ ಗುಟ್ಟಿನ ಗುಂಗಿನಲ್ಲಿ ಸುಖಪಟ್ಟುಬಿಟ್ಟಿದ್ದೆವು. ಚುನಾವಣೆಗೆ ನಿಂತಿದ್ದ ವ್ಯಕ್ತಿ ನಮಗೆ ಏನೋ ಒಳ್ಳೆಯದನ್ನು ಮಾಡುತ್ತಾರೆ ಎಂದುಕೊಂಡು ಮತವನ್ನು ಚಲಾಯಿಸಿ ಬಿಟ್ಟಿದ್ದೆವು.



ಹಿಂದೆ ಒಮ್ಮೆ ನನ್ನ ಚಿಕ್ಕಮ್ಮನವರು ಒಂದು ಬಾರಿ ಯಾವುದೋ ಅಭ್ಯರ್ಥಿಯು 'ಅಮ್ಮ ನಿಮ್ಮನ್ನು ನೋಡಿದರೆ ನನ್ನ ತಾಯಿಯನ್ನು ನೋಡಿದಂತೆ ಆಗುತ್ತದೆ. ದಯವಿಟ್ಟು ನಿಮ್ಮ ಮತ ನನಗೆ ಕೊಟ್ಟು ಆಶೀರ್ವದಿಸಿ' ಎಂದು ಕೈಮುಗಿದು ಕೇಳಿಕೊಂಡ. ಅವನು ಮಾತನ್ನು ಕೇಳಿ ಅವರು ಸಂತೋಷದಿಂದ ಅವನಿಗೆ ಮತ ನೀಡಿದ್ದರು.

ಮೊದಮೊದಲು ನಮಗೆ ಸ್ವಂತಕ್ಕೆ ಏನೋ ಸಹಾಯವಾಗುತ್ತದೆ ಎಂದುಕೊಂಡು ಮತ ಚಲಾವಣೆ ಮಾಡುತ್ತಿದ್ದೆವು. ನಮ್ಮ ಈ ದೃಷ್ಟಿ, ಯೋಚನೆಗಳು ಚುನಾವಣೆಯಿಂದ ಚುನಾವಣೆಗೆ ಬದಲಾವಣೆಯಾಗುತ್ತಾ ಹೋಗಿವೆ. ಆ ದೃಷ್ಟಿಕೋನವು ಈಗ ಪರಿಣಾಮಕಾರಿಯಾಗಿ ಬದಲಾಗಿದೆ. ನಮ್ಮ ಅರಿವು ಬೆಳೆದಂತೆಲ್ಲ ಯಾರಿಗೆ ಮತ ನೀಡಬೇಕು ಎಂಬ ಸ್ಪಷ್ಟ ಕಲ್ಪನೆ ನಮಗೆ ಉಂಟಾಗಿದೆ. 'ನಮಗೆ ಯಾವ ರೀತಿ ಸಹಾಯವಾಗುತ್ತದೆ?' ಎನ್ನುವ ಅತಿ ಸಾಮಾನ್ಯ ಸ್ವಹಿತದ ಚಿಂತನೆಯು, ಕಾಲಕ್ರಮೇಣ 'ರಾಜ್ಯಕ್ಕೆ ಏನು ಸಹಾಯವಾಗುತ್ತದೆ, ರಾಷ್ಟ್ರಕ್ಕೆ ಹೇಗೆ ಸಹಾಯವಾಗುತ್ತದೆ, ಸಮಾಜಕ್ಕೆ ಹೇಗೆ

ಒಳಿತಾಗುತ್ತದೆ?' ಎನ್ನುವ ಸರ್ವಜನಹಿತದ ಕಲ್ಪನೆಗಳಾಗಿ ಬೆಳೆದು ಬಿಟ್ಟಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಯಿಂದ ನಮ್ಮದು ಅತ್ಯಂತ ದೊಡ್ಡ ಮುಕ್ತ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಎದೆತಟ್ಟಿ ಹೇಳಿಕೊಳ್ಳುವ ಖುಷಿ ನಮ್ಮದಾಗಿದೆ.

ಒಂದು ಮನೆಯ ಒಳತಿಗಾಗಿ ಮನೆಯ ಒಬ್ಬನನ್ನು ತ್ಯಾಗ ಮಾಡು, ಒಂದು ಬೀದಿಯ ಸುಖಕ್ಕೆ ಒಂದು ಕುಟುಂಬವನ್ನು ಬಿಟ್ಟುಬಿಡು, ಒಂದು ಊರಿಗೆ ಒಳ್ಳೆಯದಾಗುವಂತಿದ್ದರೆ ಒಂದು ಬೀದಿಯನ್ನು ತ್ಯಾಗ ಮಾಡು, ಇಡೀ ರಾಜ್ಯದ ಒಳತಿಗಾಗಿ ಒಂದು ಊರನ್ನೇ ತ್ಯಾಗ ಮಾಡು ಎಂದು ತಿಳಿಸುವ ಸಂಸ್ಕೃತದ ಒಂದು ಸುಭಾಷಿತವನ್ನು ನಾವು ಕೇಳಿದ್ದೇವೆ. ಇದನ್ನು ನಾವು ಇಂದೂ ಅನುಸರಿಸುತ್ತೇವೆ. ಲಕ್ಷಾಂತರ ಜನರ ಪ್ರಯಾಣಕ್ಕೆ ಮೆಟ್ರೋ ಉಪಯೋಗವಾಗುವುದರಿಂದ ಅದರ ಮಾರ್ಗಕ್ಕೆ ಕೆಲವರ ಮನೆಗಳನ್ನು ಕೆಡವಬೇಕಾಗುತ್ತದೆ. ದೊಡ್ಡ ಅಣೆಕಟ್ಟು ಕಟ್ಟಿ ಲಕ್ಷಾಂತರ ಹೆಕ್ಟೇರ್ ಭೂಮಿಗೆ ನೀರನ್ನು ಹರಿಸಲು ಹಲವು ಹಳ್ಳಿ, ಊರುಗಳು ಮುಳುಗಡೆಯಾಗಬೇಕಾಗುತ್ತದೆ. ಇಂಥ ಜನಹಿತ ನಿಯಮವು ಆ ಸುಭಾಷಿತದಲ್ಲಿ ವ್ಯಕ್ತವಾಗಿದೆ. ಅದು ಪ್ರಸಿದ್ಧವಾಗಿರುವುದಕ್ಕೆ ಅದರ ಹಿಂದಿರುವ ಋಷಿ ಸದೃಶ ವ್ಯಕ್ತಿಗಳ ಅದ್ಭುತ ಲೋಕಹಿತ ಚಿಂತನೆಯೇ ಕಾರಣ.

ಚುನಾವಣೆಯಲ್ಲಿ ಮತ ಚಲಾವಣೆಗೆ ಈ ಸುಭಾಷಿತವನ್ನು ಹಿಂದುಮುಂದಾಗಿ ಹೊಂದಿಸಿಕೊಳ್ಳಬೇಕು. ಭಾರತವು ಪ್ರಬಲವಾದ ರಾಷ್ಟ್ರವಾಗಬೇಕಾದರೆ ಅದರಲ್ಲಿರುವ ರಾಜ್ಯಗಳು ಸದೃಢವಾಗಲೇಬೇಕು. ರಾಜ್ಯಗಳು ಸದೃಢವಾಗಬೇಕಾದರೆ ಅದರ ಚುನಾಯಿತ ಪ್ರತಿನಿಧಿಗಳು ಯೋಗ್ಯರಾಗಿರಬೇಕು. ಅಂತಹವರನ್ನು ಆರಿಸಬೇಕಾದರೆ ಪ್ರತಿಯೊಬ್ಬ ಮತದಾರನು ಯೋಚಿಸಿ ಮತದಾನ ಮಾಡಬೇಕು. ಅತಿ ಮುಖ್ಯವಾಗಿ ಪ್ರತಿಯೊಬ್ಬರೂ ಮತ ಚಲಾಯಿಸಲೇಬೇಕು.

ಶೇಕಡಾ 80ಕ್ಕೂ ಹೆಚ್ಚು ಮತದಾನವಾದರೆ ಗೆಲ್ಲುವ ಅಭ್ಯರ್ಥಿ ಒಳ್ಳೆಯ ಕೆಲಸ ಮಾಡಲೇಬೇಕಾಗುತ್ತದೆ. ಆಗ ಮತದಾರರನ್ನು ಕಂಡರೆ ಅವರಿಗೆ ಗೌರವ, ಹೆದರಿಕೆ ಎರಡೂ ಇರುತ್ತದೆ. ತಾವು ನಿರೀಕ್ಷಿಸಿದುದಕ್ಕಿಂತ ಹೆಚ್ಚು ಜನರು ಮತದಾನ ಮಾಡಿರುವುದರಿಂದ ಅವರು ಬಹಳ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಮತದಾನದ ಪ್ರಮಾಣ ಕಡಿಮೆಯಾದಷ್ಟೂ ಚುನಾಯಿತ ಪ್ರತಿನಿಧಿಗೆ ಮತದಾರರನ್ನು ಕಂಡರೆ ಅಸಡ್ಡೆ ಹೆಚ್ಚಾಗುತ್ತದೆ. ಹಾಗಾಗಿ ನಾವು ಮತದಾನ ಮಾಡುವುದಲ್ಲದೆ, ಇತರರೂ ಮತದಾನ ಮಾಡುವಂತೆ ಉತ್ತೇಜಿಸಬೇಕು.

ಇದಕ್ಕೆ ನಾವು ಮಾಡಬೇಕಾಗಿರುವುದು ಇಷ್ಟೇ

೧) ನಮ್ಮ ಹಾಗೂ ನಮ್ಮ ಮನೆಯವರೆಲ್ಲರ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂದು ಇಂದೇ ಪರೀಕ್ಷಿಸಿಕೊಳ್ಳಿ. ಇಲ್ಲದಿದ್ದರೆ ತಕ್ಷಣ ಸೇರಿಸಿಬಿಡಿ.

೨) ಮನೆಯ ಸುತ್ತಮುತ್ತ ಇರಬಹುದು ಕಾಲೇಜಿನಲ್ಲಿ ಓದುತ್ತಿರುವ ಯುವಕ ಯುವತಿಯರನ್ನು, ಅದರಲ್ಲೂ ಮೊದಲ ಬಾರಿ ಮತಚಲಾವಣೆಯ ಹಕ್ಕು ಬಂದಿರುವವರಲ್ಲಿ ಆಸಕ್ತಿಯನ್ನು ಹುಟ್ಟಿಸಿ, ಅವರು ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಿಕೊಳ್ಳುವಂತೆ ಮಾಡಿ.

೩) ಚುನಾವಣೆಯ ದಿನ ಆದಷ್ಟು ಬೇಗ ಹೋಗಿ ಮನೆಯವರೆಲ್ಲ ಮತದಾನ ಮಾಡಿಬಿಡಿ.

೪) ಅನಂತರ ಸುತ್ತಮುತ್ತಲಿನ, ಕಡೆಯ ಪಕ್ಷ ಇಪ್ಪತ್ತೈದು ಮಂದಿಯನ್ನು ಮತ ಚಲಾಯಿಸುವಂತೆ ಒಲಿಸಿ.

೫) ನಿಮ್ಮ ಮನೆಯಲ್ಲಿ ಸಹಾಯಕರಾಗಿರುವ ಜನರು ಮತ ಚಲಾಯಿಸುವಂತೆ ನೋಡಿಕೊಳ್ಳಿ.

೬) ಹತ್ತು ಸ್ನೇಹಿತರಿಗೆ ಕರೆ ಮಾಡಿ ನೀವು ಮತಚಲಾಯಿಸಿರುವ ವಿಚಾರವನ್ನು ತಿಳಿಸಿ, ಅವರೂ ಮತಚಲಾಯಿಸುವಂತೆ ಉತ್ತೇಜಿಸಿ.

ಇಷ್ಟನ್ನು ನಮ್ಮ ಭಾರತದೇಶದ ಹಿತದೃಷ್ಟಿಯಿಂದ ನಾವೆಲ್ಲರೂ ಆದ್ಯ ಕರ್ತವ್ಯವೆಂದು ತಿಳಿದು ಮಾಡಬೇಕು.

ಬನ್ನಿ ಈ ಬಾರಿ ಶೇಕಡಾ 80 ಪ್ಲಸ್ ಮತದಾನವಾಗುವಂತೆ ಮಾಡಲು ಈಗಲೇ ನಾವೆಲ್ಲರೂ ಪಣತೊಡೋಣ; ಕಟಿಬದ್ಧರಾಗೋಣ.

೧೯. ರಾಧಿಕಾ ವಿ ಗುಜ್ಜರ್



ಬೇಸಿಗೆಯ ಗೆಳತಿ
ನಸು ಹಳದಿ ಸುಂದರಿ

ಝುಲ್ ಝುಲ್ ಲಯದ ಗೆಜ್ಜೆಯ ಸದ್ದು
ಹೊರಳದ ಅರಸಿಕರಾರಿಹರು ಹೇಳು
ತಿರು ತಿರುಗಿ ಹೊರಳಿ ಸುತ್ತುವ ಚಕ್ರದ
ರಾಟೆಯ ತಟ್ಟೆಗೆ ಸುರಿವ ಕಬ್ಬಿನ ಹಾಲು

ಲೋಟದ ತುಂಬ ನಸುಹಳದಿ ಬಣ್ಣದ
ಕೊಂಚ ನಿಂಬೆ ಕೊಂಚ ಶುಂಠಿ ಬೆರೆಸಿದ
ಸೋಸಿದ ತಾಜಾ ನೊರೆ ರಸ ಹೀರುತಿರೆ
ಸಹ್ಯವಾಗುವುದು ಬೇಸಿಗೆಯ ಧಗೆ



ಪುದೀನ ತೇಲುವ ಜಲಜೀರಾ ಜೀರ್ಣಕೆ
ಮಿಶ್ರಹಣ್ಣಿನದು ಆರೋಗ್ಯ ಲಾಭಕೆ
ಕಾಕ್ಟೇಲ್ ಮಾಕ್ಟೇಲ್ ರಂಗಿತರಂಗ ಪೇಯ
ಖೀರು ಐಸ್ಕ್ರೀಮ್ ಹಲವಾಗಳು ಮೀಠಾ


ತಯಾರಿಕೆಯೊಳು ರಸ ವೈವಿಧ್ಯಗಳಿವೆ
ಪಾಕ ಪ್ರಯೋಗಗಳು ಆಮಿಷವೊಡ್ಡಿವೆ
ಜಿಹ್ವೆಗೂ ದೇಹಕ್ಕೂ ಹಿತವಾದ ಸಾರ
ರೋಗ ನಿರೋಧಕ ಶಕ್ತಿಯ ಭಂಡಾರ

ಅಜ್ಜಿಯೊಡನೆ ಸಂತೆಯಲ್ಲಿ ಒನ್ಬೈsss..ಟೂ
ಕುಡಿಯೆ ನೊರೆಯೊರೆಸಿತು ಮಿದು ಸೆರಗು
ನೆಂಟರಿಗಾಗಿ ತಂಬಿಗೆ ತುಂಬಾ ತಂದಾಗ
ಒಂದು ಗೀರುಳಿಸಿ ಚಪ್ಪರಿಸಿದಾಮೋದ

ಅತ್ತೆ ಚಿಕ್ಕಮ್ಮ ಅಕ್ಕ ಗೆಳತಿಯರೊಡನೆ
ಗುಡಿ ಪೇಟೆ ಸಂತೆಯ ಸುತ್ತಾಟದೊಡನೆ
ಆಯಾಸ ಪರಿಹಾರಕೆ ಬೇಕೇಬೇಕಿತ್ತು
ಮಧ್ಯವಿರಾಮವೆಂಬ ನೆಪವಿದಾಗಿತ್ತು

ವಯೋಮಾನವಿಲ್ಲ ಸವಿಯಲು ಮೋಜು
ರೈತಗೆ ಸಿರಿಯ ಮೂಲದ ಗೌಜು
ವಸುಧೆಯಾನಂದದ ಕಿಂಕಿಣಿಯಿದು
ಸೆಡ್ಡು ಹೊಡೆದಿದೆ ವಿದೇಶಿ ಜೂಸಿಗೂ

೨೦. ಕೆ.ಆರ್.ಎಸ್.ಮೂರ್ತಿ



ಹೆತ್ತವ್ವ

(ಗದ್ಯ–ಪದ್ಯ ಛಾಯಾ ಗಂಜಿ ಪಳದ್ಯ)

ಲಕ್ಷೋಪಲಕ್ಷ ಸುಡು ಸುಡುವ
ಇಲ್ಲವೇ ಕೊರೆ ಕೊರೆವ
ನೀರು–ನಿಡಿ ಸುಳಿಗಾಳಿ ಇಲ್ಲದ
ನರಪಿಳ್ಳೆ, ಅರೆಪಿಳ್ಳೆ,
ಜಂತು ಜೀವಾಣುಗಳೇ ಇಲ್ಲದ,
ಭಯಂಕರ ಗ್ರಹಗಳ ಬಿಟ್ಟು
ತಾನೂ ಇಳಿದು, ನನ್ನನೂ ಈ
ಭವ್ಯ ಭುವಿಯಲ್ಲಿ ಇಳಿಸಿದ್ದು...

ಕೆಂಪೊಡೆವ ಸೂರ್ಯ,
ತಂಪಿಡುವ ಚಂದ್ರರು
ಮೆರೆದು ಕಾಪಿಡುವ,
ಹಸಿರು ಕಾನನ, ನೀಲ ಬಾನಿನ,
ಹಳದಿ, ಕಿತ್ತಳೆ, ಕಂದು, ನೇರಳೆಗಳ
ಸೊಬಗಿನ ಸುಂದರ
ಬಣ್ಣದೋಕುಳಿಯ ನೆಲೆವೀಡು
ಭರತ ಭೂಮಿಯ ಮೇಲೆ
ನಾ ಕಾಲಿಡುವಂತೆ ಮಾಡಿದ್ದು...

ಕನ್ನಡತಿ ಕಾವೇರಿಯ
ಅಮೃತಸಿಂಚನಕೆ ತುಡಿ–ತುಟಿಗಳನೊಡ್ಡುತ್ತ
ನುಡಿಕನ್ನಡಕೆ
ಮಿಡಿಮನವ ಚಿಮ್ಮಿಸಿ
ನಾಲ್ಕಕ್ಷರಗಳ ಕಲಿಸಿ
ಪದ ಹೊಸೆದು ಹಾಡಿದ್ದು,
ನನ್ನಿಂದಲೂ ಹಾಡಿಸಿದ್ದು...

ಸದ್ಗುಣ, ಸದ್ಭಾವ, ಸದ್ಧರ್ಮ,
ಸಜ್ಜೀವ ಸಮಾಗಮ ಸಂಪೂರ್ಣತೆಯಲ್ಲಿ
ಸಡಗರ ಸಂಭ್ರಮಗಳನ್ನನುಭವಿಸಲು
ಅವಕಾಶ ನೀಡಿದ್ದು...

ಅಖಂಡ ಬ್ರಹ್ಮಾಂಡದಲ್ಲೊಂದು ಕಣಮಾತ್ರವಾದ ಅಂಡಕ್ಕೆ
ಸಹಸ್ರ ಆಕಾಂಕ್ಷಿ ಮೀನುಗಳು
ಆತುರದಿ, ಕಾತುರದಿ
ಈಜುತ್ತ ಬಂದಾಗ
ಎನ್ನಮಾತ್ರವನಾಯ್ಕೆ ಮಾಡುತ್ತ
ನಾನೊಂದು ಮನುಷ್ಯರೂಪಿಯಾಗಲು ಸಹಕರಿಸಿ ಸಲಹಿದ್ದು...

ಆ ಮಹಿಮಾಮಯಿ ಹೆತ್ತವ್ವ
ಕರುಣಿಸಿದ
ಅದೃಷ್ಟವಲ್ಲದೆ ಮತ್ತೇನು?

ಭಲೆ ಅದೃಷ್ಟವೋ ಅದೃಷ್ಟ!

ಪಟ್ಟಿ ದೊಡ್ಡದು
ಲೇಖ ಚಿಕ್ಕದು
ಮಹಿಮೆ ತಾನದು ಅಪಾರ
ಹೆತ್ತವ್ವನವತಾರ,
ಆ ಹೆತ್ತವ್ವನವತಾರ!

ಬೇಸರ

(ಗದ್ಯ-ಪದ್ಯ ಛಾಯಾ ಗಂಜಿ ಪಳದ್ಯ)

ರಾತ್ರೆ...
ಹಾಸಿಗೆಯ ಮೇಲುರುಳಿಕೊಂಡಾಗ
ಆಲೋಚನೆಗಳ ದಾಳಿಗೆ
ಕಾಲನ ಸುರುಳಿ
ಬಿಚ್ಚಿಕೊಳ್ಳುತ್ತಾ
ದಶಕ, ಶತಮಾನಗಳನ್ನೂ

ದಾಟಿ ಚಿಂತನೆಯ
ಗಾಳಿ ಹರಿದಾಡುತ್ತದೆ
ಮನಸ್ಸು ಹಗುರವಾಗುತ್ತಾ
ಹಾರಾಡುತ್ತದೆ...
ಶುಭ್ರ ನೀಲ ಗಗನದಲ್ಲಿ
ಖೇಚರನ ವಿಹಾರದಂತೆ!

ಎಲ್ಲ ಸದ್ದಡಗಿ ಮೌನ ಆವರಿಸಿದಂತೆ,
ಧರ್ಮ, ಯೋಗ, ಪದ್ಧತಿ,
ಸಂಸ್ಕಾರ, ಸಂಸ್ಕೃತಿಗಳ
ಮೆಲುಕಿನ ಜೊತೆ ಜೊತೆಗೆ
ಅಪ್ಪ, ಅಜ್ಜ, ಮುತ್ತಜ್ಜ
ಕೋಲಜ್ಜನಿಂದಲೂ ಹಿಂದಕ್ಕೆ,
ಬಹಳ ಬಹಳ ಹಿಂದಕ್ಕೆ,
ರಾಮ, ಭೀಮ, ಹನುಮನವರೆಗೂ
ಪಯಣ ಸಾಗಿಬಿಡುತ್ತದೆ!
ಇಂಪಾದ ಕೊಳಲ ನಾದ,
ಸವಿದನಿ
ಕೇಳಿಬರುತ್ತದೆ!

ಯಕ್ಷ, ಕಿನ್ನರ, ಗಂಧರ್ವ,
ಸಾಧು ಸಜ್ಜನರ
ಲೋಕದ ಲಗ್ಗೆಯಲ್ಲಿ
ಅಂದು ಬಹಳರಿದ್ದು,
ಇಂದು ಎಣಿಕೆ
ಮಾತ್ರಕ್ಕಾದರೂ ಸಿಗುವ
ಸದ್ಧರ್ಮಿ, ಸದ್ಭಾವಿ, ಸುಜ್ಞಾನಿ,
ಸಜ್ಜನರು ಪರದೆ ಸರಿಸಿ, ಇಣುಕಿ,
ಕಣ್ಣು ಮಿಟುಕಿಸುತ್ತಾರೆ!

ಸಮಾಧಾನ ತುಂಬುತ್ತ
ಕಣ್ಣು ತೇಲಿಬಂದು
ಮಲಗಿ ಬಿಡುತ್ತೇನೆ
ಕನಸುಗಳೇನೂ ಇರದ
ಸುಖನಿದ್ರೆಯಲ್ಲಿ!

ಅದೋ...ಹಗಲಾಗುತ್ತಿದೆ
ಆದರೇಕೋ ...
ಮನಸು ಭಾರವಾಗುತ್ತ
ಏಳಲಾರದು ಬೇಗ!

ಬಿಸಿಲೇರುತ್ತ ಬಂದಂತೆ
ರಾತ್ರೆಯ ಲಹರಿಯಲ್ಲಿ
ಕಂಡದ್ದಕ್ಕೆ ಬದಲಾಗಿ
ಶಕುನಿ, ದುರ್ಯೋಧನ, ದುಶ್ಶಾಸನ,
ಕಂಸ, ಕೀಚಕರ
ಅಟ್ಟಹಾಸದ ಅರಚು, ಆರ್ಭಟವೇ
ಹೆಚ್ಚು ಹೆಚ್ಚು
ಕೇಳಿದಂತಾಗುತ್ತದೆ!

ಗೋಡೆಯ ಮೇಲಿನ ಬಣ್ಣದ ಪರದೆಯ ಅಬ್ಬರಕ್ಕೆ ಸಾಟಿ ಎನಿಸುವಂತೆ ರಸ್ತೆಯ ನಾಯಿಗಳು ಶೃತಿಸೇರಿಸಿ ಬೊಗಳುತ್ತವೆ!

ಅಭಿಮಾನ, ಸ್ವಾಭಿಮಾನ,
ನಿಯಮ, ನಿಯತ್ತು
ಸಂಸ್ಕೃತಿ, ಸಂಸ್ಕಾರ
ಆಚಾರ, ವಿಚಾರಗಳೆಲ್ಲ
ತಲೆಕೆಳಗಾಗಿ
ಲೋಭ, ಪ್ರಲೋಭಗಳೇ
ರಾರಾಜಿಸಿದಂತಾಗುತ್ತದೆ.

ದಂಗು ಬಡಿದಂತಾಗಿ
ಮಂಕು ಮೂಡುತ್ತದೆ
ಹಿತ, ಆನಂದ ಎರಡೂ
ಬೋರಲು ಬಿದ್ದಂತಾಗುತ್ತದೆ

ಹಗಲು....ಪ್ರತಿ ಹಗಲೂ
ಎದೆಯನ್ನು ಇರಿಯುತ್ತಿದ್ದರೂ,
ಲವಲೇಶ ಅನುಭವವಿಲ್ಲದಿದ್ದರೂ
ಕಲ್ಪನೆಯರಾಮರಾಜ್ಯದ
ಹಂಬಲ ಹೆಚ್ಚಾಗುತ್ತದೆ

ಕತ್ತಲಿನಲ್ಲಿ
"ಮಿನುಗು ನಕ್ಷತ್ರ"ವಾದ
ಅಭಿಮಾನ
ಹಗಲಿನಲ್ಲಿ ಬೇಸರಕ್ಕೆ
ತಿರುಗುತ್ತದೆ...

ನಮ್ಮ ಮುಂದಾಳುಗಳಿಗೆ
"ಕಲಿ" ಕಲಿಸುತ್ತಿರುವುದಾದರೂ ಏನನ್ನು?
ಮಂತ್ರ ಮರೆಯಿರಿ, ತಂತ್ರ ಬಳಸಿರಿ
ಸೂತ್ರವನ್ನೇ?
ಅಥವಾ ಅರಿಷಡ್ವರ್ಗಗಳ
ಆರಾಧನೆಯನ್ನೇ?

ಅಸ್ಪಷ್ಟ ಉತ್ತರಕ್ಕೆ, ಬೇಸರಕ್ಕೆ
ನುಲಿತದ ನೋವು
ಎದೆಗೂಡನ್ನು ಸುಡುತ್ತದೆ.
ರಾತ್ರೆಯ ಹಿತಕತ್ತಲನ್ನು
ಮತ್ತೆ ಕಾಯುವಂತೆ ಮಾಡುತ್ತದೆ!

ಸಾಹಿತ್ಯದ ದಾಸೋಹ ಅಧ್ಯಕ್ಷರ ಭಾಷಣ

ಶ್ರೀ ರವಿ ಕುಸಬಿ ಅವರಿಂದ



ಈ ಸಾಹಿತ್ಯ ದಾಸೋಹಕ್ಕೆ ಅಧ್ಯಕ್ಷನಾಗು ಎಂದು ಮಹಾಬಲ ಅವರು ನನಗೆ ಸಂದೇಶ ಕಳಿಸಿದರು. ನಾನು ಗೋಗ್ರಹಣ ಕದನದಲ್ಲಿ ಭೀಷ್ಮ, ದ್ರೋಣ, ಕೃಪಾಚಾರ್ಯರನ್ನು ನೋಡಿದ ಉತ್ತರನಂತೆ ರಥ ಇಳಿದು ಓಡತೊಡಗಿದೆ. ಸಾಹಿತ್ಯ ಕೃಷಿಯನ್ನೇ ಮಾಡದ ನಾನು ಅಧ್ಯಕ್ಷನಾಗುವುದು ಸರಿ ಅಲ್ಲ ಎಂದೆ. ಆದರೆ ಮಹಾಬಲರು ಬ್ರಹನ್ನಳೆಯಂತೆ ನನ್ನನ್ನು ಹಿಡಿಯಲು ಬರಲಿಲ್ಲ. ಅದರ ಬದಲಾಗಿ ರವೀಂದ್ರರನ್ನು ಛೂ ಬಿಟ್ಟರು. ರವೀಂದ್ರರಲ್ಲಿ ಒಂದು ವಿಶೇಷ ಗುಣ ಇದೆ. ಅವರು ಯಾರಿಂದಲೂ "ಇಲ್ಲ" ಎಂದು ಎನಿಸಿಕೊಳ್ಳುವುದೇ ಇಲ್ಲ. ಅಂತೆಯೇ ನನ್ನೊಡನೆ ಅರ್ಧ ಗಂಟೆ ಮಾತಾಡಿ, ನೀನು ಒಬ್ಬ ಓದುಗನಾಗಿ ಅಧ್ಯಕ್ಷ ಭಾಷಣ ಮಾಡು ವಿಮರ್ಶಕನಾಗಿ ಅಲ್ಲ. ಇದೊಂದು ರೀತಿಯ ನಿನಗೆ ನೀಡಿದ ದಾಸೋಹದ ಜವಾಬ್ದಾರಿ ಎಂದು ನಿರ್ವಹಿಸು ಎಂದರು. ಒಪ್ಪಿಕೊಂಡೆ. ನಮಗೆ ಏರ್ ಫೋರ್ಸ್ ಸೇರಿದಾಗ ಮೊದಲ ಎರಡು ತಿಂಗಳು ಅಂಡರ್ ಟ್ರೈನಿಂಗ್ ಪೈಲೆಟ್ ಆಫೀಸರ್ ಎಂದು ಕರೆಯುತ್ತಿದ್ದರು. ಒಂದು ಬಾರಿ ರಾಷ್ಟ್ರಾಧ್ಯಕ್ಷ ಅವರ ಒಪ್ಪಿಗೆ ಬಂದಾಗ ಆಗ ನಮಗೆ ಅಂಡರ್ ಟ್ರೈನಿಂಗ್ ಬಿಟ್ಟು ಪೈಲಟ್ ಆಫೀಸರ್ ಎನ್ನುತ್ತಿದ್ದರು. ನಾನು ಈಗ ಅಂಡರ್ ಟ್ರೈನಿ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಎನಿಸುತ್ತದೆ.

ಮೊದಲನೇ ಪ್ರಸ್ತುತಿ ಶ್ರೀ ಗಣಪತಿ ಹೆಗಡೆಯವರದು "ಶಬ್ದೋತ್ಪತ್ತಿ"

ಇದೊಂದು ವಿಚಾರ ಪ್ರಚೋದಕ ಲೇಖನ. ಹೆಗಡೆಯವರು ತಮ್ಮ ಎಂದಿನ ಶೈಲಿಯಲ್ಲಿ ಪಾಂಡಿತ್ಯ ಪೂರ್ಣ ಲೇಖನವನ್ನು ನಮಗೆ ನೀಡಿದ್ದಾರೆ. ಶಬ್ದಗಳ ಸ್ಫುರಣೆ ಹಾಗೂ ಅವುಗಳ ಬಳಕೆಯ ಬಗ್ಗೆ ನಮ್ಮನ್ನೆಲ್ಲ ಚಿಂತಿಸುವಂತೆ ಹಾಗೂ ಅದರ ಬಗ್ಗೆ ಅರಿಯುವಂತೆ ಬರೆದಿದ್ದಾರೆ. ಬರಹದಲ್ಲಿ ಕನ್ನಡ ಭಾಷೆಯ ಶಬ್ದ ಸಂಪತ್ತನ್ನು ಹೆಸರಿಸಿ ಶ್ಲಾಘಿಸಿದ್ದಾರೆ. ಏನೂ ಅರಿಯದ ಮಗು, ಒಂದೊಂದಾಗಿ ಶಬ್ದಗಳನ್ನು ಅರಿಯುವ ಪರಿಯನ್ನು ವಿವರವಾಗಿ ತಿಳಿಸಿದ್ದಾರೆ .ಇದೊಂದು ಭಾಷೆ ಹಾಗೂ ಶಬ್ದಗಳ ಬಗ್ಗೆ ಅನನ್ಯ ಬರಹ.

ಎರಡನೇ ಪ್ರಸ್ತುತಿ; ವಿಠ್ಠಲ್ ಈಜೇರಿಯವರ ರೋಹಿತ್ ಚಕ್ರತೀರ್ಥ ಅವರ ನೂರೆಂಟು ಕಥೆಗಳು.

ಶ್ರೀ ವಿಠ್ಠಲ್ ಇಜೇರಿಯವರು ನಮ್ಮ ಗುಂಪಿನ ಒಬ್ಬ ವಿಶೇಷ ವ್ಯಕ್ತಿ . ಇವರ ಬರವಣಿಗೆಯು ಇವರಂತೆಯೇ ವಿಶೇಷ. ಹಾಸ್ಯ ತುಂಬಿದ ಇವರ ಬರವಣಿಗೆ ದಣಿದ ಮನಸ್ಸಿಗೆ ನವಿರಾದ ಕಚಗುಳಿ ಇಡುತ್ತದೆ. ಇಂದು ಇವರು ಪ್ರಸ್ತುತಪಡಿಸಿದ ಲೇಖನದಲ್ಲೂ ಈ ರೀತಿಯ ಹಾಸ್ಯ ಪ್ರಸಂಗಗಳು ಸಹಜವಾಗಿ ಇವೆ. ನಾವು ಕೇಳದೆ ಇರುವ ಯಹೂದಿ ಜನಾಂಗದ ಬಗ್ಗೆ ಇರುವ ಎರಡು ಚುಟುಕುಗಳು ತಿಳಿಸಿದ್ದಾರೆ. ಇವುಗಳನ್ನು ಓದಿದಾಗ ಮೊಗದಲ್ಲಿ ನಗೆ ಮೂಡಸದೆ ಮರೆಯಾಗಲಾರವು. ಇಂಥ ಪುಸ್ತಕ ಆರಿಸಿ ಪರಿಚಯಿಸಿದಕ್ಕೆ ಈಜೇರಿಯವರಿಗೆ ಧನ್ಯವಾದಗಳು.

ಮುಂದಿನ ಪ್ರಸ್ತುತಿ ಬೆಂ.ಶ್ರೀ. ರವೀಂದ್ರ ಅವರ ಟಾಮಿ

ಬಹುಮುಖ ಪ್ರತಿಭೆಯ ಖಣಿ ಶ್ರೀ ಬೆಂ. ಶ್ರೀ ರವೀಂದ್ರ ಎಂದರೆ ತಪ್ಪಾಗಲಾರದು ಯಾಕೆಂದರೆ ನಾನು ನೋಡಿದಂತೆ ಅವರು ಕಾರ್ಮಿಕ ನಾಯಕರಾಗಿ, ಸಂಘಟಕರಾಗಿ, ಭಾಷಣಕಾರರಾಗಿ, ಬರಹಗಾರರಾಗಿ ಅತ್ಯಂತ ಯಶಸ್ವಿ ಇನ್ನಿಂಗ್ಸ್ ಗಳನ್ನು ಆಡಿದ್ದಾರೆ. ಇನ್ನು ಆಡುತ್ತಿದ್ದಾರೆ. ಈ ಬಾರಿ ಬದಲಾವಣೆಗಾಗಿ ಹಾಸ್ಯ ಬರಹವನ್ನು ಬರೆದಿದ್ದಾರೆ. ಬೀದಿ ನಾಯಿಗಳಿಂದ ಆಗುವ ಒಂದೆರಡು ತೊಂದರೆಗಳ ಬಗ್ಗೆ ಬರೆದಿದ್ದಾರೆ ಬೀದಿ ನಾಯಿಗಳು ಬಹಳಷ್ಟು ಜನಕ್ಕೆ ಬೇಕು. ಯಾಕೆ ಹೇಳಿ? ಬೊಗಳುವ ನಾಯಿಗಳು ಇದ್ದರೆ ಬೀದಿಗೆ ಕಳ್ಳರು ಬರುವುದಿಲ್ಲ. ಹಾಗೆಂದು ಒಂದು ಅನುಕೂಲ ಬರೀ ಅನುಕೂಲವಾಗಿ ಬರೋಲ್ಲ ಜೊತೆಗೆ ಒಂದು ತಾಪತ್ರವನ್ನೂ ತರುತ್ತದೆ. ಈ ಬೀದಿ ನ್ಯಾಯಗಳ ಕಚ್ಚಾಟ ಬೊಗಳುವಿಕೆ ಮಧ್ಯರಾತ್ರಿ ಅವುಗಳ ಊಳಿಡುವಿಕೆ ಎಲ್ಲರಿಗೂ ಕಿರಿಕಿರಿ ಉಂಟುಮಾಡುತ್ತದೆ. ಇಂತಹ ಹತ್ತು ಹಲವಾರು ವಿಷಯಗಳನ್ನ ಸೇರಿಸಿ ಒಂದು ಸುಂದರವಾದ ಹಾಸ್ಯ ಬರಹವನ್ನು ರವೀಂದ್ರ ಪ್ರಸ್ತುತಪಡಿಸಿದ್ದಾರೆ. ಓದಲು ಶುರು ಮಾಡಿದರೆ ಸಾಕು ತಾನೇ ಓದಿಸಿಕೊಂಡು ಹೋಗುತ್ತದೆ. ಗಂಡ ಹೆಂಡತಿಯರ ಸರಸ, ಬೀದಿ ಜನಗಳ ಆಟೋಟೋಪ, ಸರಕಾರಿ ಯಂತ್ರಗಳ ಮಾಮೂಲಿ ಕೆಲಸ, ಹೀಗೆ ಹತ್ತು ಹಲವರು ವಿಷಯಗಳನ್ನು ಸೇರಿಸಿ ಬರಹ ನೀಡಿದ್ದಾರೆ ಕಚ್ಚಿದ ನಾಯಿಯನ್ನು ಬಿಟ್ಟು ಬೇರೆ ನಾನು ಎತ್ತಿಕೊಂಡು ಹೋಗುವ ಮುನ್ಸಿಪಾಲ್ಟಿಯವರು ಹಾಗೂ ಒಬ್ಬರಿಗೆ ಕಚ್ಚಿದರೂ ಠೀವಿಯಿಂದ ನಡೆಯುವ ಟಾಮಿ ನಗು ಬರಿಸುತ್ತದೆ ಧನ್ಯವಾದಗಳು ಸರ್

ಕೆ ಎನ್ ಭಗವಾನರ ಹಂಪಿ ಸುಂದರಿಯ ಕನ್ನಡ ಅಭಿಮಾನ:

86 ವರ್ಷದ ಜಮುನಾ ಅವರು ಇತ್ತೀಚಿಗೆ ನಿಧನರಾದರು. ಜಮುನಾ ಅವರ ಜೀವನದ ಪಕ್ಷಿ ನೋಟವನ್ನು ಶ್ರೀ ಭಗವಾನ್ ಅವರು ನೀಡಿದ್ದಾರೆ. 1954 ರಲ್ಲಿ ಆದರ್ಶಸತಿ ಎಂಬ ಕನ್ನಡ ಚಿತ್ರದ ಮೂಲಕ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ ಜಮುನಾ ಅವರು ಸಾಕ್ಷಾತ್ಕಾರ ರವರಿಗೆ ಹಲವು ಕನ್ನಡ ಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ತೆಲುಗು ಚಿತ್ರರಂಗದಲ್ಲಿ ತುಂಬಾ ಖ್ಯಾತಿ ಪಡೆದಿದ್ದರಿಂದ ಕನ್ನಡ ಚಿತ್ರರಂಗ ಹೆಚ್ಚು ಬರಲಿಲ್ಲ. ಜಮುನಾ ಅವರು ಆಂಧ್ರದಲ್ಲಿ ಹಲವಾರು ರೀತಿಯ ವಿವಾದಗಳಲ್ಲಿ ಕೂಡ ಭಾಗಿಯಾಗಿದ್ದರು. ಅದಾವುದನ್ನು ತಿಳಿಸದೆ ಕೇವಲ ಅವರ ಕನ್ನಡ ಪ್ರೀತಿಯ ಬಗ್ಗೆ ತಿಳಿಸಿದ್ದಾರೆ. ಅವರ ಕನ್ನಡ ಪ್ರೀತಿಯಿಂದ ಭಗವಾನರ ಗೆಳೆಯರೊಬ್ಬರು ಪವಾಡ ಸದೃಶ ರೀತಿ ಕನ್ನಡವನ್ನು ಪ್ರೀತಿಸುವುದಕ್ಕೆ ಶುರು ಮಾಡಿದ್ದು ಅತ್ಯಂತ ಸಂತೋಷದ ಸಂಗತಿ.ಅಂಥ ಒಂದು ಪ್ರಸಂಗವನ್ನು ತಿಳಿಸಿ ನಮಗೆಲ್ಲ ಕನ್ನಡದ ಬಗ್ಗೆ ಹೆಮ್ಮೆ ಮೂಡಿಸಿದ್ದಾರೆ ಶ್ರೀ ಭಗವಾನರು. ಧನ್ಯವಾದಗಳು.

ಮುಂದಿನ ಪ್ರಸ್ತುತಿ ಪೋಲಿನಹಳ್ಳಿ ರಮೇಶ್ ಅವರ "60 ಆಯಿತು ಎಂದರೆ" ಹಾಗೂ "ಮೋಡ ಸರಿದಿದೆ ಹುಡುಗಿ" ಎಂಬ ಕವನಗಳು.

"60 ಆಯಿತು ಎಂದರೆ ತುಂಬಾ ನವಿರಾದ ಆಶಾವಾದವಿರುವ ಅರ್ಥಭರಿತ ಕವನ. ಹೇಗೆ ಕಪ್ಪನೆಯ ಕೂದಲು ಮಾಗಿ,ಬೆಳ್ಳಗಾಗಿ, ಅನುಭವದ ಶಿಖರ ಎಂದು ಹೆಸರು ಪಡೆಯುವುದೋ ಅದೇ ರೀತಿ ಈ ಕವನ ಕೂಡ ಹೆಣೆಯಲ್ಪಟ್ಟಿದೆ. ಒಂದೊಂದು ಸಾಲು ಕೂಡ ಹೊಸ ಅರ್ಥವನ್ನು ಹೊರಸೂಸುತ್ತಿದೆ. ಇಡೀ ಪದ್ಯವನ್ನು ಹೇಳುವಷ್ಟು ಚೆನ್ನಾಗಿದೆ. ಅದರಲ್ಲಿ ಒಂದೇ ಒಂದು ಪ್ಯಾರಾ ಮಾತ್ರ ನಾನು ಆರಿಸುವೆ.

ಬಿಸಿಲು ತಗ್ಗಿ ಸಂಜೆಯಾಗಿ
ಬದುಕು ತುಸು ವಿಳಂಬ

ಹೌದು ಅರವತ್ತರ ನಂತರ ನಿಮ್ಮನ್ನು ನಿವೃತ್ತಿ ಮಾಡಿ ಮನೆಗೆ ಕಳಿಸಿರುತ್ತಾರೆ. ನಿಮ್ಮ ಉಛ್ರಾಯದ ಬದುಕು ಮುಗಿದಿರುತ್ತದೆ. ಹೀಗಾಗಿ ಅದು ಬದುಕ ಸಂಜೆ.

ಹೊಸ್ತಿಲ ಹೊರಗೆ ಬೆಳಕು
ನೆರಳು ತುಂಬ ಲಂಬ

ಹೊಸ್ತಿಲಿನ ಹೊರಗಡೆಗೆ ಬೆಳಕು ಹೋಗಿದೆ ಎಂಬುದು ಕವಿಯ ಚಿಂತೆ. ಜೊತೆಗೆ

ಸಂಜೆಯಾದಾಗ ಗಮನಿಸಿ ನಮ್ಮ ನೆರಳು ತುಂಬ ಉದ್ದವಾಗಿರುತ್ತದೆ. ಅದಕ್ಕಾಗಿ ನೆರಳು ತುಂಬ ಲಂಬ. ಅಂದರೆ ನಮ್ಮ ನೆನಪುಗಳು ಅನೇಕವು ಮನದಲ್ಲಿ ತುಂಬಿ ತುಳುಕುತ್ತಾ ಇರುತ್ತವೆ. ಯಾರಾದರೂ ಮಾತನಾಡಿದರೆ ಸಾಕು ನಾವು ಅವರೊಡನೆ ನಮ್ಮ ನೆನಪನ್ನು ಹಂಚಿಕೊಳ್ಳಲು ನಿಂತು ಬಿಡುತ್ತೇವೆ. ಅದಕೆ ನೆನಪು ತುಂಬಾ ಲಂಬ . ಇದೇ ರೀತಿ ಪ್ರತಿಯೊಂದು ಸಾಲುಗಳು ವಿವಿಧ ಅರ್ಥವನ್ನು ಹೆಣೆಯುತ್ತವೆ.ಇಡೀ ಪದ್ಯವೇ ತುಂಬಾ ಅರ್ಥಗರ್ಭಿತವಾಗಿದೆ. ಇಂತಹ ಒಂದು ಅದ್ಭುತ ಪದ್ಯವನ್ನು ಕೊಟ್ಟ ರಮೇಶ್ ಅವರಿಗೆ ಧನ್ಯವಾದಗಳು.

ಎರಡನೇ ಕವನ ಹುಡುಗಿಯೊಬ್ಬಳ ಹುಡುಗನ ರೂಪಕೆ ಮರುಳಾಗಿರುವಾಗ ಮಧ್ಯ ಅನೇಕ ತೊಂದರೆಗಳು ಬಂದು ನಿಲ್ಲುತ್ತವೆ. ಅವೆಲ್ಲ ನಿವಾರಣೆಯಾದಾಗ ಹೋಗು ಗೆಳತಿ ನಿನ್ನ ಗೆಳೆಯನ ಸೇರು ಎಂದು ಕವಿ ಹೇಳುತ್ತಾನೆ.

ಮುಂದಿನ ಪ್ರಸ್ತುತಿ ಗುರುರಾಜ್ ಶಾಸ್ತ್ರಿಯವರ "ವಿವಾಹ ಪೂರ್ವ ಛಾಯಾಗ್ರಹಣ (Pre Wedding Shooting)."

ಗುರುರಾಜ ಶಾಸ್ತ್ರಿಗಳು ನನಗೆ ಮೊದಲಿನಿಂದ ಗುರು ಎಂದೇ ಪರಿಚಯ. ಗುರು ಮೊದಲಿಂದ ಬರಹಗಾರರೇನಲ್ಲ. ಆದರೂ ಅವರೀಗ ಅತ್ಯಂತ ಒಳ್ಳೆಯ ಹಾಗೂ ಸೂಕ್ಷ್ಮ ಬರಹಗಾರರಾಗಿದ್ದು ಒಂದು ಆನಂದದ ಸಂಗತಿ ಹಾಗೂ ಅದು ವೇದಿಕೆಯ ಹೆಮ್ಮೆ ಎಂದರೆ ತಪ್ಪಾಗಲಾರದು. ಈ ಲೇಖನ ಕೂಡ ವಿಷಯದ ಎಲ್ಲಾ ಆಯಾಮಗಳನ್ನು ಕೂಲಂಕುಶವಾಗಿ ಚರ್ಚಿಸಿದೆ. ಈ ಒಂದು ವಿವಾಹ ಪೂರ್ವ ಛಾಯಾಗ್ರಹಣ ಬರಿ ಹುಚ್ಚು, ಶೋಕಿ ಎಂದುಕೊಂಡಿದ್ದ ನನಗೂ ಈ ಲೇಖನ ಓದಿದ ಮೇಲೆ ತಿಳಿದಿದ್ದು ಇದಕ್ಕೂ ಒಂದು ಧನಾತ್ಮಕ ಕಾರಣ ಇದೆ ಎಂದು. ಅದೇ ಹೊಸ ಹುಡುಗ ಹುಡುಗಿ ಒಬ್ಬರನ್ನು ಒಬ್ಬರು ಅರಿಯಲು, ಭಾವನಾತ್ಮಕವಾಗಿ ಬರೆಯಲು, ಅಬ್ಬ ಅದ್ಭುತ ಕಲ್ಪನೆ. ಅಂತೂ ಹೊಸ ಕಾಲದ ಹೊಸ ವರಸೆ. ಲೇಖನ ಅತ್ಯಂತ ಲವಲವಿಕೆಯಿಂದ ಓದಿಸಿಕೊಂಡು ಹೋಗುತ್ತದೆ. ಎಂದಿನಂತೆ ಶಾಸ್ತ್ರಿಗಳ ಬರವಣಿಗೆಯಲ್ಲಿ ನವಿರಾದ ಹಾಸ್ಯ ಮನಸ್ಸಿಗೆ ಮುದ ನೀಡುತ್ತದೆ.

ಮುಂದಿನ ಪ್ರಸ್ತುತಿ ನಾಗರತ್ನ ಚಂದ್ರಶೇಖರ್ ಅವರ "ಒಲೆ ಚಹಾ ಮತ್ತು ಮನಸ್ಸು" ಹಾಗೂ "ಗಿಣರಾಮ...ಏನು ಸಮಾಚಾರ?"

ನಾಗರತ್ನ ಮೇಡಂ ಅವರ ಬರೀ ಹಾಸ್ಯ ಸಾಹಿತ್ಯವನ್ನೇ ಓದಿದ್ದ ನನಗೆ ಒಲೆ ಚಹಾ ಮತ್ತು ಮನಸ್ಸು ಒಂದು ಧನಾತ್ಮಕ ಆಘಾತವನ್ನು ನೀಡಿತು . ಯಾಕೆಂದರೆ ಒಲೆ ಚಹಾ ಅಂದೊಡನೆ ಚಹಾ ಪ್ರಿಯನಾದ ನಾನು ಏನಾದರೂ ಹೊಸ ಮಾಹಿತಿ ಸಿಗಬಹುದು ಎಂದು ಕಾಯುತ್ತಿದ್ದೆ. ಆದರೆ ಬರವಣಿಗೆಯಲ್ಲಿ

ನೋಡಿದರೆ ಈ ಚಹಾದ ಒಳಗೆ ಒಂದು ದೊಡ್ಡ ಬಾಂಬನ್ನೇ ಹಾಕಿದ್ದಾರೆ. ಅತ್ಯಂತ ಬಿಗುವಾಗಿ ಹೆಣೆಯಲ್ಪಟ್ಟ ಪದ್ಯ. ಅವರ ಕಾವ್ಯ ಸೃಷ್ಟಿಯ ಇನ್ನೊಂದು ಮುಖವನ್ನು ನಮಗೆಲ್ಲ ತೋರಿಸುತ್ತದೆ. ಕಾವಿಯೊಳಗೆ ಕಾಮಿಯ ಕ್ರೌರ್ಯ ಕಂಡಾಗ ಉರಿಯದಿರದೆ ಮನಸ್ಸು. ಇದೊಂದು ಉದಾಹರಣೆ ಸಾಕು ಪದ್ಯದ ಅತ್ಯಂತ ನವಿರಾದ ಪದಪುಂಜಗಳ ಜೋಡಣೆ ಹೇಳಲು. ಒಟ್ಟು ಜಡಗಟ್ಟಿದ ಮನಕ್ಕೆ ಕಿಚ್ಚು ಹಚ್ಚುವ ಪದ್ಯ. ಆದರೆ ಕೊನೆ ಮಾತ್ರ ನಿರಾಶೆಯಲ್ಲಿದೆ. ಅದು ಆಶಾವಾದ ವಾಗಿದ್ದರೆ ಚೆನ್ನಾಗಿತ್ತು. ಇನ್ನು ಅವರ ಗಿಳಿರಾಮ ಏನು ಸಮಾಚಾರ ಎಂದಿನಂತೆ ಅವರ ಹಾಸ್ಯ ಬರಹವಾಗಿದೆ. ಕೇವಲ ರೂಪಕಗಳಲ್ಲಿ ಹಲವಾರು ವಿಷಯಗಳನ್ನು ಬಯಲಿಗೆಳೆದಿದ್ದಾರೆ. ಸನ್ಯಾಸಿಗೂ ಸಾಮ್ರಾಟನಿಗೂ ಜೇಲೂಟವೇ ಗತಿ ಎಂದು ಓದಿದಾಗ ಸನ್ಯಾಸಿ ಯಾರು ಸಾಮ್ರಾಟ ಯಾರು ಎಂದು ಓದುಗ ತಿಳಿದಿದ್ದರೆ ಕವಿಯ ಬರಹ ಸಾರ್ಥಕ. ಅದು ಕೊಡುವ ಕಚಗುಳಿ ನಿರಂತರ.

ಮುಂದಿನ ಪ್ರಸ್ತುತಿ ಕೆಎಸ್ ಮಹಾಬಲ ಅವರ "ನಿವೃತ್ತರು."

ಮಹಾಬಲ ಅವರ ಬರವಣಿಗೆ ತುಂಬಾ ಸರಳ ಹಾಗೂ ಸುಂದರ ಮತ್ತು ಮನಕ್ಕೆ ನಾಟುವ ಹಾಗಿರುತ್ತದೆ. ನಿವೃತ್ತರಲ್ಲೂ ಹಾಗೆ. ಮೂರು ಜನ ನಿವೃತ್ತರು ಒಂದಾಗಿ, ಕಷ್ಟ ಸುಖ ಹಂಚಿಕೊಂಡು ಸುಮ್ಮನೆ ಕಾಲ ಕಳೆಯಲು ಸೇರಿದವರು, ಒಂದು ಅರಿಯದ ಸ್ನೇಹ ಜಾಲದಲ್ಲಿ ಸಿಗುತ್ತಾರೆ. ಅನುಕೂಲಸ್ತರು, ಕಷ್ಟದಲ್ಲಿರುವವರ ಭಾಷೆ ಅರಿಯಲಾರರು. ಅದೇನಿದ್ದರೂ ತಟ್ಟುವುದು ಅವರಂತೆ ಕಷ್ಟದಲ್ಲಿರುವವರಿಗೆ ಮಾತ್ರ. ಶ್ರೀಪಾದರಾಯರು ಸ್ತಿತಿವಂತರಾದರೂ, ಅವರ ಮುಂದೆ ಕೈಯೊಡ್ಡಿ ಬೇಡಿದವನ ದುಃಖವನ್ನು ಅರಿಯದೆ ದೊಡ್ಡಸ್ತಿಕೆಯಿಂದ ಮೆರೆಯುತ್ತಾರೆ. ಆದರೆ ಅದೇ ಸಣ್ಣ ಪಿಂಚಣಿಯಲ್ಲಿ ಜೀವನ ನಡೆಸುವಂತಹ ಅವನಿಗೆ ನೂರು ರೂಪಾಯಿ ಕೊಟ್ಟು ಮಾನವತೆಯಿಂದ ಮೆರೆಯುತ್ತಾರೆ. ಚಿಕ್ಕ ಚೊಕ್ಕ ಸಂದೇಶವುಳ್ಳ ಕಥೆ. ಸೊಗಸಾಗಿದೆ.

ಮುಂದಿನ ಪ್ರಸ್ತುತಿ ಸುಜಾತ ರವೀಶ್ ಅವರ "ಲಾಲಿ /ಜೋಗುಳ"

ಮಕ್ಕಳನ್ನು ಮಲಗಿಸುವುದು, ನಿದ್ದೆಗೆ ಜಾರಿಸುವುದು ಒಂದು ಕಲೆ. ಅದು ಅಷ್ಟು ಸುಲಭದ ಮಾತಲ್ಲ. ಅದಕ್ಕೆ ಪೂರಕವಾಗಿ ಸಹಾಯ ಮಾಡುವುದು ಲಾಲಿ ಅಥವಾ ಜೋಗುಳ. ಆ ಬಗ್ಗೆ ಲೇಖನ ಬರೆದಿರುವ ಸುಜಾತ ಅವರು ಜೋಗುಳದ ಬಗ್ಗೆ ಅನೇಕ ವಿಷಯಗಳ ಪರಿಚಯ ನೀಡಿದ್ದಾರೆ. ದಾಸರ ಪದಗಳು, ಜಾನಪದ ಗೀತೆಗಳು, ಚಿತ್ರಗೀತೆಗಳು, ಜೊತೆಗೆ ತಾಯಿಗೆ ಜೋಗುಳ ಹಾಡುವ ವಿಶೇಶ ಗೀತೆಗಳು ಹೀಗೆ ಹತ್ತು ಹಲವಾರು ಲಾಲಿಗಳ ಹುಡುಕಿ ತೆಗೆದು ನಮಗೆ ತಿಳಿಸಿದ್ದಾರೆ. ಲೇಖನ ಮಾಹಿತಿ ಪೂರ್ಣವಾಗಿದೆ. ಇದು ನಿಂತೇ

ಹೋದಿತೆ ಎಂಬ ಚಿಂತೆ ಕೂಡ ಇದೆ.

ಮುಂದಿನ ಪ್ರಸತಿ ಮಾಧುರಿ ಕೃಷ್ಣ ಅವರ "ಕೋಟೇಶ್ವರ ಜಾತ್ರೆ."

ಹಳೆ ನೆನಪು ಯಾರಿಗೆ ಸಿಹಿ ಅಲ್ಲ ಹೇಳಿ? ಹಳೆಯ ಸ್ನೇಹ, ಸಿಟ್ಟು, ಸೆಡವು, ಕುಹಕ ಎಲ್ಲ ಈಗ ಕಪ್ಪು ಬಿಳಿ ಬಣ್ಣದ ಫೋಟೋವಿನಂತೆ ಮನಸ್ಸಿಗೆ ಆತ್ಮೀಯವಾಗುತ್ತದೆ. ಇಲ್ಲಿ ಮಾಧುರಿಯವರು ತಮ್ಮ ಕಾಲೇಜು ಜೀವನದಲ್ಲಿ ನಡೆದ ಘಟನೆಯನ್ನು ಆಧರಿಸಿ ಪ್ರಬಂಧವನ್ನು ರಚಿಸಿದ್ದಾರೆ. ಹಳೆಯ ಮಿತ್ರನ ಜೊತೆ ಮಾತಾಡುತ್ತಾ ಹಳೆಯ ನೆನಪುಗಳನ್ನು ಮೆಲುಕು ಹಾಕುವ ಕಥೆ ಸರಳವಾಗಿ ಓದಿಸಿಕೊಂಡು ಹೋಗುತ್ತದೆ. ಜೊತೆಗೆ ಕುಂದಾಪುರ ಕನ್ನಡವನ್ನು ಅರಿಯುವ ಆಸೆಯನ್ನು ಮನಸ್ಸಿನಲ್ಲಿ ಮೂಡಿಸುತ್ತದೆ. ಆದರೆ ಕೆಲವೊಂದು ಘಟನೆಗಳು ಹಿಂದೂ ಮುಂದಾದಂತೆ ಕಾಣಬರುತ್ತವೆ. ಎರಡು ಬಾರಿ ಓದಿದಾಗ ಅರ್ಥವಾಗುತ್ತದೆ.

ಮುಂದಿನ ಪ್ರಸ್ತುತಿ ಶಾಂತಿ ವಾಸು ಅವರ "ಹೆಸರು ಬೇಕೆ ಇದಕ್ಕೆ?"ಕವನ.

ಮನದ ಅಹಂಕಾರವನ್ನು ಗುರಿಯಾಗಿಟ್ಟುಕೊಂಡು ಅದರ ಹೆಸರು ಹೇಳದೆ ಓದುಗನಿಗೆ ಊಹಿಸಲು ಬಿಟ್ಟು ಶಾಂತಿ ಅವರು ಬಹು ಗಟ್ಟಿಯಾದ, ಅರ್ಥಗರ್ಭಿತವಾದ ಪದ್ಯವನ್ನು ಕಟ್ಟಿದ್ದಾರೆ. ನನಗೆ ಅಹಂಕಾರ, ಅಹಂ ಎನಿಸಿದಂತೆ ಉಳಿದವರಿಗೆ ಅವರ ಅನುಭವದ ಮೂಸೆಯಲ್ಲಿ ಬೇರೊಂದು ಭಾವ ಸ್ಫುರಿಸಬಹುದು. ಇಡೀ ಕವನದಲ್ಲಿ ಭಾವವನ್ನು ಹೆಸರಿಸದೆ ಅತ್ಯಂತ ವಿಶಿಷ್ಟ ಕೆಲಸ ಮಾಡಿದ್ದಾರೆ. ವಿಚಾರ ಶಕ್ತಿಗೆ ಚುರುಕು ಮುಟ್ಟಿಸುವ ಕವನ.

ಮುಂದಿನ ಪ್ರಸ್ತುತಿ ಮಾಲತಿ ಶ್ರೀನಿವಾಸ್ ಅವರ "ಯಾರಿವರು" ಕವನ

ಮಾಲತಿಯವರೇ ನಿಮ್ಮ ಕವನಗಳನ್ನು ಓದಿದ್ದೀನಿ ಆದರೆ ನೀವು ಇಷ್ಟು ಚೆನ್ನಾಗಿ ಬರೆಯುತ್ತೀರಿ ಅಂತ ಗೊತ್ತಿರಲಿಲ್ಲ. ನಿಮ್ಮ ಶಬ್ದ ಲಾಲಿತ್ಯಕ್ಕೆ ಯಾರಾದರೂ ಸರಿ, ತಲೆ ಆಡಿಸಲೇಬೇಕು. ಆದರ್ಶದಲ್ಲಿ ಬದುಕುವ ಜನರ ಬಗ್ಗೆ ಬರೆದಿದ್ದೀರಿ. ಯಾರಿವರು ಅಂತ. ನನಗೂ ಗೊತ್ತಿಲ್ಲ. ನಿಮಗೆ ಅಂಥವರು ಯಾರಾದರೂ ಸಿಕ್ಕರೆ ತಿಳಿಸಿ. ಎರಡನೇ ಕವನ ಜೀವನದ ಗಮ್ಮತ್ತು.60ರ ನಂತರ ಜೀವನ ಹೇಗಿರಬೇಕು ಎಂದು ತಿಳಿಸಿದ್ದೀರಿ. ಕಮಲ ಪತ್ರದ ಮೇಲಿನ ನೀರ ಹನಿಯಂತೆ ಇರಿ ಎಂದಿದ್ದೀರಿ. ಪ್ರೀತಿ ಪ್ರೇಮ ವಾತ್ಸಲ್ಯ ಎಲ್ಲವೂ ಇದ್ದರೂ ಇರದಂತೆ ಇರಿ ಎಂದಿದ್ದೀರಿ. ಎಲ್ಲರಿಗೂ ಪಾಠವಾಗುವ ಎಲ್ಲರಿಗೂ ಗೊತ್ತಿರುವ ಸತ್ಯವನ್ನು ಕವನದಲ್ಲಿ ಅಂದವಾಗಿ ಕಟ್ಟಿಕೊಟ್ಟಿದ್ದೀರಿ. ಧನ್ಯವಾದಗಳು.

ಮುಂದಿನ ಪ್ರಸ್ತುತಿ, ಸುವರ್ಣ ಲಕ್ಷ್ಮಿ ಅವರ ಶಿವಾಜಿ ಸ್ಪೂರ್ತಿ ಕೇಂದ್ರ ಶ್ರೀಶೈಲಂ

ಈ ಸ್ಪೂರ್ತಿ ಕೇಂದ್ರದ ಜನನ ಹಾಗೂ ಅದರ ವಿವರ ಮತ್ತು ಅದರ ಸೊಗಸನ್ನು ಮನಮುಟ್ಟುವಂತೆ ವರ್ಣಿಸಿದ್ದೀರಿ. ಅಲ್ಲಿನ ವಾತಾವರಣ ಹಾಗೂ ಪರಿಸರದ ಅಂದವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದೀರಿ. ಇದು ಓದಿದ ನಂತರ ಒಮ್ಮೆಯಾದರೂ ಶಿವಾಜಿ ಸ್ಪೂರ್ತಿ ಕೇಂದ್ರವನ್ನು ನೋಡಬೇಕೆನ್ನುವ ತವಕ ಎಲ್ಲರ ಮನದಲ್ಲಿ ಮೂಡುವುದು ಖಂಡಿತ. ಆದರೆ ಬರಹದಲ್ಲಿ ಶಿವಾಜಿ ಹಾಗೂ ಅವರ ತಾಯಿಯ ಬಗ್ಗೆ ಪುರಾಣದಲ್ಲಿ ಬಂದಿದೆ ಎಂದು ಬರೆದಿದ್ದೀರಿ. ಈ ವಾಕ್ಯವನ್ನು ಸ್ವಲ್ಪ ತಿದ್ದುಪಡಿ ಮಾಡಬೇಕಾಗಿ ನನ್ನ ವಿನಂತಿ.

ಮುಂದಿನ ಪ್ರಸ್ತುತಿ ಅನ್ನಪೂರ್ಣ ಅವರ ಕಥೆ "ಕರುಳು".

ಇದೊಂದು ಮನಸ್ಪರ್ಶಿ, ಮನ ಕರಗುವ ಕಥೆ. ಕುಮಾರವ್ಯಾಸನ ಕಣ್ಣರಿಯದಿರೆ ಕರುಳರಿಯದೆ ಎಂಬ ವಾಕ್ಯವನ್ನು ನೆನಪಿಗೆ ತರುತ್ತದೆ. ವಾಣಿ ಮನಸ್ಸಿಗೆಕೋ ಕಸಿವಿಸಿ ಎಂದು ಆರಂಭವಾಗುವ ಕಥೆ ಮನೆಯಲ್ಲಿ ಮನೆ ಒಡತಿಯು ಸಾಕಿದ ಹಸು ಸತ್ತು ಹೋಯಿತು ಎದ್ದು ಗೊತ್ತಾದಾಗ ಅದನ್ನು ಆದರ ಅಕ್ಕರೆಯಿಂದ ಸಾಕಿದ ವಾಣಿ ಕೂಡ ಹಸುವಿನ ಜೊತೆಗೆ ಇಹಲೋಕ ಯಾತ್ರೆ ಮುಗಿಸುತ್ತಾಳೆ. ಕಥೆ ಸಣ್ಣದಿದ್ದರೂ ಓದುಗನನ್ನು ಭಾವನಾತ್ಮಕವಾಗಿ ಬಂಧಿಸಿರುವಲ್ಲಿ ಯಶಸ್ವಿಯಾಗುತ್ತದೆ ಮನುಷ್ಯ ಹಾಗೂ ಪ್ರಾಣಿಗಳ ಮಧ್ಯೆ ಯಾವಾಗಲೂ ಅವಿನಾವ ಸಂಬಂಧವಿದೆ ಅದರ ಒಂದು ನೋಟವೇ ಈ ಕಥೆ.

ಮುಂದಿನ ಪ್ರಸ್ತುತಿ ಪ್ರಮೋದಾಮೂರ್ತಿಯವರ ಜಾಗರಣೆ ಪದ್ಧತಿ

ಪ್ರಮೋದಮೂರ್ತಿ ಅವರು ದೇವಾಲಯದ ವಾತಾವರಣವನ್ನು ನವಿರಾಗಿ ಚಿತ್ರಿಸಿದ್ದಾರೆ. ಶಿವರಾತ್ರಿಯಂದು ಶಿವನನ್ನು ಕಾಣುವುದೇ ಶಿವಭಕ್ತರ ಆದ್ಯತೆ. ಆದರೆ ನಂತರ ನಡೆಯುವುದು ಓದುತ್ತ ಓದುತ್ತ ಮುಂದೇನು ಮುಂದೇನು ಎಣಿಸುವಂತೆ ಮಾಡುತ್ತದೆ. ವಯಸ್ಸಾದವರ ಒಂದು ರೀತಿಯ ಏಕತಾನತೆಯನ್ನು ತೆರೆದಿಡುತ್ತದೆ.

ಮುಂದಿನ ಪ್ರಸ್ತುತಿ ಶ್ರೀಧರ ಬಾಣಾವರ ವ್ಯಕ್ತಿತ್ವ ಹಾಗೂ ಅದರ ಹಿರಿಮೆ.

ಇದನ್ನು ಓದಿದಾಗ ನನಗೆ ಶ್ರೀಯುತ ರಾಬಿನ್ ಶರ್ಮ ಅವರ ಮಾಸ್ಟರಿ ಮ್ಯಾನುಯೆಲ್ ಪುಸ್ತಕದ ನೆನಪಾಯಿತು. ಶ್ರೀಧರ್ ಅವರು ಅತ್ಯಂತ ಸಹಜವಾಗಿ

ವ್ಯಕ್ತಿತ್ವವನ್ನು ಗಳಿಸಿಕೊಳ್ಳುವ ಉಳಿಸಿಕೊಳ್ಳುವ ಹಾಗೂ ಬೆಳೆಸಿಕೊಳ್ಳುವ ಪರಿಯನ್ನು ಚೆನ್ನಾಗಿ ವಿವರಿಸಿದ್ದಾರೆ. ಅದರಲ್ಲೂ ನಾವು ಎಲ್ಲರೂ ಕೂಡಿ ಕೆಲಸ ಮಾಡಬೇಕಾದ ಪರಿಸ್ಥಿತಿಯಲ್ಲಿ ನಮ್ಮ ವ್ಯಕ್ತಿತ್ವವನ್ನು ಒರಗೆ ಹಚ್ಚಬೇಕಾದ ಪರಿಸ್ಥಿತಿ ಬಂದಾಗ ವ್ಯಕ್ತಿತ್ವವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂದು ವಿವರಿಸಿದ್ದಾರೆ. ಕಚೇರಿಗೆ ಹೋಗುವ ಎಲ್ಲರಿಗೂ ಇದೊಂದು ಅತ್ಯುತ್ತಮ ಲೇಖನ.

ಮುಂದಿನ ಪ್ರಸ್ತುತಿ ಶ್ರೀವಿಜಯಕುಮಾರ್ ಅವರ "ನವ ಪಲ್ಲವಿ" .

ಕವಿ, ನವ ಭಾರತದ ನಿರ್ಮಾಣಕ್ಕೆ ನಾವೆಲ್ಲರೂ ತ್ಯಾಗ ಮಾಡಿ ಈ ದೇಶವನ್ನು ಬಲಗೊಳಿಸಬೇಕು ಎಂದಿದ್ದಾರೆ. ಎಲ್ಲರೂ ದೇಶಕ್ಕಾಗಿ ಒಮ್ಮತದಿಂದ ದುಡಿದಾಗ ಈ ದೇಶದ ಭವಿಷ್ಯ ಉಜ್ವಲವಾಗುವುದು ಎಂಬುದು ಕವನದ ಸಾರ. ಕವನ ಬರೆಯುವುದರೊಂದಿಗೆ ಅದನ್ನು ಹಾಡಿ ಪ್ರಸ್ತುತಪಡಿಸಿ ಕವನದ ಗರಿಮೆಯನ್ನು ಇನ್ನೂ ಹೆಚ್ಚಿಸಿದ್ದಾರೆ. ವಿಜಯಕುಮಾರ್ ಅವರ ಗಾಯನ ಚೆನ್ನಾಗಿತ್ತು.

ಮುಂದಿನ ಪ್ರಸ್ತುತಿ ಜಿ.ವಿ. ಅರುಣ್ ಅವರ "ಬನ್ನಿ ಪಣತೊಡೋಣ" ಲೇಖನ.

ಅರುಣ್ ಸರ್ ಅವರ "ಬನ್ನಿ ಪಣತೊಡೋಣ" ಲೇಖನ ಒಂದು ಸಕಾಲಿಕ ಲೇಖನ. ಎಲ್ಲರೂ ತೊಡಲೇಬೇಕಾದ ಪಣದ ಬಗ್ಗೆ ಅವರು ಬರೆದಿದ್ದಾರೆ. ಈಗ ಎಲ್ಲಕ್ಕಿಂತ ನಮ್ಮ ಮುಖ್ಯ ಕರ್ತವ್ಯ ಎಂದರೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ಮತ ಚಲಾವಣೆ. ಹೌದು, ಇದು ಇಂದು ನಮ್ಮ ಹಾಗೂ ನಮ್ಮ ಕುಟುಂಬದ ಆದ್ಯತೆಯು ಕೆಲಸ ಆಗಿರಬೇಕಾಗಿದೆ. ದೇಶದ ಜವಾಬ್ದಾರಿಯುತ ನಾಗರೀಕನಾಗಿ ನಾವು ಮಾಡಬೇಕಾದ ಕರ್ತವ್ಯದ ಬಗ್ಗೆ ಶ್ರೀ ಅರುಣ್ ಅವರು ಸವಿವರವಾಗಿ ಬರೆದಿದ್ದಾರೆ. ಗಾಂಧೀಜಿ ಹೇಳುವಂತೆ ಹಿಂಸೆಯನ್ನು ನೋಡಿ ಸುಮ್ಮನಿರುವುದು ಹಿಂಸೆಗೆ ಪ್ರಚೋದಿಸಿದಂತೆ ಎಂಬ ಮಾತಿನಂತೆ, ಕೆಟ್ಟ ಜನ ಅಧಿಕಾರಕ್ಕೆ ಬರುವುದನ್ನ ನೋಡಿಯೂ ಮತ ಚಲಾಯಿಸದೆ ಇರುವುದು, ಆ ಕೆಟ್ಟ ಜನರಿಗೆ ಪರೋಕ್ಷವಾಗಿ ಸಹಾಯ ಮಾಡಿದಂತೆಯೇ ಸರಿ. ಅದಕ್ಕೆ ಎಲ್ಲರೂ ಪಣತೊಡೋಣ ನಾವು ಮತ ಚಲಾಯಿಸುತ್ತೇವೆ ಹಾಗೂ ಉಳಿದವರಿಂದಲೂ ಮತ ಚಲಾಯಿಸಲು ಒತ್ತಾಯಿಸುತ್ತೇವೆ ಎಂದು. ಅಧ್ಭುತ ಸಂದೇಶ ಉಳ್ಳ ಸಕಾಲಿಕ ಬರಹ.

ಮುಂದಿನ ಪ್ರಸ್ತುತಿ ಕೆ ಆರ್ ಎಸ್ ಮೂರ್ತಿಯವರ "ಬೇಸರ" ಮತ್ತು "ಹೆತ್ತವ್ವ"

ಬೇಸರದಲ್ಲಿ ಕವಿ ನಿತ್ಯದ ಕೋಟಲೆ, ಹಿಂಸೆ, ಭ್ರಷ್ಟಾಚಾರ, ರಾಜಕೀಯ ದೊಂಬರಾಟ ಇವುಗಳಿಂದ ಬೇಸರಗೊಂಡು, ರಾತ್ರಿಯಾದಂತೆ ಕನಸಿನ ಲೋಕದಲ್ಲಿ ಹಳೆಯ ದಿನಗಳ ಖುಷಿ ಅನುಭವಿಸುತ್ತಾನೆ.

ಹೆತ್ತವ್ವನಲ್ಲಿ ಹೆತ್ತ ತಾಯಿಯ ಬಗ್ಗೆ ಮೂರ್ತಿಯವರು ಅತ್ಯಂತ ಸೂಕ್ಷ್ಮವಾಗಿ ಬರೆದಿದ್ದಾರೆ. ಮೂರ್ತಿಯವರ ಶಬ್ದ ಭಂಡಾರ ಹಾಗೂ ತಾಯಿಯ ಶ್ರೇಷ್ಠತೆ ಎರಡನ್ನೂ ಈ ಕವನ ಎತ್ತರಕ್ಕೇರಿಸುವಲ್ಲಿ ಯಶಸ್ವಿಯಾಗಿದೆ. ತಾಯಿ ನೀಡಿದ ಜೀವ, ಕರುಣೆ, ಅದೃಷ್ಟ, ಕಲಿಸಿದ ವಿದ್ಯೆ ಇತ್ಯಾದಿಗಳಿಗಾಗಿ ತಾಯಿಗೆ ಕವಿ ವಂದಿಸುತ್ತಾರೆ. ತಾಯಿಯ ಬಗ್ಗೆ ಒಂದು ಮನ ಮಿಡಿವ ಕವನ.

ಮುಂದಿನ ಪ್ರಸ್ತುತಿ ರಾಧಿಕಾ ವಿ ಗುಜ್ಜರವರ "ಬೇಸಿಗೆಯ ಗೆಳತಿ ನಸು ಹಳದಿ ಸುಂದರಿ"

ತಲೆಬರಹ ಓದಿ ರಾಧಿಕಾ ಅವರು ಯಾವುದೋ ಸುಂದರಿಯ ಬಗ್ಗೆ ಹೇಳುತ್ತಿದ್ದಾರೆ ಎಂದು ನೀವು ಭಾವಿಸಿದಲ್ಲಿ ಅದು ತಪ್ಪು, ರಾಧಿಕಾ ಅವ್ರು ಹೇಳುತ್ತಿರುವುದು ಕಬ್ಬಿನ ಹಾಲಿನ ಬಗ್ಗೆ. ಕಬ್ಬಿನ ಹಾಲಿನ ಬಗ್ಗೆ ತುಂಬಾ ಚೆನ್ನಾಗಿ ಪದ್ಯ ಬರೆದಿದ್ದಾರೆ. ಅದು ಆರೋಗ್ಯಕ್ಕೆ ಒಳ್ಳೆಯದು ಮತ್ತು ದಣಿದ ದೇಹಕ್ಕೆ ಹಿತವಾದ ಅನುಭವ ಕೊಡುತ್ತದೆ ಎಂದಿದ್ದಾರೆ. ರಾಧಿಕಾ ಅವರ ವಾಕ್ ಚಾತುರ್ಯ ಹಾಗೂ ಅನುಭವ ವಿಸ್ತಾರ ವಿಷಯ ಒಂದರ ಬಗ್ಗೆ ವಿವಿಧ ಸ್ತರಗಳಲ್ಲಿ ಹೇಳುವ ಅವರ ಪ್ರಾವೀಣ್ಯತೆ ಬೆಳಕಿಗೆ ಬಂದಿದೆ. ಒಂದು ಸಾಮಾನ್ಯ ಸಂಗತಿಯನ್ನು ಅತ್ಯಂತ ವೈಭವದಿಂದ ಹೇಳಿದ್ದೀರಿ ಕವನ ಓದಿ ಮುಗಿಸಿದಾಗ ಕಬ್ಬಿನ ಹಾಲು ಕುಡಿದಷ್ಟೇ ಮನಸು ತಣ್ಣಗಾಗುತ್ತದೆ

ಮುಂದಿನ ಪ್ರಸ್ತುತಿ ಶ್ರವಣಕುಮಾರಿಯವರ "ಒಂದು ಸ್ವಗತ"

ನಮ್ಮ (ವಾಟ್ಸ್ಯಾಪ್) ಸಾಹಿತ್ಯದ ಗುಂಪಿನಲ್ಲಿ ಕಥೆಗಳಿಗೆ ಬರಹಗಳಿಗೆ ಮೊದಲು ಪ್ರಶಸ್ತಿಯನ್ನು ಪಡೆದವರು ಶ್ರೀಮತಿ ಶ್ರವಣಕುಮಾರಿಯವರು. ಅತ್ಯಂತ ಆಪ್ತವಾಗಿ ಮತ್ತು ಅಷ್ಟೇ ಸಹಜವಾಗಿ ಬರೆಯುವುದು ಶ್ರವಣಕುಮಾರಿ ಅವರ ಬರಹದ ಲಕ್ಷಣ. ಒಂದು ಸ್ವಗತ ಕೂಡ ಅದೇ ರೀತಿ ಅತ್ಯಂತ ಕುತೂಹಲಕಾರಿಯಾಗಿ ಸಾಗುತ್ತದೆ. ಒಬ್ಬ ರೋಗಿ ತನ್ನ ರೋಗದ ನೋವನ್ನು ಬದಿಗಿಟ್ಟು, ರೋಗವನ್ನು ನರ್ತನವೆಂಬಂತೆ ಅನುಭವಿಸಿ ಬರೆದಂತಿದೆ ಈ ಲೇಖನ. ಔಷಧಿ ಅಂಗಡಿಯವನು ಸಂತೋಷಕ್ಕೆ ಇವರ ಆರೋಗ್ಯವೇ ಆಹಾರ.

ಅವನು ನಗುನಗುತ್ತಾ ಕಟ್ಟಿಕೊಟ್ಟ ಔಷಧಿಗಳ ಪಟ್ಟಣ ಅವನಿಗೆ ಖುಷಿ ಕೊಟ್ಟರೂ ಅದುವಿವರಿಗೆ ಅವಶ್ಯವಾದರೂ ಇವರ ಜೀವನಕ್ಕೆ ಕತ್ತಲೆ. ಆದಾಗಿಯೂ ಶ್ರವಣಕುಮಾರಿಯವರು ಆ ಘಟನೆಗಳನ್ನ ತುಸು ಹಾಸ್ಯದೊಂದಿಗೆ ಎಲ್ಲ ವಿವರಗಳನ್ನು ದಾಖಲಿಸುತ್ತಾರೆ. ಡಾಕ್ಟರ್ ಹಾಗೂ ನರ್ಸುಗಳ ಮಧ್ಯೆ ಇದ್ದರೂ ಶ್ರವಣಕುಮಾರಿಯವರು ಯಮನನ್ನು ಗೇಲಿ ಮಾಡುವುದನ್ನು ನಿಲ್ಲಿಸುವುದಿಲ್ಲ. ಆಸ್ಪತ್ರೆಯ ಬಳಿ ಬಂದ ಯಮನನ್ನು ಡಾಕ್ಟರ್ ಹಾಗೂ ನರ್ಸ್ಗಳಿಂದ ಬೈಯಿಸಿ ದೂರ ಓಡಿಸುತ್ತಾರೆ. ಈ ರೀತಿರೋಗಿ ಒಬ್ಬ ತನ್ನ ದೇಹದ ನೋವನ್ನು ಬದಿಗಿರಿಸಿ ಕವಿಯಾಗಿ ತನ್ನ ಸುತ್ತಮುತ್ತಲು ನಡೆಯುವ ಘಟನೆಗಳನ್ನು ಒಂದೊಂದಾಗಿ ಸ್ವಾರಸ್ಯಕರವಾಗಿ ಪೋಣಿಸಿ ಓದುಗನ ಮುಂದೆ ಇಡುವುದು ಬರೀ ಶ್ರವಣಕುಮಾರಿಯವರಿ ಅವರಿಗೆ ಮಾತ್ರ ಸಾಧ್ಯ.

ಇಲ್ಲಿವರೆಗೆ ನಾನು, ದಾಸೋಹದಲ್ಲಿ ಪ್ರಸ್ತುತಪಡಿಸಿದ ಎಲ್ಲ ಬರಹಗಳ ಬಗ್ಗೆ ನನ್ನ ಅನಿಸಿಕೆಗಳನ್ನು ಹಂಚಿಕೊಂಡಿದ್ದೇನೆ. ಸಾಹಿತ್ಯದಲ್ಲಿ ಅಷ್ಟೇನೂ ಹೆಚ್ಚಿನ ಕೃಷಿ ಮಾಡದ ನನಗೆ ಅಧ್ಯಕ್ಷ ಪೀಠವನ್ನು ಕೊಟ್ಟು ಒಂದು ಅನುಭವವನ್ನು ಕೊಟ್ಟ ದಾಸೋಹ ಸಮಿತಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.